KA / BG-GPO / 2515 / WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೬ | ಬೆಂಗಳೂರು, ಗುರುವಾರ, ಆಗಸ್ಟ್ ೨೫, ೨೦೧೧, (ಭಾದ್ರಪದ ೩, ಶಕ ವರ್ಷ ೧೯೩೩) | ಸಂಚಿಕೆ ೩೪ |
|---|---|---|

## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### INFRASTRUCTURE DEVELOPMENT SECRETARIAT

**Sub :-** Construction of new Railway line between Kadur-Sakaleshpura via Chikmagalur.

**Read:-**
1. GO NO IDD 35 NSW 09 dated 24.04.2009
2. GO NO IDD 29 NSW 10 dated 1.6.2010
3. GO NO IDD 29 NSW 10 dated 4.12.2010
4. GO NO IDD 29 NSW 2010 dated 09.02.2011
5. Letter No.W63/CN/BNC/MR/B/GL Dated 31.03.2011 from CE/CN/East/SWR, Bangalore.

**Preamble:**

In G.O read at (1) above, Government of Karnataka decided to take up the balance work of Kadur – Sakaleshpura (via-Chikmagalur) railway project on (50 : 50 sharing between Gok & Railway). This project was sanctioned during April 1999 and the total length of the project is 93 Kms & cost of the project is Rs. 256.17 crore. Th expenditure so far is Rs. 82.28 Crore, the project is being taken up from 2010-11 onwards on cost sharing basis between railways and GoK from 2010-11.

2. In the G.O read at Sl.No.(2) & (4) above the State Government has released an amount of Rs 40.00 crore towards the share of the State Government for Kadur – Sakaleshpura via Chikmagalur railway project.

3. The Chief Engineer, South Western Railway, Bangalore in his letter read at Sl.No.(5) above, has requested GOK to release an amount Rs. 20.00 crores

4. The proposal of Railways has been examined and it has been decided to release an amount of Rs.15.00 crore(Rupees fifteen crores only) out of the Budget of Rs. 256.52 crore provided under the Head of Account "5465-01-190-3-05"-211-(Plan) investment towards cost sharing for new railway projects during 2011-12.

5.Hence this Order.

**GOVERNMENT ORDER NO: IDD 29 NSW 2010, BANGALORE, DATED: 23-5-2011**

After careful examination of the request of Railways, Government is pleased to undertake the balance project work Kadur– Sakaleshpura via Chikmagalur on 50:50 cost sharing basis and to release an amount of Rs.15.00 crores (Rupees fifteen crores only) being the part of the share of GoK.

2. the expenditure shall be met under the Head of Account "5465-01-190-3-05" *211 (plan) investment* out of the budget provision Rs. 256.52 crores towards cost sharing for new railway projects during 2011-12.

3. Railway department should furnish the amount expended to the project and work completed or the utilization statement before seeking the next release.

4.The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore

5. This order is issued in accordance with the concurrence of Finance Department given vide U.O. Note. No. FD 840 Exp-1/2011 dated 18-05-2011.

By Order and in the name of Governor of Karnataka

**C.A.Baburavindranath Patel**

Under Secretary to Government,

Infrastructure Development Department.

P.R. 1346

## ಸಮಾಜ ಕಲ್ಯಾಣ ಸಚಿವಾಲಯ

**ವಿಷಯ** : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಟೆಂಡರು ಕರೆಯುವ ಪ್ರಾಧಿಕಾರ ಮತ್ತು ಟೆಂಡರು ಅಂಗೀಕರಿಸುವ ಪ್ರಾಧಿಕಾರಗಳನ್ನು ನೇಮಿಸುವ ಬಗ್ಗೆ

**ಉಲ್ಲೇಖ:** ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಹಿಂವಕನಿ/ ಸ–4/ಸಿಆರ್–1/2011–12, ದಿನಾಂಕ: 06.04.2011.

**ಪ್ರಸ್ತಾವನೆ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000ದಡಿಯಲ್ಲಿ ಟೆಂಡರುಗಳನ್ನು ಯಾವುದೇ ಕಾಮಗಾರಿಗಳು, ವಸ್ತುಗಳು ಮತ್ತು ಸೇವೆಗಳ ಖರೀದಿಗಾಗಿ ಟೆಂಡರು ಕರೆಯುವ ಪ್ರಾಧಿಕಾರ ಮತ್ತು ಟೆಂಡರು ಅಂಗೀಕರಿಸುವ ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರ ಹಾಗೂ ಟೆಂಡರು ಮೌಲ್ಯಮಾಪನ ಸಮಿತಿ ಇತ್ಯಾದಿಗಳನ್ನು ರಚಿಸಲು ಪ್ರಸ್ತಾವನೆ ಬಂದಿರುತ್ತದೆ. ಅದನ್ನು ಪರಿಶೀಲಿಸಿ, ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 123 ಬಿಎಂಎಸ್ 2011, ಬೆಂಗಳೂರು, ದಿನಾಂಕ: 10.05.2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000, ಕಲಂ 9 ರಡಿಯಲ್ಲಿ ಈ ಕೆಳಕಂಡ ಪ್ರಾಧಿಕಾರಗಳನ್ನು ನೇಮಿಸಲಾಗಿದೆ.

| ಕ್ರ. ಸಂ | ಪ್ರಾಧಿಕಾರದ ಹೆಸರು | ಅಧಿಕಾರಿಯ ಪದನಾಮ | ಹಣಕಾಸು ಸಮಿತಿ (ಟೆಂಡರ್ ಮೊತ್ತ) |
|---|---|---|---|
| 1. | ಟೆಂಡರು ಕರೆಯುವ ಪ್ರಾಧಿಕಾರ | ಜಂಟಿ ನಿರ್ದೇಶಕರು (ಆಡಳಿತ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಅನ್ವಯಿಸುವುದಿಲ್ಲ |
| 2. | ಟೆಂಡರು ಅಂಗೀಕರಿಸುವ ಪ್ರಾಧಿಕಾರ | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ರೂ. 1.00 ಕೋಟಿವರೆಗೆ |
| 3. | ಅಪೀಲು ಪ್ರಾಧಿಕಾರ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ | – |

ಟೆಂಡರ್ ಮೊತ್ತ ರೂ. ಒಂದು ಕೋಟಿ ಮೀರಿದಲ್ಲಿ, ಟೆಂಡರು ಅಂಗೀಕಾರ ಪ್ರಾಧಿಕಾರಿ/ಸಮಿತಿಯು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ಅಧಿಕಾರಿಗಳು | ಪದನಾಮ |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ಅಧ್ಯಕ್ಷರು |
| 2. | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು (ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ) | ಸದಸ್ಯರು |
| 4. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 5. | ಜಂಟಿ ನಿರ್ದೇಶಕರು (ಆಡಳಿತ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |

ಸಮಿತಿಯು ನೈಪುಣ್ಯತೆ / ತಾಂತ್ರಿಕ ಸದಸ್ಯರುಗಳು ಬೇಕಿದ್ದಲ್ಲಿ ಪ್ರತ್ಯೇಕವಾಗಿ ಆಯ್ಕೆ ಮಾಡಿಕೊಳ್ಳಬಹುದು.

ಇದೇ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000, ಕಲಂ–10ರಂತೆ ಟೆಂಡರು ಅಂಗೀಕರಿಸುವ ಪ್ರಾಧಿಕಾರವು, ಟೆಂಡರು ಮೌಲ್ಯ ರೂ.1.00 ಕೋಟಿಗಳನ್ನು ಮೀರಿದಲ್ಲಿ "ಮೌಲ್ಯಮಾಪನ ಸಮಿತಿ"ಯನ್ನು ರಚಿಸಲು ಅಧಿಕಾರ ಹೊಂದಿರುತ್ತದೆ. ಅದರಂತೆ ಟೆಂಡರು ಅಂಗೀಕರಿಸುವ ಪ್ರಾಧಿಕಾರಗಳು ಕ್ರಮ ತೆಗೆದುಕೊಳ್ಳಬಹುದು.

ಸದರಿ ಪ್ರಾಧಿಕಾರಗಳು ಯಾವುದೇ ಕಾಮಗಾರಿಗಳನ್ನು, ವಸ್ತುಗಳನ್ನು ಅಥವಾ ಸೇವೆಗಳನ್ನು ಪಡೆಯುವಲ್ಲಿ ಇದರಂತೆ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಂ. ಎಂ. ಭಾಟೆ**

ಸರ್ಕಾರದ ಅಧೀನ ಕಾರ್ಯದರ್ಶಿ–3

ಸಮಾಜ ಕಲ್ಯಾಣ ಇಲಾಖೆ

ಪಿ.ಆರ್ 1347

## ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

**ವಿಷಯ :** ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡವಿ ಮೋಟಾರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758ರ ರಸ್ತೆ ಕೆಳಸೇತುವೆ ಅಗಲೀಕರಣದ ಪೈಪ್‌ಲೈನ್‌ನ ಸ್ಥಳಾಂತರಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ

**ಓದಲಾಗಿದೆ:** ೧) ಸರ್ಕಾರದ ಆದೇಶ ಸಂಖ್ಯೆ. ಮೂಅಇ 65 ರಾರಾಹೆ 2005 ದಿನಾಂಕ 17.12.2008

೨) ದಿನಾಂಕ 9.3.2011 ಪತ್ರಸಂಖ್ಯೆ: ಸಂಕದ ಸೇಮ್ಯೆ:ಮೈಚಾ: ಆರ್ ಯು ಬಿ: 758: 2010–11ರ ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ, (ದ) ಬೆಂಗಳೂರು ಇವರ ಪತ್ರ.

**ಪ್ರಸ್ತಾವನೆ:**

೧. ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡವಿ ಮೋಟಾರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758 ರ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯನ್ನು ರೂ 12,03,94,955 ಗಳ ಸಂಕ್ಷಿಪ್ತ ಅಂದಾಜಿಗೆ ಮೇಲೆ ಓದಲಾದ (೧) ರ ಆದೇಶದಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ 3,34,80,979–00 ಗಳನ್ನು ಬಿಡುಗಡೆ ಮಾಡಲಾಗಿತ್ತು.

೨. ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡವಿ ಮೋಟಾರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758 ರ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಸದರಿ ಮಾರ್ಗದಲ್ಲಿ ಬರುವ ಪೈಪ್‌ಲೈನ್ ಸ್ಥಳಾಂತರಕ್ಕೆ ರೂ 162.30 ಲಕ್ಷಗಳನ್ನು ಅವಕಾಶ ಕಲ್ಪಿಸಲಾಗಿತ್ತು. ಸದರಿ ಪೈಪಲೈನ ಸ್ಥಳಾಂತರಕ್ಕೆ ಟೆಂಡರ್‌ನ್ನು ರೂ 135.25 ಲಕ್ಷಗಳಿಗೆ ಕರೆಯಲಾಗಿತ್ತು. ಆದರೆ ಸ್ಥಳ ಪರಿಶೀಲನೆಯ ನಂತರ ಕಾಮಗಾರಿಯನ್ನು ಕೈಗೊಳ್ಳುವ ಸಂದರ್ಭದ ಸ್ಥಳದಲ್ಲಿ ಹೆಚ್ಚಿನ ಆಳದಲ್ಲಿ ಕೊಳವೆಗಳನ್ನು ಅಳವಡಿಸಬೇಕಾಗಿರುವುದರಿಂದ ಮಣ್ಣು ಅಗೆತದ ಐಟಂ ಕಾಮಗಾರಿಯು ಅನುಮೋದಿತ ಹಾಗೂ ಗುತ್ತಿಗೆ ಕರಾರು ಪ್ರಕಾರ ಅನುವುಗೊಳಿಸಿರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣವಾಗಿದ್ದರಿಂದ ಮತ್ತು ಕಾಮಗಾರಿಯನ್ನು ದಸರಾ ಉತ್ಸವ ವೇಳೆಗೆ ಪೂರ್ಣಗೊಳಿಸಬೇಕಿದ್ದ ಕಾರಣ ವರ್ಕಸ್ಲಿಪ್ ಮತ್ತು ಎಐಆರ್‌ಎಲ್ ಪಟ್ಟಿಯಲ್ಲಿನ ಐಟಂಗಳು ಕಾಮಗಾರಿಯನ್ನು ಪೂರ್ಣಗೊಳಿಸಲು 2009–10 ನೇ ಸಾಲಿನ ದರಗಳಂತೆ ಟೆಂಡರ್ ಅನ್ನು ರೂ. 207.25 ಲಕ್ಷಗಳಿಗೆ ಪುನಃ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟಾರೆಯಾಗಿ ರೂ 287.97 ಲಕ್ಷಗಳು ಆಗಿರುವುದರಿಂದ ಸದರಿ ಮೊತ್ತಕ್ಕೆ ನಗರಾಭಿವೃದ್ಧಿ ಇಲಾಖೆಯು ಸಂಖ್ಯೆ: ನಆಇ 135 ಎಸಿಎಂ 2009 ರ ದಿನಾಂಕ 23.10.2009 ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ. ಆದುದರಿಂದ ಹೆಚ್ಚುವರಿಯಾಗಿ ಅನುಮೋದಿತವಾಗಿರುವ ಮೊತ್ತ ರೂ 120.67 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (೨)ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ (ದಕ್ಷಿಣ) ಮುಖ್ಯ ಇಂಜಿನಿಯರವರು ಕೋರಿದ್ದಾರೆ.

೩. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮೂಅಇ 40 ರಾರಾಹೆ 2009, ಬೆಂಗಳೂರು ದಿನಾಂಕ 23.05.2011**

ಪ್ರಸ್ತಾವನೆಯಲ್ಲಿ ವಿವರಿಸಿರವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡವಿ ಮೋಟಾರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758 ರ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯ ಪೈಪ್‌ಲೈನ ಸ್ಥಳಾಂತರದ ಕಾಮಗಾರಿಗೆ ಹೆಚ್ಚುವರಿಯಾಗಿ ತಗಲಿರುವ ರೂ 120.67 ಲಕ್ಷಗಳನ್ನು (ರೂ ಒಂದು ಕೋಟಿ ಇಪ್ಪತ್ತು ಲಕ್ಷ ಅರವತ್ತೇಳು ಸಾವಿರಗಳು ಮಾತ್ರ) 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211 ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲುಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ 21.49 ಕೋಟಿಗಳಿಂದ ಬಿಡುಗಡೆ ಮಾಡಲಾಗಿದೆ.

೧. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ ಮೈಸೂರು ಇವರು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲು ರುಜುವಿನೊಂದಿಗೆ ಪೇಯಿಸ್ ರಸೀತಿಯ ಮೂಲಕ ಡ್ರಾ ಮಾಡಿ ಎಲ್.ಸಿ ಸಂಖ್ಯೆ 758 ರ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯ ಪೈಪ್‌ಲೈನ್ ಸ್ಥಳಾಂತರದ ಕಾಮಗಾರಿಗೆ ಭರಿಸತಕ್ಕದ್ದು.

೨. ಈ ಆದೇಶವನ್ನು ದಿನಾಂಕ 16.5.2008 ಸಂಖ್ಯೆ. FD 1 TFP 2008 ಸರ್ಕಾರಿ ಆದೇಶದಲ್ಲಿ ಇಲಾಖೆಯು ಪ್ರಧಾನ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸಿ.ಎ. ಬಾಬುರವೀಂದ್ರನಾಥ್ ಪಟೇಲ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್ 1348

## ಸಹಕಾರ ಸಚಿವಾಲಯ

**ವಿಷಯ :** ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಿಯಾಯಿತಿ ಬಡ್ಡಿದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಸಿಒ 58 ಸಿಎಲ್‌ಎಸ್ 2009, ದಿನಾಂಕ: 06.05.2009.

2) ಸರ್ಕಾರಿ ಆದೇಶ ಸಂಖ್ಯೆ: ಸಿಒ 69 ಸಿಎಲ್‌ಎಸ್ 2010, ದಿನಾಂಕ: 22.04.2010.

3) ದಿನಾಂಕ: 24.02.2011 ರಂದು ಮಂಡಿಸಿದ 2011–12ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 38.

**ಪ್ರಸ್ತಾವನೆ:**

ಮೇಲೆ ಓದಲಾದ (1) ಮತ್ತು (2)ರ ಆದೇಶಗಳಲ್ಲಿ ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ಶೇಕಡಾ 3ರ ಬಡ್ಡಿ ದರದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ / ಕೃಷಿ ಸಂಬಂಧಿತ ಸಾಲಗಳನ್ನು ಒದಗಿಸುವ ಯೋಜನೆಯನ್ನು ಕೆಲವು ಷರತ್ತುಗಳಿಗೊಳಪಟ್ಟು 2009–10 ಹಾಗೂ 2010–11ನೇ ಸಾಲುಗಳಿಗೆ ಮುಂದುವರೆಸಲು ಮಂಜೂರಾತಿ ನೀಡಲಾಗಿರುತ್ತದೆ.

ದಿನಾಂಕ: 24.02.2011 ರಂದು ಮಂಡಿಸಿದ 2011-12ನೇ ಸಾಲಿನ ಆಯವ್ಯಯದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿಸಂಬಂಧಿತ ಸಾಲಗಳನ್ನು ಹಾಗೂ ನೇಕಾರರು ಮತ್ತು ಮೀನುಗಾರರಿಗೆ ಶೇ.3.00ರ ಬಡ್ಡಿ ದರದ ಮೇಲೆ ನೀಡಲಾಗುತ್ತಿರುವ ಸಾಲಗಳ ಯೋಜನೆಗಳನ್ನು ಮುಂದುವರೆಸಲಾಗುವುದೆಂದು ಘೋಷಿಸಲಾಗಿದೆ. ಈ ಬಗ್ಗೆ ರೂಪಿಸಲಾದ ವಿವರವಾದ ಯೋಜನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 129 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ: 11.05.2011**

ಮೇಲೆ ವಿವರಿಸಲಾದ ಪರಿಸ್ಥಿತಿಯಲ್ಲಿ 2011-12 ನೇ ಸಾಲಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿಸಂಬಂಧಿತ ಸಾಲಗಳನ್ನು ಶೇ.3.00 ಬಡ್ಡಿ ದರದಲ್ಲಿ ಒದಗಿಸುವ ಯೋಜನೆಯನ್ನು ಮುಂದುವರೆಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1) ಈ ಯೋಜನೆಯು ದಿನಾಂಕ: 01.04.2011 ರಿಂದ ಗೊತ್ತುಪಡಿಸಿದ ಪತ್ತಿನ ಸಹಕಾರಿ ಸಂಸ್ಥೆಗಳು ರೈತರಿಗೆ ನೀಡುವ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳಿಗೆ ಮಾತ್ರ ಅನ್ವಯಿಸುತ್ತದೆ.

2) ಪತ್ತಿನ ಸಹಕಾರಿ ಸಂಸ್ಥೆಗಳು ತನ್ನ ರೈತ ಸದಸ್ಯರಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿಸಂಬಂಧಿತ ಸಾಲಗಳನ್ನು ಶೇ.3.00ರ ಬಡ್ಡಿ ದರದ ಯೋಜನೆಯು ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ರೂ 10.00 ಲಕ್ಷಕ್ಕಿಂತ ಮೇಲ್ಪಟ್ಟ ಸಾಲಗಳಿಗೆ ಈ ಸೌಲಭ್ಯ ದೊರಕುವುದಿಲ್ಲ ಮತ್ತು ರೂ. 10.00 ಲಕ್ಷಕ್ಕಿಂತ ಮೇಲ್ಪಟ್ಟ ಸಾಲಗಳಿಗೆ ರೂ. 10.00 ಲಕ್ಷದವರೆಗೆ ಶೇಕಡಾ 3ರಷ್ಟು ಹಾಗೂ ರೂ. 10.00 ಲಕ್ಷ ಮೇಲ್ಪಟ್ಟ ಮೊತ್ತಕ್ಕೆ ಪತ್ತಿನ ಸಹಕಾರಿ ಸಂಸ್ಥೆಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

3) ಈ ಯೋಜನೆಯಡಿ ಪತ್ತಿನ ಸಹಕಾರಿ ಸಂಸ್ಥೆಗಳು ನಬಾರ್ಡ್ ಮಾನದಂಡಗಳ ಪ್ರಕಾರ ಕೃಷಿ, ಕೃಷಿಸಂಬಂಧಿತ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ವರ್ಗೀಕರಿಸತಕ್ಕದ್ದು. ಈ ಸೌಲಭ್ಯವು ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲಗಳಿಗೆ ಮಾತ್ರ ಅನ್ವಯಿಸುತ್ತದೆ.

4) ಈ ಯೋಜನೆಯು ಪತ್ತಿನ ಸಹಕಾರಿ ಸಂಸ್ಥೆಗಳು ನೀಡುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

5) ಈ ಯೋಜನೆಯಡಿ ರೈತರಿಗೆ ಪ್ರಾಥಮಿಕ ಹಂತದಲ್ಲಿ ಪತ್ತಿನ ಸಹಕಾರಿ ಸಂಸ್ಥೆಗಳು ಒದಗಿಸುವ ಸಾಲಗಳ ವಸೂಲಾತಿ ಆಧಾರದ ಮೇಲೆ ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಸರ್ಕಾರವು ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ, ಜಿಲ್ಲಾ ಕೇಂದ್ರ ಸಹಕಾರ (ಡಿ.ಸಿ.ಸಿ.) ಬ್ಯಾಂಕುಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಮೂಲಕ ಹಾಗೂ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳಿಗೆ (ಪಿಕಾರ್ಡ್ ಬ್ಯಾಂಕುಗಳಿಗೆ) ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕಸ್ಕಾರ್ಡ್) ಬ್ಯಾಂಕಿನ ಮೂಲಕ ಬಿಡುಗಡೆ ಮಾಡಲಾಗುತ್ತದೆ.

6) ಮೂರು ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಈ ಕೆಳಗೆ ಸೂಚಿಸಿದಂತೆ ಸಾಲ ನೀಡತಕ್ಕದ್ದು.

(i) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನೀಡುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನೀಡುತ್ತಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಮೇಲೆ ಯಾವುದೇ ಬಡ್ಡಿ ದರಗಳನ್ನು ವಿಧಿಸತಕ್ಕದ್ದಲ್ಲ.

(ii) ಒಂದು ವೇಳೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸಂಪನ್ಮೂಲಗಳನ್ನು ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳಲ್ಲಿ ತೊಡಗಿಸಿದಾಗ ಅಂತಹ ಸಾಲಗಳ ಮೇಲೆ ರಾಜ್ಯ ಸರ್ಕಾರದಿಂದ ದೊರೆಯುವ ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳು ಆಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.

(iii) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ನೀಡುವ ಮಧ್ಯಮಾವಧಿ ಕೃಷಿ/ಕೃಷಿಸಂಬಂಧಿತ ರೂ. 10.00 ಲಕ್ಷಗಳವರೆಗಿನ ಸಾಲಗಳಿಗೆ ಶೇ. 3.00 ರ ಬಡ್ಡಿದರ ವಿಧಿಸತಕ್ಕದ್ದು. ಸಾಲದ ಪ್ರಮಾಣವು ರೂ. 10.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ರೂ.10.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಾತ್ರ ಕೃಷಿ ಪತ್ತಿನ ಸಹಕಾರ ಸಂಘಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

(iv) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಾವು ನೀಡುವ ಕೃಷಿ/ಕೃಷಿ ಸಂಬಂಧಿತ ಸಾಲಗಳ ಮರುಪಾವತಿ ಆಧಾರದ ಮೇಲೆ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಬಡ್ಡಿ ದರದಲ್ಲಿ ಹಾಗೂ ವಿಧಿಸಿದ ನಿಬಂಧನೆಗಳಿಗೊಳಪಟ್ಟು ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತ್ರೈಮಾಸಿಕವಾಗಿ ತಯಾರಿಸತಕ್ಕದ್ದು.

(v) ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬಡ್ಡಿ ಸಹಾಯಧನದ ಬಿಲ್ಲುಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸುವ ಹೊಣೆಯನ್ನು ಡಿಸಿಸಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು ಇವರುಗಳು ವಹಿಸತಕ್ಕದ್ದು.

(vi) ಒಂದು ಪಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬದಲಾಗಿ ವಾಣಿಜ್ಯ ಬ್ಯಾಂಕುಗಳಿಂದ ಕೃಷಿ/ಕೃಷಿಸಂಬಂಧಿತ ಸಾಲ ಪಡೆದು ರೈತರಿಗೆ ವಿತರಣೆ ಮಾಡಿದಲ್ಲಿ ಅಥವಾ ವಾಣಿಜ್ಯ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ನೀಡಿದಾಗ ಬಡ್ಡಿ ಸಹಾಯಧನದ ಹೊಂದಾಣಿಕೆ ವಿಷಯದಲ್ಲಿ ಮೇಲೆ ಸೂಚಿಸಿದ ನಿಯಮಗಳನ್ನೇ ಪಾಲಿಸತಕ್ಕದ್ದು.

ಆ i) ಕಸ್ಕಾರ್ಡ್ ಬ್ಯಾಂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ತಾನು ನಿಗದಿಪಡಿಸುವ ಯುಕ್ತ ಬಡ್ಡಿ ದರದಲ್ಲಿ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ಒದಗಿಸತಕ್ಕದ್ದು. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಶೇಕಡಾ 3 ರ ಬಡ್ಡಿ ದರದಲ್ಲಿ ರೈತರಿಗೆ ರೂ. 10.00 ಲಕ್ಷದವರೆಗಿನ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ಒದಗಿಸತಕ್ಕದ್ದು. ಸಾಲದ ಪ್ರಮಾಣವು ರೂ.10.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ರೂ.10.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಾತ್ರ ಕೃಷಿ ಪತ್ತಿನ ಸಹಕಾರ ಸಂಘಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

ii) ಪಿಕಾರ್ಡ್ ಬ್ಯಾಂಕುಗಳು ಇಂತಹ ಸಾಲಗಳನ್ನು ತಮ್ಮ ಸ್ವಂತ ಸಂಪನ್ಮೂಲಗಳಿಂದ ಒದಗಿಸಿದಾಗ ಅಷ್ಟರ ಮಟ್ಟಿಗೆ ಕಸ್ಕಾರ್ಡ್ ಬ್ಯಾಂಕು ಸರ್ಕಾರದಿಂದ ಪಡೆಯುವ ಬಡ್ಡಿ ಸಹಾಯಧನವನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.

ಇ) ಪಟ್ಟಣ ಸಹಕಾರ ಬ್ಯಾಂಕುಗಳು ರೂ. 10.00 ಲಕ್ಷದವರೆಗೆ ನೀಡುವ ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳಿಗೆ ಶೇ. 3.00 ರ ಬಡ್ಡಿ ದರವನ್ನು ವಿಧಿಸತಕ್ಕದ್ದು. ಸಾಲದ ಪ್ರಮಾಣವು ರೂ. 10.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ರೂ. 10.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಾತ್ರ ಪಟ್ಟಣ ಸಹಕಾರ ಬ್ಯಾಂಕುಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

7) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕಸ್ಕಾರ್ಡ್ ಬ್ಯಾಂಕು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳು ರೈತರಿಗೆ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ಮೇಲೆ ನಿಗದಿಪಡಿಸಿದ ಬಡ್ಡಿ ದರದಲ್ಲಿ ಒದಗಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳತಕ್ಕದ್ದು.

8) ಅ) ಈ ಯೋಜನೆಯಡಿ ವಿತರಿಸಲಾದ ಕೃಷಿ/ಕೃಷಿ ಸಂಬಂಧಿತ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬದ್ಧತೆಯು ಸಾಲದ ಅವಧಿಗೆ ಸೀಮಿತವಾಗಿರುತ್ತದೆ. ಆದಾಗ್ಯೂ ರೈತರು ನಿಗದಿತ ದಿನಾಂಕದಂದು ಸಾಲ ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದಲ್ಲಿ, ಸಾಲ ಪಡೆದ ದಿನಾಂಕದಿಂದ ಸರ್ಕಾರದ ಬದ್ಧತೆ ಇರುವುದಿಲ್ಲ ಮತ್ತು ಸುಸ್ತಿಯಾದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಗೆ ಅವುಗಳ ಸಾಮಾನ್ಯ ಬಡ್ಡಿ ದರದಂತೆ ಮತ್ತು ಇತರ ಖರ್ಚುಗಳು ಇದ್ದಲ್ಲಿ ಅದರ ಸಹಿತ ಮರುಪಾವತಿಸಲು ಜವಾಬ್ದಾರರಾಗಿರುತ್ತಾರೆ.

ಆ) ಈ ಸ್ಕೀಮಿನಡಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲಗಳಿಗೆ ಮಾತ್ರ ದೊರೆಯಲಿದೆ ಮತ್ತು ಸಾಲವು ರೈತರಿಗೆ ಬಿಡುಗಡೆಯಾದ ದಿನಾಂಕದಿಂದ ಪ್ರಾರಂಭವಾಗಿ ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಈ ಸಾಲಗಳು ಸುಸ್ತಿಯಾದಲ್ಲಿ ಸಾಲ ಪಡೆದ ದಿನಾಂಕದಿಂದ ಸರ್ಕಾರದ ಬದ್ಧತೆಯು ಇರುವುದಿಲ್ಲ. ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಕಂತುಗಳನ್ನು ನಿಗದಿತ ಗಡುವಿನ ಒಳಗೆ ಮರುಪಾವತಿಸಿದಲ್ಲಿ ಮುದ್ದತ್ತು ಮೀರದ ಹೊರಬಾಕಿ (ಚಾಲ್ತಿ ಹೊರಬಾಕಿ) ಮೇಲೆ ಮಾತ್ರ ಬಡ್ಡಿ ಸಹಾಯಧನವು ದೊರೆಯಲಿದೆ.

9) ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ಬಡ್ಡಿ ಸಹಾಯಧನವನ್ನು ಸಂಬಂಧಿತ ಸಾಲಗಳ ವಸೂಲಾತಿ ಪ್ರಮಾಣವನ್ನು ಆಧರಿಸಿ, ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು ಸಿದ್ಧಪಡಿಸಿ ಸಮುಚಿತ ಮಾರ್ಗದಲ್ಲಿ ನಿಬಂಧಕರ ಮಂಜೂರಾತಿಗಾಗಿ ಬೇಡಿಕೆ ಸಲ್ಲಿಸತಕ್ಕದ್ದು.

10) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಡಿ.ಸಿ.ಸಿ. ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಡಿ.ಸಿ.ಸಿ. ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು ಕ್ಲೇಮು ಬಿಲ್ಲುಗಳನ್ನು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ/ ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಾಣಿಜ್ಯ / ಗ್ರಾಮೀಣ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಕ್ಲೇಮು ಬಿಲ್ಲುಗಳನ್ನು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ / ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ದೃಢೀಕರಿಸಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

12) ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದ ಕ್ಲೇಮು ಬಿಲ್ಲುಗಳನ್ನು ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರು ತಯಾರಿಸಿ ಪ್ರಮಾಣೀಕರಿಸಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಕಸ್ಕಾರ್ಡ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು. ತದನಂತರ ಕಸ್ಕಾರ್ಡ್ ಬ್ಯಾಂಕಿನ, ಬ್ಯಾಂಕಿನ ನಿಯಮ 441ರಡಿ ನೇಮಕವಾದ ಲೆಕ್ಕಪರಿಶೋಧನಾ ಉಪ/ಜಂಟಿನಿರ್ದೇಶಕರು ಪ್ರಮಾಣೀಕರಿಸಿದ ನಂತರ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಪ್ರಮಾಣೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.

13) ಪಟ್ಟಣ ಸಹಕಾರಿ ಬ್ಯಾಂಕುಗಳ ಕ್ಲೇಮು ಬಿಲ್ಲುಗಳನ್ನು ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ/ ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕ್ ಶಾಖೆ) ಇವರಿಗೆ ಸಲ್ಲಿಸತಕ್ಕದ್ದು.

14) ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕ್ ಶಾಖೆ) ಇವರು ಎಲ್ಲಾ ಕ್ಲೇಮು ಬಿಲ್ಲುಗಳನ್ನು ಪ್ರಮಾಣೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು. ಸಹಕಾರ ಸಂಘಗಳ ನಿಬಂಧಕರು ಸದರಿ ಬಿಲ್ಲುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಪಟ್ಟ ಸಹಕಾರ ಸಂಘ / ಸಹಕಾರ ಬ್ಯಾಂಕುಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಮುಖಾಂತರ ಹಣ ಬಿಡುಗಡೆ ಮಾಡತಕ್ಕದ್ದು.

15) ಸಾಲ ಪಡೆಯುವ ರೈತರ ಪೈಕಿ ಹೊಸದಾಗಿ ಸಾಲ ಪಡೆಯುವ ರೈತರಿಗೆ ಆದ್ಯತೆ ನೀಡತಕ್ಕದ್ದು.

16) ಈ ಯೋಜನೆಯಡಿ ಅನುದಾನದ ಬಿಡುಗಡೆಯು ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 161(ಬಿ)(2), ಪರಿಚ್ಛೇದ 101(ಬಿ)(5)(111)ರಡಿಯ ಟಿಪ್ಪಣಿ–2 ಹಾಗೂ ಪರಿಚ್ಛೇದ 101(ಬಿ)(6)(11)ರ ಅವಕಾಶಗಳ ಪಾಲನೆಗೆ ಒಳಪಟ್ಟಿರುತ್ತದೆ.

17) ಸಹಕಾರ ಸಂಘಗಳ ನಿಬಂಧಕರು ಸಂಬಂಧಪಟ್ಟ ಮುನರ್ಭರಣ ಬಿಲ್ಲುಗಳು ಪರಿಶೀಲನೆ ಆದ ನಂತರ ದೃಢೀಕೃತ ಬಿಲ್ಲುಗಳ ಆಧಾರದ ಮೇಲೆ ಸಂಬಂಧಪಟ್ಟ ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡತಕ್ಕದ್ದು ಹಾಗೂ ಹಣದ ಉಪಯೋಗದ ಬಗ್ಗೆ ತ್ರೈಮಾಸಿಕ ಪ್ರಗತಿ ವರದಿಗಳನ್ನು ಸಲ್ಲಿಸತಕ್ಕದ್ದು ಮತ್ತು ನಿಗದಿತ ನಮೂನೆಯಲ್ಲಿ ಉಪಯೋಗ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

18) ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡಲು ಸಕ್ಷಮರಾಗಿರತಕ್ಕದ್ದು.

19) ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡಿದ ಸೂಚನೆಗಳನ್ನು ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 212 ವೆಚ್ಚ–2/2011 ದಿನಾಂಕ: 11.05.2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್.ಎಸ್.ನೂಲಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್ 1349

## ಸಹಕಾರ ಸಚಿವಾಲಯ

**ವಿಷಯ** : ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೇ.1ರ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಬೆಳೆ ಸಾಲಗಳನ್ನು ನೀಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಸಿಒ 58 ಸಿಎಲ್‌ಎಸ್ 2009, ದಿನಾಂಕ: 06.05.2009.
2) ಸರ್ಕಾರಿ ಆದೇಶ ಸಂಖ್ಯೆ: ಸಿಒ 69 ಸಿಎಲ್‌ಎಸ್ 2010, ದಿನಾಂಕ: 22.04.2010.
3) ದಿನಾಂಕ: 24.02.2011 ರಂದು ಮಂಡಿಸಿದ 2011–12ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 38.

**ಪ್ರಸ್ತಾವನೆ:**

ಮೇಲೆ ಓದಲಾದ (1) ಮತ್ತು (2)ರ ಆದೇಶಗಳಲ್ಲಿ ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ಶೇಕಡಾ 3ರ ಬಡ್ಡಿ ದರದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ಒದಗಿಸುವ ಯೋಜನೆಯನ್ನು ಕೆಲವು ಷರತ್ತುಗಳಿಗೊಳಪಟ್ಟು 2009–10 ಹಾಗೂ 2010–11ನೇ ಸಾಲುಗಳಿಗೆ ಮುಂದುವರೆಸಲು ಮಂಜೂರಾತಿ ನೀಡಲಾಗಿರುತ್ತದೆ.

ದಿನಾಂಕ: 24.02.2011 ರಂದು ಮಂಡಿಸಿದ 2011–12ನೇ ಸಾಲಿನ ಆಯವ್ಯಯದಲ್ಲಿ ಪತ್ತಿ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ರೂ. 3.00 ಲಕ್ಷದವರೆಗಿನ ಅಲಾವಧಿ ಕೃಷಿ ಬೆಳೆ ಸಾಲಗಳನ್ನು ಶೇಕಡಾ 1ರ ಬಡ್ಡಿ ದರದಲ್ಲಿ ನೀಡುವ ಯೋಜನೆಯನ್ನು ಘೋಷಿಸಲಾಗಿದೆ. ಈ ಬಗ್ಗೆ ರೂಪಿಸಲಾದ ವಿವರವಾದ ಯೋಜನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 129 ಸಿಎಲ್‌ಎಸ್ 2011, ಬೆಂಗಳೂರು, ದಿನಾಂಕ: 11.05.2011**

ಮೇಲೆ ವಿವರಿಸಲಾದ ಪರಿಸ್ಥಿತಿಯಲ್ಲಿ 2011–12ನೇ ಸಾಲಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಬೆಳೆ ಸಾಲಗಳನ್ನು ಶೇ.1.00ರ ಬಡ್ಡಿ ದರದಲ್ಲಿ ಒದಗಿಸುವ ಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1) ಈ ಯೋಜನೆಯು ದಿನಾಂಕ: 01.04.2011 ರಿಂದ ಗೊತ್ತುಪಡಿಸಿದ ಪತ್ತಿನ ಸಹಕಾರಿ ಸಂಸ್ಥೆಗಳು ರೈತರಿಗೆ ನೀಡುವ ಅಲ್ಪಾವಧಿ ಕೃಷಿ ಬೆಳೆ ಸಾಲಗಳಿಗೆ ಮಾತ್ರ ಅನ್ವಯಿಸುತ್ತದೆ.

2) ಪತ್ತಿನ ಸಹಕಾರಿ ಸಂಸ್ಥೆಗಳು ತನ್ನ ರೈತ ಸದಸ್ಯರಿಗೆ ರೂ. 3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಬೆಳೆ ಸಾಲಗಳನ್ನು ಶೇ. 1.00 ರ ಬಡ್ಡಿ ದರದಲ್ಲಿ ಒದಗಿಸತಕ್ಕದ್ದು. ಅಲ್ಪಾವಧಿ ಕೃಷಿ ಬೆಳೆ ಸಾಲದ ಪ್ರಮಾಣವು ರೂ.3.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ರೂ. 3.00 ಲಕ್ಷದವರೆಗೆ ಶೇ.1.00 ರ ಬಡ್ಡಿ ದರದಲ್ಲಿ ಹಾಗೂ ರೂ. 3.00 ಲಕ್ಷಕ್ಕಿಂತ ಹೆಚ್ಚಿನ ಸಾಲದ ಮೇಲಿನ ಮೊಬಲಗಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

3) 2010–11ನೇ ಸಾಲಿನಲ್ಲಿ ಕೃಷಿ ಅಲ್ಪಾವಧಿ ಸಾಲಗಳನ್ನು ಪಡೆದು ದಿನಾಂಕ: 31.03.2011ಕ್ಕೆ ಈ ಸಾಲವು ಚಾಲ್ತಿಯಿದ್ದಲ್ಲಿ, ದಿನಾಂಕ: 31.03.2011ರವರೆಗೆ ಶೇಕಡಾ 3ರ ಬಡ್ಡಿ ದರದಂತೆ ಹಾಗೂ ದಿನಾಂಕ: 01.04.2011 ರಿಂದ ರೂ. 3.00 ಲಕ್ಷಗಳ ಮಿತಿಗೊಳಪಟ್ಟು ಶೇಕಡಾ 1ರ ಬಡ್ಡಿ ದರ ಹಾಗೂ ರೂ.3.00 ಲಕ್ಷಕ್ಕಿಂತ ಹೆಚ್ಚಿನ ಮೊಬಲಗಿಗೆ ಶೇಕಡಾ 3ರ ಬಡ್ಡಿ ದರವು ಅನ್ವಯಿಸುತ್ತದೆ ಹಾಗೂ ಈ ಸೌಲಭ್ಯವು ಗೊತ್ತುಪಡಿಸಿದ ಅವಧಿಯಲ್ಲಿ ಮರುಪಾವತಿಸಿದಲ್ಲಿ ಮಾತ್ರ ಲಭ್ಯವಾಗುತ್ತದೆ.

4) ಈ ಯೋಜನೆಯು ಪತ್ತಿನ ಸಹಕಾರಿ ಸಂಸ್ಥೆಗಳು ನೀಡುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

5) ಈ ಯೋಜನೆಯಡಿ ರೈತರಿಗೆ ಪ್ರಾಥಮಿಕ ಹಂತದಲ್ಲಿ ಪತ್ತಿನ ಸಹಕಾರಿ ಸಂಸ್ಥೆಗಳು ಒದಗಿಸುವ ಸಾಲಗಳ ವಸೂಲಾತಿ ಆಧಾರದ ಮೇಲೆ ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಸರ್ಕಾರವು ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ, ಜಿಲ್ಲಾ ಕೇಂದ್ರ ಸಹಕಾರ (ಡಿ.ಸಿ.ಸಿ.) ಬ್ಯಾಂಕುಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಮೂಲಕ ಹಾಗೂ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳಿಗೆ (ಪಿಕಾರ್ಡ್ ಬ್ಯಾಂಕುಗಳಿಗೆ) ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕಸ್ಕಾರ್ಡ್) ಬ್ಯಾಂಕಿನ ಮೂಲಕ ಬಿಡುಗಡೆ ಮಾಡಲಾಗುತ್ತದೆ.

ಅ) ಮೂರು ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಈ ಕೆಳಗೆ ಸೂಚಿಸಿದಂತೆ ಮಾತ್ರ ಗರಿಷ್ಠ ಬಡ್ಡಿ ದರಗಳನ್ನು ವಿಧಿಸತಕ್ಕದ್ದು.

(i) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನೀಡುತ್ತಿರುವ ಅಲ್ಪಾವಧಿ ಕೃಷಿ ಸಾಲಗಳ ಮೇಲೆ ಯಾವುದೇ ಬಡ್ಡಿ ದರಗಳನ್ನು ವಿಧಿಸತಕ್ಕದ್ದಲ್ಲ. ಆದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತಯಾರಿಸಿ ಸಲ್ಲಿಸಿದ ತಕ್ಷಣ ಡಿಸಿಸಿ ಬ್ಯಾಂಕಿನವರು ಶೇ.2ರಂತೆ ಬಡ್ಡಿ ಸಹಾಯಧನವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವರ್ಗಾಯಿಸತಕ್ಕದ್ದು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ದೊರೆಯುವ ಬಡ್ಡಿ ಸಹಾಯಧನದ ಪೈಕಿ ಆಯಾ ಡಿಸಿಸಿ ಬ್ಯಾಂಕುಗಳು ತಾವು ನೀಡಿದ ಅಲ್ಪಾವಧಿ ಕೃಷಿ ಸಾಲಗಳಿಗೆ ಮಾತ್ರ ಜಮಾ ಪಡೆಯತಕ್ಕದ್ದು.

(ii) ಒಂದು ವೇಳೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸಂಪನ್ಮೂಲಗಳನ್ನು ಅಲ್ಪಾವಧಿ ಕೃಷಿ ಸಾಲಗಳಲ್ಲಿ ತೊಡಗಿಸಿದಾಗ ಅಂತಹ ಸಾಲಗಳ ಮೇಲೆ ರಾಜ್ಯ/ಕೇಂದ್ರ ಸರ್ಕಾರಗಳಿಂದ ದೊರೆಯುವ ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳು ಆಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವರ್ಗಾಯಿಸತಕ್ಕದ್ದು. ಹಾಗೂ ಈ ರೀತಿ ವರ್ಗಾಯಿಸುವಾಗ ರಾಜ್ಯ/ಕೇಂದ್ರ ಸರ್ಕಾರಗಳಿಂದ ಗೊತ್ತುಪಡಿಸಿದ ಬಡ್ಡಿ ಸಹಾಯಧನದ ಶೇಕಡಾ ಪ್ರಮಾಣಕ್ಕನುಗುಣವಾಗಿ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.

(iii) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ರೂ.3.00 ಲಕ್ಷಗಳವರೆಗೆ ನೀಡುವ ಅಲ್ಪಾವಧಿ ಕೃಷಿ ಸಾಲಗಳ ಮೇಲೆ ಶೇ.1ರ ಬಡ್ಡಿದರವನ್ನು ವಿಧಿಸತಕ್ಕದ್ದು ಹಾಗೂ ಸಾಲದ ಪ್ರಮಾಣವು ರೂ.3.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಶೇ.1.00ರ ಬಡ್ಡಿ ದರವು ರೂ.3.00 ಲಕ್ಷಕ್ಕೆ ಮಾತ್ರ ಅನ್ವಯವಾಗುತ್ತದೆ ಹಾಗೂ ರೂ.3.00 ಲಕ್ಷಕ್ಕಿಂತ ಹೆಚ್ಚಿನ ಸಾಲಗಳ ಮೊತ್ತಕ್ಕೆ ಸಾಮಾನ್ಯ ಬಡ್ಡಿ ದರವನ್ನು ಆಕರಿಸತಕ್ಕದ್ದು.

(iv) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಾವು ನೀಡುವ ಅಲ್ಪಾವಧಿ ಸಾಲಗಳ ಮರುಪಾವತಿ ಆಧಾರದ ಮೇಲೆ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಬಡ್ಡಿದರದಲ್ಲಿ ಹಾಗೂ ವಿಧಿಸಿದ ನಿಬಂಧನೆಗಳಿಗೊಳಪಟ್ಟು ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತ್ರೈಮಾಸಿಕವಾಗಿ ತಯಾರಿಸತಕ್ಕದ್ದು.

(v) ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬಡ್ಡಿ ಸಹಾಯಧನದ ಬಿಲ್ಲುಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸುವ ಹೊಣೆಯನ್ನು ಡಿಸಿಸಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು ಇವರುಗಳು ವಹಿಸತಕ್ಕದ್ದು.

(vi) ಒಂದು ಪಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬದಲಾಗಿ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ಪಡೆದು ರೈತರಿಗೆ ವಿತರಣೆ ಮಾಡಿದಲ್ಲಿ ಅಥವಾ ವಾಣಿಜ್ಯ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ಅಲ್ಪಾವಧಿ ಕೃಷಿ ಸಾಲಗಳನ್ನು ನೀಡಿದಾಗ ಬಡ್ಡಿ ಸಹಾಯಧನದ ಹೊಂದಾಣಿಕೆ ವಿಷಯದಲ್ಲಿ ಮೇಲೆ ಸೂಚಿಸಿದ ನಿಯಮಗಳನ್ನೇ ಪಾಲಿಸತಕ್ಕದ್ದು.

(vii) ಭಾರತ ಸರ್ಕಾರದಿಂದ ಲಭ್ಯವಾಗುವ ಸವಲತ್ತಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತಯಾರಿಸಿ ಸಂಬಂಧಪಟ್ಟ ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ಮಂಜೂರಾತಿಗಾಗಿ ಗೊತ್ತುಪಡಿಸಿದ ಗಡುವಿನೊಳಗಾಗಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸಿದ ಪಕ್ಷದಲ್ಲಿ ಮಾತ್ರ ರಾಜ್ಯ ಸರ್ಕಾರದಿಂದ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಆ i) ಕಸ್ಕಾರ್ಡ್ ಬ್ಯಾಂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ತಾನು ನಿಗದಿಪಡಿಸುವ ಯುಕ್ತ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲಗಳನ್ನು ಒದಗಿಸತಕ್ಕದ್ದು. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ರೂ.3.00 ಲಕ್ಷದವರೆಗಿನ ರೈತರಿಗೆ ಅಲ್ಪಾವಧಿ ಕೃಷಿ ಸಾಲಗಳನ್ನು ಶೇಕಡಾ 1ರ ಬಡ್ಡಿ ದರದಲ್ಲಿ ಒದಗಿಸತಕ್ಕದ್ದು. ರೂ 3.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ರೂ.3.00 ಲಕ್ಷಗಳ ಸಾಲಗಳಿಗೆ ಶೇಕಡಾ 1ರ ಬಡ್ಡಿದರವು ಅನ್ವಯಿಸತಕ್ಕದ್ದು ಹಾಗೂ ರೂ.3.00 ಲಕ್ಷಕ್ಕಿಂತ ಹೆಚ್ಚಿನ ಸಾಲಗಳ ಮೊಬಲಗಿಗೆ ಸಾಮಾನ್ಯ ಬಡ್ಡಿ ದರವನ್ನು ವಿಧಿಸತಕ್ಕದ್ದು.

ii) ಪಿಕಾರ್ಡ್ ಬ್ಯಾಂಕುಗಳು ಇಂತಹ ಸಾಲಗಳನ್ನು ತಮ್ಮ ಸ್ವಂತ ಸಂಪನ್ಮೂಲಗಳಿಂದ ಒದಗಿಸಿದಾಗ ಅಷ್ಟರ ಮಟ್ಟಿಗೆ ಕಸ್ಕಾರ್ಡ್ ಬ್ಯಾಂಕು ಸರ್ಕಾರದಿಂದ ಪಡೆಯುವ ಬಡ್ಡಿ ಸಹಾಯಧನವನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.

iii) ಭಾರತ ಸರ್ಕಾರದಿಂದ ಲಭ್ಯವಾಗುವ ಸವಲತ್ತಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತಯಾರಿಸಿ ಸಂಬಂಧಪಟ್ಟ ಪತ್ತಿನ ಸಹಕಾರ ಸಂಘಗಳು/ ಬ್ಯಾಂಕುಗಳು ಮಂಜೂರಾತಿಗಾಗಿ ಕಸ್ಕಾರ್ಡ್ ಬ್ಯಾಂಕಿಗೆ ಸಲ್ಲಿಸಿದ ಪಕ್ಷದಲ್ಲಿ ಮಾತ್ರ ರಾಜ್ಯ ಸರ್ಕಾರದಿಂದ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಇ) i) ಪಟ್ಟಣ ಸಹಕಾರ ಬ್ಯಾಂಕುಗಳು ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಬೆಳೆ ಸಾಲಗಳಿಗೆ ಶೇ.1.00ರ ಬಡ್ಡಿ ದರವನ್ನು ವಿಧಿಸತಕ್ಕದ್ದು. ಸಾಲದ ಪ್ರಮಾಣವು ರೂ.3.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಶೇ.1.00ರ ಬಡ್ಡಿದರವು ರೂ.3.00 ಲಕ್ಷಗಳಿಗೆ ಅನ್ವಯವಾಗುವುದು ಹಾಗೂ ರೂ.3.00 ಲಕ್ಷಕ್ಕಿಂತ ಹೆಚ್ಚಿನ ಸಾಲಗಳ ಮೊತ್ತಕ್ಕೆ ಸಾಮಾನ್ಯ ಬಡ್ಡಿ ದರವನ್ನು ವಿಧಿಸತಕ್ಕದ್ದು.

ii) ಭಾರತ ಸರ್ಕಾರದಿಂದ ಲಭ್ಯವಾಗುವ ಸವಲತ್ತಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಬಿಲ್ಲುಗಳನ್ನು ತಯಾರಿಸಿ ಸಂಬಂಧಪಟ್ಟ ಪತ್ತಿನ ಸಹಕಾರ ಸಂಘಗಳು/ ಬ್ಯಾಂಕುಗಳು ಮಂಜೂರಾತಿಗಾಗಿ ಗೊತ್ತುಪಡಿಸಿದ ಗಡುವಿನೊಳಗಾಗಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸಿದ ಪಕ್ಷದಲ್ಲಿ ಮಾತ್ರ ರಾಜ್ಯ ಸರ್ಕಾರದಿಂದ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

6) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕಸ್ಕಾರ್ಡ್ ಬ್ಯಾಂಕು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳು ರೈತರಿಗೆ ಅಲ್ಪಾವಧಿ ಕೃಷಿ ಸಾಲಗಳ ಮೇಲೆ ನಿಗದಿಪಡಿಸಿದ ಬಡ್ಡಿ ದರದಲ್ಲಿ ಒದಗಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳತಕ್ಕದ್ದು.

7) ಅ) ಈ ಯೋಜನೆಯಡಿ ವಿತರಿಸಲಾದ ಅಲ್ಪಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬದ್ಧತೆಯು ಸಾಲದ ಅವಧಿಗೆ ಸೀಮಿತವಾಗಿರುತ್ತದೆ. ಆದಾಗ್ಯೂ ರೈತರು ನಿಗದಿತ ದಿನಾಂಕದಂದು ಸಾಲ ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದಲ್ಲಿ, ಸಾಲ ಪಡೆದ ದಿನಾಂಕದಿಂದ ಸರ್ಕಾರದ ಬದ್ಧತೆ ಇರುವುದಿಲ್ಲ ಮತ್ತು ಸುಸ್ತಿಯಾದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಗೆ ಅವುಗಳ ಸಾಮಾನ್ಯ ಬಡ್ಡಿ ದರದಂತೆ ಮತ್ತು ಇತರ ಖರ್ಚುಗಳು ಇದ್ದಲ್ಲಿ ಅದರ ಸಹಿತ ಮರುಪಾವತಿಸಲು ಜವಾಬ್ದಾರರಾಗಿರುತ್ತಾರೆ.

ಆ) ಈ ಯೋಜನೆಯಡಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲಗಳಿಗೆ ಮಾತ್ರ ದೊರೆಯಲಿದೆ ಮತ್ತು ಸಾಲವು ರೈತರಿಗೆ ಬಿಡುಗಡೆಯಾದ ದಿನಾಂಕದಿಂದ ಪ್ರಾರಂಭವಾಗಿ ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಈ ಸಾಲಗಳು ಸುಸ್ತಿಯಾದಲ್ಲಿ ಸಾಲ ಪಡೆದ ದಿನಾಂಕದಿಂದ ಸರ್ಕಾರದ ಬದ್ಧತೆಯು ಇರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ನೀಡಿರುವ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ರೈತರು ಬಳಸಿಕೊಳ್ಳಬೇಕಾದಲ್ಲಿ ನಿಗದಿತ ಗಡಿವಿನಲ್ಲಿ ಪೂರ್ಣ ಸಾಲವನ್ನು ಮರುಪಾವತಿಸಿರತಕ್ಕದ್ದು. ರಾಜ್ಯ ಸರ್ಕಾರವು ನೀಡುವ ಈ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಪಡೆಯಬೇಕಾದಲ್ಲಿ ರೈತರು ನಿಗದಿತ ಗಡುವಿನಲ್ಲಿ ಸಾಲ ಮರುಪಾವತಿ ಮಾಡತಕ್ಕದ್ದು. ಇಲ್ಲವಾದಲ್ಲಿ ಈ ಸೌಲಭ್ಯವನ್ನು ಪಡೆಯಲು ಅನರ್ಹರಾಗುತ್ತಾರೆ.

8) ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ಬಡ್ಡಿ ಸಹಾಯಧನವನ್ನು ಸಂಬಂಧಿತ ಸಾಲಗಳ ವಸೂಲಾತಿ ಪ್ರಮಾಣವನ್ನು ಆಧರಿಸಿ, ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು ಸಿದ್ಧಪಡಿಸಿ ಸಮುಚಿತ ಮಾರ್ಗದಲ್ಲಿ ನಿಬಂಧಕರ ಮಂಜೂರಾತಿಗಾಗಿ ಬೇಡಿಕೆ ಸಲ್ಲಿಸತಕ್ಕದ್ದು.

9) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಡಿ.ಸಿ.ಸಿ. ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಡಿ.ಸಿ.ಸಿ. ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು ಕ್ಲೇಮು ಬಿಲ್ಲುಗಳನ್ನು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ/ ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

10) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಾಣಿಜ್ಯ / ಗ್ರಾಮೀಣ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಕ್ಲೇಮು ಬಿಲ್ಲುಗಳನ್ನು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ / ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ದೃಢೀಕರಿಸಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

11) ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದ ಕ್ಲೇಮು ಬಿಲ್ಲುಗಳನ್ನು ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರು ತಯಾರಿಸಿ ಪ್ರಮಾಣೀಕರಿಸಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಕಸ್ಕಾರ್ಡ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು. ತದನಂತರ ಕಸ್ಕಾರ್ಡ್ ಬ್ಯಾಂಕಿನ, ಬ್ಯಾಂಕಿನ ನಿಯಮ 441ರಡಿ ನೇಮಕವಾದ ಲೆಕ್ಕಪರಿಶೋಧನಾ ಉಪ/ಜಂಟಿ ನಿರ್ದೇಶಕರು ಪ್ರಮಾಣೀಕರಿಸಿದ ನಂತರ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಪ್ರಮಾಣೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.

12) ಪಟ್ಟಣ ಸಹಕಾರಿ ಬ್ಯಾಂಕುಗಳ ಕ್ಲೇಮು ಬಿಲ್ಲುಗಳನ್ನು ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಯಾರಿಸಿ ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಸಹಾಯಕ/ ಉಪನಿರ್ದೇಶಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಿ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕ್ ಶಾಖೆ) ಇವರಿಗೆ ಸಲ್ಲಿಸತಕ್ಕದ್ದು.

13) ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕ್ ಶಾಖೆ) ಇವರು ಎಲ್ಲಾ ಕ್ಲೇಮು ಬಿಲ್ಲುಗಳನ್ನು ಪ್ರಮಾಣೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು. ಸಹಕಾರ ಸಂಘಗಳ ನಿಬಂಧಕರು ಸದರಿ ಬಿಲ್ಲುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಪಟ್ಟ ಸಹಕಾರ ಸಂಘ / ಸಹಕಾರ ಬ್ಯಾಂಕುಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಮುಖಾಂತರ ಹಣ ಬಿಡುಗಡೆ ಮಾಡತಕ್ಕದ್ದು.

14) ಸಾಲ ಪಡೆಯುವ ರೈತರ ಪೈಕಿ ಹೊಸದಾಗಿ ಸಾಲ ಪಡೆಯುವ ರೈತರಿಗೆ ಆದ್ಯತೆ ನೀಡತಕ್ಕದ್ದು.

15) ಈ ಯೋಜನೆಯಡಿ ಅನುದಾನದ ಬಿಡುಗಡೆಯು ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 161(ಬಿ)(2), ಪರಿಚ್ಛೇದ 101(ಬಿ)(5)(111)ರಡಿಯ ಟಿಪ್ಪಣಿ-2 ಹಾಗೂ ಪರಿಚ್ಛೇದ 101(ಬಿ)(6)(11)ರ ಅವಕಾಶಗಳ ಪಾಲನೆಗೆ ಒಳಪಟ್ಟಿರುತ್ತದೆ.

16) ಸಹಕಾರ ಸಂಘಗಳ ನಿಬಂಧಕರು ಸಂಬಂಧಪಟ್ಟ ಪುನರ್ಭರಣ ಬಿಲ್ಲುಗಳು ಪರಿಶೀಲನೆ ಆದ ನಂತರ ದೃಢೀಕೃತ ಬಿಲ್ಲುಗಳ ಆಧಾರದ ಮೇಲೆ ಸಂಬಂಧಪಟ್ಟ ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡತಕ್ಕದ್ದು ಹಾಗೂ ಹಣದ ಉಪಯೋಗದ ಬಗ್ಗೆ ತ್ರೈಮಾಸಿಕ ಪ್ರಗತಿ ವರದಿಗಳನ್ನು ಸಲ್ಲಿಸತಕ್ಕದ್ದು ಮತ್ತು ನಿಗದಿತ ನಮೂನೆಯಲ್ಲಿ ಉಪಯೋಗ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

17) ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡಲು ಸಕ್ಷಮರಾಗಿರತಕ್ಕದ್ದು.

18) ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡಿದ ಸೂಚನೆಗಳನ್ನು ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: **ಆಇ 212 ವೆಚ್ಚ-2/2011 ದಿನಾಂಕ: 11.05.2011** ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಆರ್.ಎಸ್.ನೂಲಿ**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ.

ಪಿ.ಆರ್ 1350

## ಸಹಕಾರ ಸಚಿವಾಲಯ

**ವಿಷಯ** : ಹಿಲಾಲ್ ಎಜುಕೇಷನ್ (ರಿ) ಗರ್ಗೇಶ್ವರಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇದರ ಆಡಳಿತ ಮಂಡಳಿಯಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯದಿಂದ ಹಾಗೂ ಸದಸ್ಯರು ನೀಡಿರುವ ರಾಜೀನಾಮೆಯಿಂದ ಆಡಳಿತ ಮಂಡಳಿಯ ಸ್ಥಾನದಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

**ಓದಲಾಗಿದೆ:**
(1) ಸಹಕಾರ ಸಂಘಗಳ ನಿಬಂಧಕರವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/ 193/ಎಸ್‌ಓಆರ್/ 2009-10, ದಿನಾಂಕ: 05-02-2010.
**(2)** ಕಾರಣ ಕೇಳುವ ಸೂಚನಾ ಪತ್ರದ ದಿನಾಂಕ: 22-02-2010.
**(3)** ಅಧ್ಯಕ್ಷರು, ಹಿಲಾಲ್ ಎಜುಕೇಷನ್ ಸೊಸೈಟಿ(ರಿ), ಗರ್ಗೇಶ್ವರಿ, ಟಿ. ನರಸೀಪುರ ಇವರು ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಉತ್ತರ ದಿನಾಂಕ: 09-03-2010.
**(4)** ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/193/ಎಸ್‌ಓಆರ್/2009-10 ದಿನಾಂಕ: 07-07-2010.
**(5)** ಸರ್ಕಾರದ ಪತ್ರ ಸಂಖ್ಯೆ: ಸಇ 18 ಸಸಂನೋ 2010 ದಿನಾಂಕ: 11/11/2010.
**(6)** ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/193/ಎಸ್‌ಓಆರ್/2009-10 ದಿನಾಂಕ: 03/03/2011.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 05-02-2010ರ ಪತ್ರದಲ್ಲಿ ನೋಂದಣಿ ಕಾಯ್ದೆ 1960 ರ ಕಲಂ 25(1) ರನ್ವಯ ವಿಚಾರಣೆ ನಡೆಸಿ ಸಂಸ್ಥೆ ಸ್ಥಾಪನೆಗೊಂಡ 42 ವರ್ಷಗಳಲ್ಲಿ ಶ್ರೀ ಬಿ. ಇಲಿಯಾಸ್ ಅಹ್ಮದ್ ರವರು ಯಾವುದೇ ರೀತಿ ನಿಯಮಾನುಸಾರ ಆಯ್ಕೆಯಾಗದೇ ಸ್ವಯಂ ಘೋಷಿತ ಅಧ್ಯಕ್ಷರಾಗಿರುವುದು ಮತ್ತು ಅನೇಕ ವರ್ಷಗಳಿಂದ ಸದರಿ ಸಂಸ್ಥೆಯ ಆಡಳಿತ ಮಂಡಳಿಯನ್ನು ಕರೆಯದೇ, ಆಡಿಟ್ ವರದಿಯನ್ನು ನಿಯಮಾನುಸಾರ ಸಲ್ಲಿಸದೇ ಇರುವುದು ಮತ್ತು ಹಣದುರಪಯೋಗ ಜೊತೆಗೆ ಅಧ್ಯಕ್ಷರು ತಮ್ಮ ಕುಲಸ್ತರನ್ನೇ ಸದಸ್ಯರನ್ನಾಗಿ ಮಾಡಿಸಲು

ಪ್ರಯತ್ನಿಸಿರುವುದು ಕಂಡು ಬಂದಿದ್ದು, ಅದರಂತೆ ಸದರಿ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರನ್ವಯ ನೇಮಿಸಬಹುದಾಗಿ ಪರಿಗಣಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ದಿನಾಂಕ: 22–02–2010 ರಂದು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಹಿಲಾಲ್ ಎಜುಕೇಷನ್ ಸೊಸೈಟಿ (ರಿ) ಗರ್ಗೇಶ್ವರಿ, ಟಿ. ನರಸೀಪುರರವರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ, ಸಂಸ್ಥೆಯ ಆಡಳಿತ ಮಂಡಳಿಯನ್ನು ಹಾಗೂ ಆಡಿಟನ್ನು ನಿಯಮಾನುಸಾರ ನಡೆಸದೇ ಇರುವುದು ಹಾಗೂ ಹಣದುರುಪಯೋಗ ಪ್ರಕರಣದಲ್ಲಿ ಅಧ್ಯಕ್ಷರು ತಮ್ಮ ಕುಲಸ್ತರನ್ನೇ ಸದಸ್ಯರನ್ನಾಗಿ ಮಾಡಿಸಲು ಪ್ರಯತ್ನಿಸಿರುವುದು ಇತ್ಯಾದಿಗಳು ಕಂಡು ಬಂದಿದ್ದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯ ಕಲಂ 11, 12 ಮತ್ತು 13 ಗಳ ಉಲ್ಲಂಘನೆಯಾಗಿರುವುದರಿಂದ ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರನ್ವಯ 27(ಎ) ಪ್ರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಕಾರಣ ಕೇಳುವ ಸೂಚನಾ ಪತ್ರವನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಅಧ್ಯಕ್ಷರು, ಹಿಲಾಲ್ ಎಜುಕೇಷನ್ ಸೊಸೈಟಿ (ರಿ) ಗರ್ಗೇಶ್ವರಿ, ಟಿ. ನರಸೀಪುರ ರವರು ಕಾರಣ ಕೇಳುವ ಸೂಚನಾ ಪತ್ರಕ್ಕೆ ಉತ್ತರ ನೀಡುತ್ತಾ ವಿಚಾರಣಾಧಿಕಾರಿ ಪಕ್ಷಾತೀತವಾಗಿ ವರ್ತಿಸದೆ ಆಡಳಿತ ಮಂಡಳಿಯ ಮೇಲೆ ಸುಳ್ಳು ಆರೋಪ ಮಾಡಿರುತ್ತಾರೆ, ವಿಚಾರಣೆಯನ್ನು ಸ್ವಾಭಾವಿಕ ನ್ಯಾಯದಡಿಯಲ್ಲಿ ನಡೆಸಿರುವುದಿಲ್ಲವೆಂದು ಮತ್ತು ಸಾಕ್ಷಧಾರಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿರುವುದಿಲ್ಲವೆಂದು, ಕಾಲಕ್ಕೆ ಸರಿಯಾಗಿ ಸ್ಪಷ್ಟೀಕರಣ ನೀಡಲು ಸಾಧ್ಯವಾಗಲಿಲ್ಲ. ಆದುದರಿಂದ ವಿಚಾರಣಾ ವರದಿ ನಿರಾಧಾರವಾದದ್ದು ಮತ್ತು ತಿರಸ್ಕರಿಸಲು ಮಾನ್ಯವಾದದ್ದು ಎಂದು ತಿಳಿಸುತ್ತಾ ಸದರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ 42 ವರ್ಷಗಳಿಂದಲೂ ಅಧ್ಯಕ್ಷ ಸ್ಥಾನವನ್ನು ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ ಮತ್ತು ಸರ್ಕಾರದ ಎಲ್ಲಾ ಇಲಾಖೆಯ ವರ್ಗದವರು ಗುರುತಿಸಿರುತ್ತಾರೆ ಹಾಗೂ ಅಧ್ಯಕ್ಷ ಪದವಿಯನ್ನು ಅಂಗೀಕರಿಸಿರುತ್ತಾರೆ. ವಿದ್ಯಾ ಸಂಸ್ಥೆಗೆ ಬಂದ ಧನ ಸಹಾಯ ಅಧ್ಯಕ್ಷ ಸ್ಥಾನಕ್ಕೆ ಪೂರಕವಾಗಿದೆ ಹಾಗೂ 1.36 ಎಕರೆ ಜಮೀನು ದಾನವಾಗಿ ಸಂಸ್ಥೆಗೆ ನೀಡಿರುತ್ತಾರೆ. ಸದರಿ ಜಮೀನಿನಲ್ಲಿರುವ ಕಟ್ಟಡದಲ್ಲಿ ಹೈಸ್ಕೂಲ್, ಪಿಯುಸಿ ಮತ್ತು ಡಿ.ಇಡ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದೆಯೆಂದು ತಿಳಿಸುತ್ತಾ ವಿಚಾರಣಾಧಿಕಾರಿ ನೀಡಿರುವ ತೀರ್ಪು ಸರಿಯಿಲ್ಲವೆಂದು ತಿಳಿಸುತ್ತಾ ವಿಚಾರಣಾಧಿಕಾರಿ ನೀಡಿರುವ ತೀರ್ಪು ಸರಿಯಲ್ಲವೆಂದು ತಿಳಿಸಿರುತ್ತಾರೆ. ಸದರಿ ದಾಖಲೆಗಳಾಗಿದ್ದು ಕಾಯ್ದೆ ಕಲಂ 11,12, ಮತ್ತು 13 ರ ಉಲ್ಲಂಘನೆಯನ್ನು ಮಾಡಿರುವುದಿಲ್ಲ. ಮಹಾಸಭೆಯ ನಡೆವಳಿಕೆ ಮತ್ತು ಆಡಿಟ್ ವರದಿಯನ್ನು ಇಲಾಖೆಗೆ ಕಳುಹಿಸುವ ಕರ್ತವ್ಯ ಮತ್ತು ಜವಾಬ್ದಾರಿ ಕಾರ್ಯದರ್ಶಿಯದೇ ಆಗಿರುತ್ತದೆ. ಆದ್ದರಿಂದ ಆಯಾ ವರ್ಷಗಳೆಲ್ಲಾ ಇಲಾಖೆಗೆ ಮಾಹಿತಿಯನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೂ ಕಾರ್ಯದರ್ಶಿಯು ಆಡಿಟ್ ಸಂದರ್ಭದಲ್ಲಿ ಸಂಘದ ಲೆಕ್ಕಪತ್ರಗಳನ್ನು ಬಚ್ಚಿಟ್ಟು ಸುಳ್ಳು ಮಾಹಿತಿಯನ್ನು ಆಡಿಟ್ ರವರಿಗೆ ನೀಡಿ ದುರುಪಯೋಗವೆಂದು ತೋರಿಸುತ್ತಾರೆ ಆದರೆ, ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ಈ ಸಂಬಂಧವಾಗಿ ಕಾರ್ಯದರ್ಶಿಯೇ ಒಂದು ಒಪ್ಪಿಗೆ ಪತ್ರ ಬರೆದು ಕೊಟ್ಟು ಅವರು ಮಾಡಿದ ತಪ್ಪನ್ನು ಒಪ್ಪಿಕೊಂಡಿರುತ್ತಾರೆಂದು ತಿಳಿಸುತ್ತಾ, ಈ ಎಲ್ಲಾ ದುಷ್ಕೃತ್ಯಗಳಿಗೆ ಕಾರಣರಾದ ಕಾರ್ಯದರ್ಶಿಗಳ ಮೇಲೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ಉತ್ತರವನ್ನು ಸಹಕಾರ ಸಂಘಗಳ ನಿಬಂಧಕರಿಗೆ ಕಳುಹಿಸಿಕೊಡುತ್ತಾ ಹೇಳಿಕೆಯನ್ನು ಪರಿಶೀಲಿಸಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಲು ದಿನಾಂಕ: 15–06–2010ರ ಪತ್ರದಲ್ಲಿ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಸಹಕಾರ ಸಂಘಗಳ ನಿಬಂಧಕರವರ ವರದಿಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಕಾರ್ಯದರ್ಶಿಯವರ ನಡುವೆ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಸದರಿ ಶೈಕ್ಷಣಿಕ ಸಂಸ್ಥೆಯ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರಿ ಸಂಸ್ಥೆಯ ಆಡಳಿತ ಸಂಪೂರ್ಣ ಕುಸಿದು ಹೋಗಿರುತ್ತದೆ ಹಾಗೂ ಹಾಗೆಯೇ ಮುಂದುವರಿದಿದೆ. ಆದುದರಿಂದ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27ಎ (ಸಿ) ರೀತ್ಯಾ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಸ್ಪಷ್ಟ ಅಭಿಪ್ರಾಯ ಸಲ್ಲಿಸುತ್ತಾ ಸಹಕಾರ ಸಂಘಗಳ ನಿಬಂಧಕರು ಮೈಸೂರು ಉಪ ವಿಭಾಗ, ಮೈಸೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಹಿಲಾಲ್ ಎಜುಕೇಷನ್ ಸೊಸೈಟಿ (ರಿ) ರಲ್ಲಿಯ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಮೂರು ತಿಂಗಳ ಕಾಲಾವಕಾಶ ನೀಡಿ ತದನಂತರ ಹಳೆ ಪರಿಸ್ಥಿತಿ ಇದೆಯೇ ಎಂಬ ಬಗ್ಗೆ ಅಪರ ನಿಬಂಧಕರು (ಆಡಳಿತ) ರವರಿಂದ ಖುದ್ದಾಗಿ ಪರಿಶೀಲಿಸಿ ಸವಿವರ ವರದಿ ಪಡೆದು ಕ್ರಮ ವಹಿಸಲು ಕೋರಲಾಗಿತ್ತು. ಈ ಬಗ್ಗೆ ಮೇಲೆ ಓದಲಾದ (6) ರ ದಿನಾಂಕ: 03/03/2011 ರ ಪ್ರಸ್ತಾವನೆಯಲ್ಲಿ ಸಹಕರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಹಿಲಾಲ್ ಎಜುಕೇಷನ್ ಸೊಸೈಟಿ (ರಿ), ಗರ್ಗೇಶ್ವರಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಈ ಸಂಸ್ಥೆಯು ನಿಯಮಾನುಸಾರ ಸದಸ್ಯರನ್ನು ಹೊಂದಿ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಿಕೊಂಡು ಕಾರ್ಯ ನಿರ್ವಹಿಸಲು ವಿಫಲರಾಗಿರುವುದು ಮತ್ತು ಸಂಘದ 2008–09 ಮತ್ತು 2009–10ನೇ ಸಾಲಿನ ಲೆಕ್ಕಪತ್ರಗಳನ್ನು ಸಕಾಲದಲ್ಲಿ ನಡೆಸಲು ವಿಫಲರಾಗಿರುವುದನ್ನು ಹಾಗೂ ಸಂಘದ 2007–08ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಪ್ರಕಾರ ಸಂಘದ ಅಧ್ಯಕ್ಷರಿಂದ ವಸೂಲಿಯಾಗಬೇಕಾಗಿರುವ ರೂ. 6,95,250–00 ಗಳು ಇದುವರೆವಿಗೂ ವಸೂಲಿ ಮಾಡಲು ವಿಫಲರಾಗಿರುವುದನ್ನು ಪರಿಗಣಿಸಿ, ಸದರಿ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಇ 18 ಸಸಂನೋ 2010, ಬೆಂಗಳೂರು, ದಿನಾಂಕ: 07ನೇ ಮೇ, 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರಡಿ ಪ್ರದತ್ತವಾದ ಅಧಿಕಾರದನ್ವಯ ಹೀಲಾಲ್ ಎಜುಕೇಷನ್ ಸೊಸೈಟಿ (ರಿ), ಗರ್ಗೇಶ್ವರಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇದರ ಅವ್ಯವಹಾರಗಳನ್ನು ಸರಿಪಡಿಸಲು ಹಾಗೂ ಈ ಸಂಸ್ಥೆಗೆ ಚುನಾವಣೆಯನ್ನು ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರನ್ನು ಆರು (06) ತಿಂಗಳ ಕಾಲಾವಧಿಯವರೆಗೆ ಆಡಳಿತಾಧಿಕಾರಿಯನ್ನಾಗಿ ಮಾಡಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ನೋಂದಾಯಿತವಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ನಂಜುಂಡಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ.

ಪಿ.ಆರ್ 1351

## ವಸತಿ ಸಚಿವಾಲಯ

**ವಿಷಯ :** ಬಸವ-ಇಂದಿರಾ ವಸತಿ ಯೋಜನೆಯನ್ನು ವಿಭಜಿಸಿ "ಬಸವ ವಸತಿ ಯೋಜನೆ" ಮತ್ತು " ಇಂದಿರಾ ಆವಾಸ್ ಯೋಜನೆ" ಗಳನ್ನಾಗಿ ಪ್ರತ್ಯೇಕವಾಗಿ ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ :** ಸರ್ಕಾರದ ಆದೇಶ ಸಂ. ವಇ 86 ಹೆಚ್‌ಎಎಮ್ 2009, ದಿನಾಂಕ : 13-4-2010.

ಪ್ರಸ್ತಾವನೆ :

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನ ಫಲಾನುಭವಿಗಳು ವಿವಿಧ ವಸತಿ ಯೋಜನೆಗಳಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ಬಳಸುವ ಕಟ್ಟಡ ಸಾಮಗ್ರಿಗಳ ಬೆಲೆಯಲ್ಲಿ ಮತ್ತು ಕಾರ್ಮಿಕರ ಕೂಲಿ ದರಗಳಲ್ಲಿ ಗಣನೀಯ ಹೆಚ್ಚಳವಾಗಿದ್ದರಿಂದ ಗುಡಿಸಲುವಾಸಿಗಳು ಸರ್ಕಾರವು ನೀಡುತ್ತಿರುವ ಸೀಮಿತ ಸಹಾಯಧನದಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳಲಾಗದೇ ಗುಡಿಸಲುಗಳಲ್ಲಿಯೇ ವಾಸವನ್ನು ಮುಂದುವರೆಸಿದ್ದರಿಂದ, ರಾಜ್ಯ ಸರ್ಕಾರದ ಗ್ರಾಮೀಣ ಆಶ್ರಯ ಯೋಜನೆ ಮತ್ತು ಕೇಂದ್ರ ಸರ್ಕಾರದ ಇಂದಿರಾ ಆವಾಸ್ ಯೋಜನೆಯನ್ನು ಒಟ್ಟಿಗೆ ಸಂಘಟಿಸಿ ಬಸವ-ಇಂದಿರಾ ವಸತಿ ಯೋಜನೆಯೆಂದು ಸಂಯೋಜಿಸಿ, ರಾಜ್ಯ ಸರ್ಕಾರದ ಸಹಾಯಧನ, ಕೇಂದ್ರ ಸರ್ಕಾರದ ಸಹಾಯಧನ ಹಾಗೂ ಫಲಾನುಭವಿಯ ವಂತಿಗೆ/ಸಾಲದೊಂದಿಗೆ ಮುಂಬರುವ ಐದು ವರ್ಷಗಳಲ್ಲಿ ಎಲ್ಲರಿಗೂ ಮನೆಗಳನ್ನು ಒದಗಿಸಲು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಯೋಜಿಸಲಾಗಿತ್ತು. ಆದರೆ, ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ಯೋಜನೆಯೊಂದಿಗೆ ಸಂಯೋಜಿಸಲು ಸಮ್ಮತಿಸದಿರುವುದರಿಂದ ಮತ್ತು ಈ ಎರಡೂ ಯೋಜನೆಗಳನ್ನು ವಿಲೀನಗೊಳಿಸಿದ ಪರಿಣಾಮವಾಗಿ ರಾಜ್ಯದ ಒಟ್ಟಾರೆ ಗುರಿ ಅರ್ಧಕ್ಕೆ ಇಳಿದಿದ್ದರಿಂದ, ಈ ಎರಡೂ ಯೋಜನೆಗಳನ್ನು ಬೇರ್ಪಡಿಸಿ ಅನುಷ್ಠಾನಗೊಳಿಸಲು ಈ ಕೆಳಗಿನ ಆದೇಶವನ್ನು ಪ್ರಸ್ತಾಪಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ವಇ 1 ಹೆಚ್‌ಎಎಚ್ 2011 (ಭಾ-1), ಬೆಂಗಳೂರು, ದಿನಾಂಕ : 17ನೇ ಮೇ 2011**

ರಾಜ್ಯ ಸರ್ಕಾರದ "ಗ್ರಾಮೀಣ ಆಶ್ರಯ ಯೋಜನೆ" ಮತ್ತು ಕೇಂದ್ರ ಸರ್ಕಾರದ "ಇಂದಿರಾ ಆವಾಸ್ ಯೋಜನೆ"ಗಳನ್ನು ಸಂಯೋಜಿಸಿ ಅನುಷ್ಠಾನಗೊಳಿಸುತ್ತಿದ್ದ "ಬಸವ ಇಂದಿರಾ ವಸತಿ ಯೋಜನೆ"ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬೇರ್ಪಡಿಸಿ ಇಂದಿರಾ ಆವಾಸ್ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯವಾಗಿ ಪ್ರತ್ಯೇಕವಾಗಿ ಅನುಷ್ಠಾನಗೊಳಿಸಲು ಹಾಗೂ ಬಸವ ವಸತಿ ಯೋಜನೆಯನ್ನು ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಈ ಕುರಿತು ಅವಶ್ಯವಿರುವ ಮಾರ್ಗಸೂಚಿಗಳನ್ನು ತಕ್ಷಣವೇ ಹೊರಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಆರ್. ವಲ್ಲೂರ**

ಪಿ.ಆರ್. 1352 ಪೀಠಾಧಿಕಾರಿ-2, ವಸತಿ ಇಲಾಖೆ.

## ವಸತಿ ಸಚಿವಾಲಯ

**ವಿಷಯ :** ಪಟ್ಟಣ ಆಶ್ರಯ ಸಮಿತಿಯ ಅಧಿಕಾರೇತರ ಸದಸ್ಯತ್ವವನ್ನು ರದ್ದು ಪಡಿಸುವ ಬಗ್ಗೆ

**ಓದಲಾಗಿದೆ :**

1. ಮಾನ್ಯ ಮುಖ್ಯ ಮಂತ್ರಿಯವರ ಉಪ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಸಿಎಂ/ಉಕಾ/ 374/ಜಿಎನ್/2010, ದಿನಾಂಕ : 2-12-2010.
2. ಸರ್ಕಾರದ ಆದೇಶ ಸಂಖ್ಯೆ : ವಇ 28 ಹೆಚ್‌ಎಎಸ್ 2010, ದಿನಾಂಕ : 12-5-2010.
3. ಸರ್ಕಾರದ ಆದೇಶ ಸಂಖ್ಯೆ : ವಇ 140 ಹೆಚ್‌ಎಎಸ್ 2010, ದಿನಾಂಕ : 12-11-2010.
4. ಸರ್ಕಾರದ ಆದೇಶ ಸಂಖ್ಯೆ : ವಇ **34** ಹೆಚ್‌ಎಎಸ್ 2010, ದಿನಾಂಕ : 28-5-2010.

**ಸರ್ಕಾರದ ಆದೇಶ ಸಂಖ್ಯೆ : ವಇ 228 ಹೆಚ್‌ಎಎಸ್ 2010, ಬೆಂಗಳೂರು, ದಿನಾಂಕ : 18ನೇ ಮೇ 2011.**

ರಾಯಚೂರು ಜಿಲ್ಲೆಯ ದೇವದುರ್ಗ ಪಟ್ಟಣ ಆಶ್ರಯ ಸಮಿತಿ, ತುಮಕೂರು ಜಿಲ್ಲೆಯ ಪಾವಗಡ ಪಟ್ಟಣ ಆಶ್ರಯ ಸಮಿತಿ ಹಾಗೂ ಬಿಜಾಪುರ ಜಿಲ್ಲೆಯ ಇಂಡಿ ಆಶ್ರಯ ಸಮಿತಿಗಳಿಗೆ ನಾಮನಿರ್ದೇಶಿಸಲ್ಪಟ್ಟ ಅಧಿಕಾರೇತರ ಸದಸ್ಯರ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಆರ್. ವಲ್ಲೂರ**

ಪಿ.ಆರ್. 1353 ಪೀಠಾಧಿಕಾರಿ-2, ವಸತಿ ಇಲಾಖೆ.

## ಶಿಕ್ಷಣ ಸಚಿವಾಲಯ

**ವಿಷಯ :** ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಸರಬರಾಜು ಮಾಡಬೇಕಿರುವ ಸಮವಸ್ತ್ರ ಬಟ್ಟೆಯ ದರ ಪರಿಷ್ಕರಣೆ ಬಗ್ಗೆ.

**ಓದಲಾಗಿದೆ :**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ : ಅ4(1) ಸ.ವ.ದ.ಪ-09/2010-11 ದಿನಾಂಕ : 20-1-2011.
2. ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ : 2-5-2011 ರಂದು ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

1. ಮೇಲೆ ಓದಲಾದ (1) ರಲ್ಲಿನ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2011-12ನೇ ಸಾಲಿನ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ಸರಬರಾಜು ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಹೆಚ್‌ಡಿಸಿ ಸಂಸ್ಥೆ ಹಾಗೂ

ಕೆಎಸ್‌ಪಿಡಿಸಿ ಸಂಸ್ಥೆಗಳು ವಿತರಣೆ ಮಾಡಲಾಗುವ ಸಮವಸ್ತ್ರ ಬಟ್ಟೆ ದರವನ್ನು ಪರಿಷ್ಕರಿಸಲು ಕೋರಿರುತ್ತಾರೆ. 2009-10ನೇ ಸಾಲಿನಲ್ಲಿ ಶೇಕಡ 5 ರಷ್ಟು ದರವನ್ನು ಪರಿಷ್ಕರಿಸಿದ್ದು ಆದರಂತೆ ಈ ಎರಡು ಸಂಸ್ಥೆಗಳು 2009-10 ಹಾಗೂ 2010-11ರ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಿರುತ್ತಾರೆ. ಆದರೆ ಈಗ ಪ್ರಸ್ತುತ ಇರುವ ಕಚ್ಚಾಮಾಲಿನ ದರಗಳಲ್ಲಿ ಬಟ್ಟೆ ವಿತರಿಸಲು ಅಸಾಧ್ಯವೆಂದು ಮೇಲಿನ ಎರಡು ಸಂಸ್ಥೆಗಳು ಮನವಿ ಮಾಡಿ ವಿದ್ಯಾವಿಕಾಸ ಯೋಜನೆಯಡಿ ಸಮವಸ್ತ್ರ ಸರಬರಾಜಿಗೆ ಪರಿಷ್ಕೃತ ದರ ನಿಗದಿಪಡಿಸುವಂತೆ ಕೋರಿರುತ್ತಾರೆ.

2. ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಸರಬರಾಜು ಮಾಡಬೇಕಿರುವ ಸಮವಸ್ತ್ರದರದ ಬಗ್ಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, (ಕೆಎಸ್‌ಪಿಡಿಸಿ) ಸಂಸ್ಥೆಗಳು ಹೆಚ್ಚಿನ ದರ ನೀಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಮೇಲೆ ಓದಲಾದ (2) ರಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು ಅನುಮೋದಿಸಿದ್ದು, ಅದರಂತೆ ಕ್ರಮವಹಿಸಲು ತಿಳಿಸಿರುವುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 359 ಯೋಯೋಕ 2009, ಬೆಂಗಳೂರು, ದಿನಾಂಕ : 11-5-2011.**

**(ಇಡಿ 34 ಸ್ಕೀಮರ(ಯುನಿಕ್) 2010, ದಿನಾಂಕ : 11-5-2011)**

3. 2011-12ನೇ ಸಾಲಿನ ವಿದ್ಯಾವಿಕಾಸ ಸಮವಸ್ತ್ರಗಳ ದರಪರಿಷ್ಕರಣೆ ಬಗ್ಗೆ ಕುರಿತು ಚರ್ಚಿಸಲಾಗಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

(ಅ) **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ :** ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮರವರ ನೂಲಿನ ದರ ಹಾಗೂ ನೇಕಾರರಿಗೆ ಕೊಡುತ್ತಿರುವ ಪರಿವರ್ತನಾ ದರಗಳನ್ನು ಆಧಾರವಾಗಿಟ್ಟುಕೊಂಡು ಉತ್ಪಾದನಾ ವೆಚ್ಚವನ್ನು ಗಮನಿಸಿ ಸಮವಸ್ತ್ರ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲು ನಿರ್ಣಯಿಸಿ, ಶಿಫಾರಸ್ಸು ಮಾಡಲಾಗಿದೆ.

| ಕ್ರಮ ಸಂಖ್ಯೆ | ನಮೂನೆ | ಪ್ರಸ್ತುತ ದರ ಪ್ರತಿ ಮೀಟರ್‌ಗೆ (ರೂ.ಗಳಲ್ಲಿ) | ಪರಿಷ್ಕೃತ ದರ ಪ್ರತಿ ಮೀಟರ್‌ಗೆ (ರೂ.ಗಳಲ್ಲಿ) |
|---|---|---|---|
| 1 | ನೇವಿ ಬ್ಲೂ ಕಾಟನ್ ಕೇಸ್‌ಮೆಂಟ್ | 36.59 | 47.50 |
| 2 | ನೇವಿ ಬ್ಲೂ ಪಾಲಿಯಸ್ಟರ್ ಸೂಟಿಂಗ್ | 88.20 | 112.00 |
| 3 | ಬ್ಲೂ ಪಾಲಿಯಸ್ಟರ್ ಶರ್ಟಿಂಗ್ | 45.15 | 54.00 |

(ಆ) **ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ :** ಪ್ರಸ್ತುತ ನಿಗಮವು ಬೆಳಗಾವಿ ವಿಭಾಗದ ನಾಲ್ಕು ಜಿಲ್ಲೆಗಳಿಗೆ ಚಕ್ಸ್ ನಮೂನೆಯ ಶರ್ಟಿಂಗ್ ಬಟ್ಟೆಗಳನ್ನು ಸಮವಸ್ತ್ರಗಳನ್ನಾಗಿ ಸರಬರಾಜು ಮಾಡುತ್ತಿದ್ದು, ರಾಜ್ಯದ ಉಳಿದೆಡೆ ಸರಬರಾಜು ಮಾಡುತ್ತಿರುವ ಪ್ಲೇನ್ ಶರ್ಟಿಂಗ್ ಬಟ್ಟೆಯನ್ನೇ ಸರಬರಾಜು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಹಾಗೂ ಸಮವಸ್ತ್ರಗಳ ದರಗಳನ್ನು ಕೆಳಕಂಡಂತೆ ಪರಿಷ್ಕರಿಸಲು ನಿರ್ಣಯಿಸಿ, ಶಿಫಾರಸ್ಸು ಮಾಡಲಾಗಿದೆ.

| ಕ್ರಮ ಸಂಖ್ಯೆ | ನಮೂನೆ | ಪ್ರಸ್ತುತ ದರ ಪ್ರತಿ ಮೀಟರ್‌ಗೆ (ರೂ.ಗಳಲ್ಲಿ) | ಪರಿಷ್ಕೃತ ದರ ಪ್ರತಿ ಮೀಟರ್‌ಗೆ (ರೂ.ಗಳಲ್ಲಿ) |
|---|---|---|---|
| 1 | ನೇವಿ ಬ್ಲೂ ಪೀವಿ ಸ್ಕರ್ಟ್ | 38.06 | 51.83 |
| 2 | ನೇವಿ ಬ್ಲೂ ಪಾಲಿಯಸ್ಟರ್ ಸೂಟಿಂಗ್ | 75.60 | 102.00 |
| 3 | ಬ್ಲೂ ಪಾಲಿಯಸ್ಟರ್ ಶರ್ಟಿಂಗ್ | 41.52 | 49.00 |

2011-12ನೇ ಸಾಲಿನ ಸಮವಸ್ತ್ರಗಳ ಸರಬರಾಜು ಪ್ರಕ್ರಿಯೆಯನ್ನು 2011 ರ ಜೂನ್ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಮೇಲಿನ ಸಂಸ್ಥೆಗಳಿಗೆ ಸೂಚಿಸಲಾಗಿದೆ. ನಿಗದಿಪಡಿಸಿರುವ ಅನುದಾನ ಮಿತಿಯೊಳಗೆ ಭರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಿಗೆ ಅನುಮತಿ ನೀಡಲಾಗಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : ಆಇ 355 ವೆಚ್ಚ 8 /2011, ದಿನಾಂಕ : 4-5-2011, ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಐ.ಎಫ್. ಮಾಗಿ**

ವಿಶೇಷಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿಗಳು

ಶಿಕ್ಷಣ ಇಲಾಖೆ (ಯೋಜನೆ).

ಪಿ.ಆರ್. 1354

## ಶಿಕ್ಷಣ ಸಚಿವಾಲಯ

## ತಿದ್ದುಪಡಿ ಆದೇಶ

**ಆದೇಶ ಸಂಖ್ಯೆ : ಇಡಿ 391 ಯೋಯೋಕ 2009, ಬೆಂಗಳೂರು ದಿನಾಂಕ : 21-5-2011.**

**ವಿಷಯ :** ಯಲಬುರ್ಗಾ ತಾಲ್ಲೂಕು, ಹಿರೇವಂಕಲಕುಂಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತುಮಕೂರಿಗೆ ಸ್ಥಳಾಂತರಿಸುವ ಬಗ್ಗೆ.

**ಓದಲಾಗಿದೆ :** ಸರ್ಕಾರಿ ಆದೇಶ ಸಂಖ್ಯೆ : ಇಡಿ 144 ಯೋಯೋಕ 2007, ದಿನಾಂಕ : 23-7-2007.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಹಿರೇವಂಕಲಕುಂಟೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿತ್ತು. ಈ ಕಾಲೇಜನ್ನು ಈಗ ತುಮಕೂರು ನಗರಕ್ಕೆ ಸ್ಥಳಾಂತರಿಸಲಾಗಿದ್ದು, ಅದರಂತೆ ತಿದ್ದಿ ಓದಿಕೊಳ್ಳತಕ್ಕದ್ದು, ಉಳಿದಂತೆ ಹಿರೇವಂಕಲಕುಂಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬ

ಉಪನ್ಯಾಸಕರು, ಒಬ್ಬ ಅಟೆಂಡರ್ ಹಾಗೂ ಒಬ್ಬ ಬೆರಳಚ್ಚುಗಾರರನ್ನು ಬಿಟ್ಟು, ತಾತ್ಕಾಲಿಕವಾಗಿ ಉಳಿದ ಹುದ್ದೆಗಳನ್ನು ತುಮಕೂರು ನಗರದ ಈ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ಥಳಾಂತರಸಲಾಗಿದ್ದು, ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲು ತಿಳಿಸಿದೆ. ಈಗಾಗಲೇ ಹಿರೇವಂಕಲಕುಂಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಮೀಪದ ಕಾಲೇಜಿಗೆ ಸೇರಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಸೂಚಿಸಿದೆ. ಉಳಿದಂತೆ ಉಲ್ಲೇಖಿತ ಆದೇಶದಲ್ಲಿರುವ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಐ.ಎಫ್. ಮಾಗಿ**

ವಿಶೇಷಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1355 ಶಿಕ್ಷಣ ಇಲಾಖೆ (ಯೋಜನೆ).

## ವಸತಿ ಸಚಿವಾಲಯ

**ವಿಷಯ :** ಶಿಕಾರಿಪುರ ಪಟ್ಟಣದ ವಿವಿಧ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ :** 1. ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರ ಪತ್ರ ಸಂಖ್ಯೆ : ಕಕೊನಿಮ/ಆಯುಕ್ತರು/ಶಿಕಾರಿಪುರ/ಪಿಬಿಎ/2010–11/979, ದಿನಾಂಕ : 4–3–2011.

2. ಸರ್ಕಾರದ ಆದೇಶ ಸಂಖ್ಯೆ : ವಇ 33 ಕೊಮಂಲೆ 2010, ದಿನಾಂಕ : 3–2–2011.

3. ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರ ಪತ್ರ ಸಂಖ್ಯೆ : ಕಕೊನಿಮ/ಆಯುಕ್ತರು/ಶಿಕಾರಿಪುರ/ಪಿಬಿಎ/2010–11, ದಿನಾಂಕ : 6–4–11.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ಶಿಕಾರಿಪುರ ಪಟ್ಟಣದ 16 ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ಅಡ್ಡಮೋರಿ ಮತ್ತು ತಡೆಗೋಡೆ ಕಾಮಗಾರಿಗಳನ್ನು ರೂ. 2900.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ 2010–11ನೇ ಸಾಲಿನಲ್ಲಿ 05.00 ಕೋಟಿಗಳನ್ನು ಆಯವ್ಯಯದ ಪೂರಕ ಅಂದಾಜು–೩೬೩೩ ರಲ್ಲಿ ಒದಗಿಸಿ ಬಿಡುಗಡೆ ಮಾಡಲಾಗಿತ್ತು, ಇನ್ನುಳಿದ ಅನುದಾನವನ್ನು 2011–12ನೇ ಸಾಲಿನಲ್ಲಿ ಒದಗಿಸಲಾಗುವುದೆಂದು ಸೂಚಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಅಂದಾಜು ಮೊತ್ತವು ರೂ. 5.00 ಕೋಟಿ ಮೀರಿರುವುದರಿಂದ ಕಾಮಗಾರಿ ಪ್ರಾರಂಭಿಸುವ ಮುನ್ನ ಸಚಿವ ಸಂಪುಟದ ಅನುಮೋದನೆ ಪಡೆಯುವಂತೆಯೂ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ರೂ. 15.00 ಕೋಟಿಗಳಿಗೆ ಸೀಮಿತಗೊಳಿಸಿ, ಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸರ್ಕಾರದ ಸೂಚನೆಯಂತೆ ಈಗಾಗಲೇ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗಿದ್ದ ರೂ. 29.00 ಕೋಟಿಗಳ ಅಂದಾಜು ಪಟ್ಟಿಯನ್ನು ಮಾರ್ಪಡಿಸಿ, ಶಿಕಾರಿಪುರ ಪಟ್ಟಣದ ಈ ಕೆಳಕಂಡ 8 ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ಅಡ್ಡಮೋರಿ ಮತ್ತು ತಡೆಗೋಡೆ ಕಾಮಗಾರಿಗಳನ್ನು ರೂ. 15.00 ಕೋಟಿಗೆ ಸೀಮಿತಗೊಳಿಸಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಸಚಿವ ಸಂಪುಟದ ಅನುಮೋದನೆಗಾಗಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕೊಳಚೆ ಪ್ರದೇಶದ ಹೆಸರು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ರಾಘವೇಂದ್ರ ಬಡಾವಣೆ | 124.10 |
| 2 | ರಂಗನಾಥಪುರ | 48.35 |
| 3 | ಹಳಿಯಾರು ಹೊಸಕೇರಿ | 510.45 |
| 4 | ಕುಂಬಾರ ಗುಂಡ್ತಿ | 203.90 |
| 5 | ರಾಜಶೇಖರ್ ಟಾಕೀಸ್ ಹಿಂಭಾಗ | 32.60 |
| 6 | ಜಯನಗರ | 149.30 |
| 7 | ಖಾಜಿ ಕೊಪ್ಪಲು | 122.47 |
| 8 | ದೇಜರಾಜ ಅರಸ್ ಬಡಾವಣೆ | 157.35 |
| | ಒಟ್ಟು | 1348.52 |
| | ಟೆಂಡರ್ ಪ್ರೀಮಿಯಂ ಮತ್ತು ಇತರೆ | 151.48 |
| | ಒಟ್ಟು | 1500.00 |

ಸರ್ಕಾರದ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ವಇ 33 ಕೊಮಂಲೆ 2010, ಬೆಂಗಳೂರು, ದಿನಾಂಕ : 18-5-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ಶಿಕಾರಿಪುರ ಪಟ್ಟಣದ 8 ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ಅಡ್ಡಮೋರಿ ಮತ್ತು ತಡೆಗೋಡೆ ಕಾಮಗಾರಿಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರೂ. 15.00 ಕೋಟಿಯ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ.

| ಕ್ರಮ ಸಂಖ್ಯೆ | ಕೊಳಚೆ ಪ್ರದೇಶದ ಹೆಸರು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ರಾಘವೇಂದ್ರ ಬಡಾವಣೆ | 124.10 |
| 2 | ರಂಗನಾಥಪುರ | 48.35 |
| 3 | ಹಳಿಯಾರು ಹೊಸಕೇರಿ | 510.45 |
| 4 | ಕುಂಬಾರ ಗುಂಡಿ | 203.90 |
| 5 | ರಾಜಶೇಖರ್ ಟಾಕೀಸ್ ಹಿಂಭಾಗ | 32.60 |
| 6 | ಜಯನಗರ | 149.30 |
| 7 | ಖಾಜಿ ಕೊಪ್ಪಲು | 122.47 |
| 8 | ದೇಜರಾಜ ಅರಸ್ ಬಡಾವಣೆ | 157.35 |
| | ಒಟ್ಟು | 1348.52 |
| | ಟೆಂಡರ್ ಪ್ರೀಮಿಯಂ ಮತ್ತು ಇತರೆ | 151.48 |
| | ಒಟ್ಟು | 1500.00 |

ಈ ಆದೇಶವನ್ನು ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ : ಸಿ : 207/2011, ದಿನಾಂಕ : 5-5-2011ರಲ್ಲಿ ಅನುಮೋದನೆ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಹೆಚ್. ಹನುಮಂತಯ್ಯ**
ಪೀಠಾಧಿಕಾರಿ-1, ವಸತಿ ಇಲಾಖೆ.

ಪಿ.ಆರ್. 1356

## ನಗರಾಭಿವೃದ್ಧಿ ಸಚಿವಾಲಯ

**ವಿಷಯ :** ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿಗಳು ಹಾಗೂ ಪ್ರಭಾರಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

**ಓದಲಾಗಿದೆ :** 1. ಉಪ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಜಿ-4/ಸಿಆರ್ 1/2010 ರಾಯಚೂರು ದಿನಾಂಕ : 20-1-2011.

2. ಸರ್ಕಾರದ ಆದೇಶ ಸಂಖ್ಯೆ : ನಅಇ 23 ಗುಅಪ್ರಾ 2010, ದಿನಾಂಕ : 5-4-2010.

3. ತನಿಖಾಧಿಕಾರಿಯವರ ವರದಿ ಸಂಖ್ಯೆ : 1/ಗುನ್ನೆ/ಲೋಕ್/ಠಾಣೆ/ಆರ್‌ಸಿಆರ್/10, ದಿನಾಂಕ : 25-1-2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ಪತ್ರದಲ್ಲಿ ಉಪ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು, ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿಗಳು ಹಾಗೂ ಪ್ರಭಾರಿ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ಕಲಂ 7, 13(1)ಲ ಜೊತೆಗೆ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1) (ಬಿ) ರ ಅನ್ವಯ ಸರ್ಕಾರದ ಮಂಜೂರಾತಿಯನ್ನು ನೀಡಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯೊಂದಿಗೆ ತನಿಖಾ ವರದಿಯ ನೆರಳಚ್ಚು ಪ್ರತಿ, ಪ್ರಥಮ ವರ್ತಮಾನ ವರದಿಯ ಪ್ರತಿ, ಟ್ರ್ಯಾಪ್ ಪೂರ್ವದ ಮಹಜರು, ಟ್ರ್ಯಾಪ್ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ ಕೃತ್ಯ ನಡೆದ ಸ್ಥಳದ ನಕ್ಷೆ ದಾಖಲೆಗಳ ಪ್ರತಿಗಳನ್ನು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಸಹ ಸಲ್ಲಿಸಿರುತ್ತಾರೆ.

ಮೊಹ್ಮದ್ ನಯೀಮ್ ಅಶರಫ್ ಬಿನ್ ಅಬ್ದುಲ್ ಶುಕೂರ್‌ಸಾಬ್, ರಾಯಚೂರು ಇವರು ಯಕ್ಲಾಸ್ಪುರ ಗ್ರಾಮದಲ್ಲಿ ಖರೀದಿಸಿದ ಜಮೀನಿನಲ್ಲಿ ವಸತಿ ಉದ್ದೇಶಕ್ಕಾಗಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದವರಿಂದ ಶೇ 40% ನಿವೇಶನಗಳ ಅಂತಿಮ ಅನುಮೋದನೆ ಆದೇಶ ಪಡೆಯಲು ಪ್ರಸ್ತಾಪಿತ ಪ್ರಾಧಿಕಾರದ ಆಯುಕ್ತರಾದ ಶ್ರೀ ಸುಂಕಪ್ಪ, ಶ್ರೀ ಎಂ.ಮುನೀರುದ್ದಿನ್, ಡ್ರಾಫ್ಟ್ಸ್‌ಮೆನ್ ಹಾಗೂ ಶ್ರೀ ನರಸಿಂಹಲು, ದ್ವಿ.ದ.ಸ., ಇವರುಗಳು ಲಂಚಕ್ಕಾಗಿ ಒತ್ತಾಯಿಸಿರುವುದಾಗಿ ತಿಳಿಸಿ, ಲೋಕಾಯುಕ್ತ ಕಛೇರಿಗೆ ನೀಡಿದ ದೂರಿನ ಮೇರೆಗೆ, ಲೋಕಾಯುಕ್ತ ಪೊಲೀಸರು ದಿನಾಂಕ : 21-1-2010 ರಂದು ಬೀಸಿದ ಬಲೆಗೆ ಸಿಕ್ಕಿಬಿದ್ದ ಪ್ರಯುಕ್ತ ಇವರ ಮೇಲಿನ ಭ್ರಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆಂದು ಸದರಿ ಅಧಿಕಾರಿ ಹಾಗೂ ನೌಕರರುಗಳು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟುಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರುಗಳನ್ನು ಕೂಡಲೆ ಅಮಾನತ್ತಿನಲ್ಲಿಡಬೇಕೆಂದು ಹಾಗೂ ಇವರುಗಳ ಲೀನ್ (ಸ್ಥಾನವನ್ನು) ಬೇರೆ ಕಡೆ ವರ್ಗಾಯಿಸಲು ಶಿಫಾರಸ್ಸು ಮಾಡಿರುವಂತೆ ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಸದರಿ ಆದೇಶದ ವಿರುದ್ಧ ಶ್ರೀ ಬಿ. ಸುಂಕಪ್ಪ ಮತ್ತು ಶ್ರೀ ಮುನಿರುದ್ದೀನ್‌ರವರುಗಳು ಕೆ.ಎ.ಟಿ.ಯಲ್ಲಿ ಅರ್ಜಿ ಸಲ್ಲಿಸಿ ಅಮಾನತ್ತುಗೊಂಡ ಆದೇಶವನ್ನು ರದ್ದುಪಡಿಸುವಂತೆ ಕೋರಿದ ಹಿನ್ನಲೆಯಲ್ಲಿ ಸದರಿರವರು ಸಾಕ್ಷಿ ಪುರಾವೆಗಳ ಸಮೇತ ಸಿಕ್ಕಿ ಬೀಳದ ಕಾರಣ ದಿನಾಂಕ : 27-5-2010ರ

ಆದೇಶವನ್ನು ರದ್ದುಪಡಿಸುವಂತೆ ಮಾನ್ಯ ಕೆ.ಎ.ಟಿ. ಆದೇಶಿಸಿದ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ನಅಇ 23 ಗುಅಪ್ರಾ 2010, ದಿನಾಂಕ : 30–9–2010ರಲ್ಲಿ ಸದರಿ ಅಧಿಕಾರಿ/ನೌಕರರನ್ನು ಸೇವೆಗೆ ಪುನರ್ ಸ್ಥಾಪಿಸಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ವರ್ಗಾಯಿಸಿ ಆದೇಶಿಸಲಾಗಿದೆ.

ಉಪ ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಮೇಲೆ ಓದಲಾದ (1) ಪತ್ರದಲ್ಲಿ ಸಲ್ಲಿಸಿರುವ ತನಿಖಾ ವರದಿಯ ನೆರಳಚ್ಚು ಪ್ರತಿ, ಪ್ರಥಮ ವರ್ತಮಾನ ವರದಿಯ ಪ್ರತಿ ಟ್ರ್ಯಾಪ್ ಪೂರ್ವದ ಮಹಜರು, ಟ್ರ್ಯಾಪ್ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ ಕೃತ್ಯ ನಡೆದ ಸ್ಥಳದ ನಕ್ಷೆ ದಾಖಲೆಗಳ ಪ್ರತಿಗಳನ್ನು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಮತ್ತು ಮೇಲೆ ಓದಲಾದ ಕ್ರಮಾಂಕ (3)ರ ವರದಿಯ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ಕಲಂ, 7 13(1)(ಡಿ) ಜೊತೆಯಲ್ಲಿ ಓದಲಾದ 13(2) ರ ಅಡಿಯಲ್ಲಿನ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತವೆ ಎನ್ನುವ ವರದಿಯ ಹಿನ್ನಲೆಯಲ್ಲಿ ಅಪಾದಿತ ಅಧಿಕಾರಿಯಾದ ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿಗಳು, ಹಾಗೂ ಈ ಹಿಂದಿನ ಪ್ರಭಾರಿ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ಇವರನ್ನು ಕಲಂ 19(1)(ಬಿ) ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ನಅಇ 23 ಗುಅಪ್ರಾ 2010, ಬೆಂಗಳೂರು, ದಿನಾಂಕ : 21–5–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿ. ಸುಂಕಪ್ಪ, ಕಾರ್ಯದರ್ಶಿಗಳು, ಹಾಗೂ ಈ ಹಿಂದೆ ಪ್ರಭಾರಿ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ಪ್ರಸ್ತುತ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಇವರನ್ನು ಹುದ್ದೆಯಿಂದ ತೆಗೆದು ಹಾಕುವ (ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರಿಯಾದ ಶಂಭು ದಯಾಲ್ ಮೀನಾ ಭಾ.ಅ.ಸೇ., ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಆದ ನಾನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರ ಕಲಂ 7, 13(1) (ಡಿ) ಜೊತೆಯಲ್ಲಿ ಓದಲಾದ 13(2) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಸದರಿ ಕಾಯ್ದೆಯ ಕಲಂ 19(1)(ಬಿ) ರನ್ವಯ ಇವರನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಸವರಾಜ್ ಬರದೇಲಿ**

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಪಿ.ಆರ್. 1376 ನಗರಾಭಿವೃದ್ಧಿ ಇಲಾಖೆ.

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ದಿನಾಂಕ : 31–7–10ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿ.ಜಾ/ಭೂಸ್ವಾಪ್ರ/2010–11/4402.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಪಾವತಿಸಲು ರೂ. 3,41,040–00ಗಳ ಅನುದಾನ ಬಿಡುಗಡೆ ಮಾಡಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರದಲ್ಲಿ ಕೋರಿದ್ದಾರೆ.

ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ : 3–3–94ರಂದು ಹೊರಡಿಸಿದ್ದು, ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರು ದಿನಾಂಕ : 30–6–1997 ರಂದು ರಚಿಸಿ ಐತೀರ್ಪನ್ನು ಪ್ರತಿ ಎಕರೆಗೆ ರೂ. 17,000/–ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ.

ಶ್ರೀ ಮಹಾಲಿಂಗ ರತ್ನಪ್ಪ ಕಂಬಾರ್, ಬೋರಗಲ್ ಗ್ರಾಮದ ಸ.ನಂ. 288ರ 0–18 ಎಕರೆ ಜಮೀನಿನ ಭೂಮಾಲೀಕರು ಐತೀರ್ಪಿನಂತೆ ಪರಿಹಾರ ಪಡೆದ ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಹುಕ್ಕೇರಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. 14/03ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ : 7–4–04ರಂದು ನೀಡಿರುವ ಆದೇಶದಲ್ಲಿ ಭೂಮೌಲ್ಯವನ್ನು 2.00 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ಈ ಆದೇಶದ ವಿರುದ್ಧ ಸಹಾಯಕ ಆಯುಕ್ತರು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರು ಉಚ್ಚ ನ್ಯಾಯಾಲಯದಲ್ಲಿ ಎಂಎಫ್ಎ ಸಂಖ್ಯೆ : 7593/04 ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ : 4–3–2005 ರಂದು ಮೇಲ್ಮನವಿಯನ್ನು ವಜಾ ಮಾಡಿದೆ. ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿ.ಸಿ. ಸಂಖ್ಯೆ : 8433/05 ನ್ನು ದಾಖಲಿಸಿದ್ದು, ದಿನಾಂಕ: 19–9–05 ರಂದು ವಜಾಗೊಂಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ :

| ಕ್ರ. ಸಂ. | ಎಲ್ಎಸಿ ಸಂಖ್ಯೆ | ಎಂಎಫ್ಎ ಸಂಖ್ಯೆ | ಬೋರಗಲ್ ಗ್ರಾಮದ ಸ.ನಂ. | ವಿಸ್ತೀರ್ಣ ಎ–ಗುಂ | ಪರಿಹಾರ ಮೊತ್ತ ರೂ.ಗಳಲ್ಲಿ |
|---|---|---|---|---|---|
| 1 | 14/03 | 7593/04 | 288 | 0–18 | 3,41,040–00 |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸನೀಇ 124 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 19–5–2011**

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 288ರ 0–18 ರ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಲೆಕ್ಕಾಹಾಕಿದ ಪರಿಹಾರ ರೂ. 3,41,040–00 ಗಳನ್ನು (ಮೂವತ್ತೊಂದು ಲಕ್ಷದ ನಲವತ್ತೊಂದು ಸಾವಿರದ ನಲವತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿ ಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–132–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ–ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 3,41,040–00ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಗೋಪಾಲ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1377 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಪುರದಾಳ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾ/2010–11/3782, ದಿನಾಂಕ : 1–7–2010.

ಪ್ರಸ್ತಾವನೆ :

ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಪುರದಾಳ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕೋರವಾರ್ ಗ್ರಾಮದ ಜಮೀನುಗಳಿಗೆ ಬಿಜಾಪುರದ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಮೇಲೆ ಓದಲಾದ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 27–4–2000ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಭೂಮಾಲೀಕರು ದಿನಾಂಕ : 21–5–2002 ರಂದು ರಚಿಸಿದ ಐತೀರ್ಪಿನ ಪ್ರಕಾರ ಪರಿಹಾರದ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಬಿಜಾಪುರ ಇಲ್ಲಿ ಸಲ್ಲಿಸಿದ ಎಲ್.ಎ.ಸಿ 121/03, 126/03, 131/03, 192/03 ಮತ್ತು 197/03 ಪ್ರಕರಣಗಳಲ್ಲಿ ದಿನಾಂಕ : 24–6–06 ರಂದು ನೀಡಿರುವ ಆದೇಶದಲ್ಲಿ ಪರಿಹಾರವನ್ನು ರೂ. 35,250/–ಕ್ಕೆ ಹೆಚ್ಚಿಸಿದೆ. ಈ ಪ್ರಕರಣಗಳಿಲ್ಲಿ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸನೀಇ 103 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 17–5–2011**

ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಪುರದಾಳ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕೋರವಾರ್ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಧನ ಮೊತ್ತ ರೂ. 13,96,866–00 ಗಳನ್ನು (ಹದಿಮೂರು ಲಕ್ಷದ ತೊಂಭತ್ತಾರು ಸಾವಿರದ ಎಂಟು ನೂರ ಅರವತ್ತಾರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-132-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ-ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 13,96,866-00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಗೋಪಾಲ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1378 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜೆಪಿ/ಭೂಸ್ವಾಪ್ರ/2010-11/915, ದಿನಾಂಕ : 22-2-2011.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಚಿಂಚೋಳಿ ಸಿವಿಲ್ ನ್ಯಾಯಾಲಯ ಆದೇಶದಂತೆ ಪರಿಹಾರ ಪಾವತಿಸಲು ರೂ. 31,47,649-00ಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಮೇಲೆ ಓದಲಾದ ದಿನಾಂಕ : 22-2-11 ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 4-4-1995 ರಂದು ಹೊರಡಿಸಿದೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿ, ಗುಲ್ಬರ್ಗಾ ಇವರು ದಿನಾಂಕ : 2-12-1997 ರಂದು ರಚಿಸಿರುವ ಐತೀರ್ಪಿನಂತೆ ಹಣ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸೇಡಂ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಸಿವಿಲ್ ನ್ಯಾಯಾಲಯ ಪ್ರತಿ ಎಕರೆಗೆ ರೂ. 34,650/-ಗಳ ಬೆಲೆಯನ್ನು ನಿಗದಿಪಡಿಸಿ, ಈ ಮೊತ್ತದ ಮೇಲೆ ಶಾಸನಬದ್ಧ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿಗೆ ತೃಪ್ತರಾಗದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರ ಧನಕ್ಕಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ (ಎಂಎಫ್‌ಎ) ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ಮೇಲ್ಮನವಿಯ ಅಡ್ಡ ತಕರಾರು ಅರ್ಜಿಗಳಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ನಿಗದಿಪಡಿಸಿದ್ದ ರೂ. 34,650/-ಗಳಿಂದ ರೂ. 47,880/-ಗಳಿಗೆ ಹೆಚ್ಚಿಸಿ ಹಾಗೂ ಮತ್ತಿತರ ಸವಲತ್ತುಗಳನ್ನು ನೀಡಲು ತೀರ್ಪು ನೀಡಿದೆ.

| ಕ್ರ. ಸಂ. | ಎಲ್‌ಎಸಿ ಸಂಖ್ಯೆ | ಎಂಎಫ್‌ಎ ಸಂಖ್ಯೆ | ಕೊಡ್ಲಿಅಲ್ಲಾಪುರ ಗ್ರಾಮದ ಸ.ನಂ. | ವಿಸ್ತೀರ್ಣ ಎ-ಗುಂ | ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | 412/02 | 7349/06 | 37 | 3-20 | 210537 |
| 2 | 413/02 | 7350/06 | 41 | 7-30 | 466185 |
| 3 | 414/02 | 7351/06 | 42 | 5-00 | 300764 |
| 4 | 415/02 | 7352/06 | 37 | 3-20 | 210534 |
| 5 | 417/02 | 7353/06 | 39 | 2-32 | 769959 |
| 6 | 418/02 | 7354/06 | 42 | 5-00 | 300764 |
| 7 | 419/02 | 7355/06 | 36/ಬಿ | 3-33 | 230087 |
| ಒಟ್ಟು | | | | | 2488830 |

***ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 681 ಎಲ್‌ಎಸ್‌ಪಿ 2008, ದಿನಾಂಕ : 5-5-08 ರಲ್ಲಿ ಅಭಿಪ್ರಾಯ ನೀಡಿದೆ.

ವಿಷಯವನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸನೀಇ 33 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 21-5-2011**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕೊಡ್ಲಿ ಅಲ್ಲಾಪುರ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯದ ತೀರ್ಪಿನಂತೆ ರೂ. 24,88,830-00 ಗಳನ್ನು (ಇಪ್ಪತ್ತಾಲ್ಕು ಲಕ್ಷದ ಎಂಬತ್ತೆಂಟು ಸಾವಿರದ ಎಂಟು ನೂರ ಮೂವತ್ತು ರೂ.ಗಳು ಮಾತ್ರ) ಪರಿಹಾರ ಪಾವತಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಲೆಕ್ಕಾಚಾರ ತಃಖ್ತೆಯನ್ನು ಮತ್ತೊಮ್ಮೆ ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಎರಡನೇ ಬಾರಿ ಹೆಚ್ಚಿನ ಮೊತ್ತ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–132–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ–ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 24,88,830–00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಗೋಪಾಲ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1379 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ತಾಲ್ಲೂಕು, ಓಕಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2011–12/2304, ದಿನಾಂಕ : 27–4–2011.

ಪ್ರಸ್ತಾವನೆ :

ಗುಲ್ಬರ್ಗಾ ತಾಲ್ಲೂಕು, ಓಕಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಸವಕಲ್ಯಾಣ ತಾಲ್ಲೂಕಿನ ಕಲ್ಲಖೋರಾ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ಆದೇಶ ಪ್ರಕಾರ ಪರಿಹಾರ ಪಾವತಿಸಲು ರೂ. 2,57,85,429–00ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ : 27–4–11 ರ ಪತ್ರದಲ್ಲಿ ಕೋರಿರುತ್ತಾರೆ.

ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ : 12–5–2005 ರಂದು ಹೊರಡಿಸಿದೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ವಿಶೇಷ ಭೂಸ್ವಾಧೀನಾಧಿಕಾರಿ, ಬೀದರ್ ಇವರು ದಿನಾಂಕ : 2–2–2007 ರಂದು ರಚಿಸಿದ ಐತೀರ್ಪಿನಲ್ಲಿ ಪ್ರತಿ ಎಕರೆ ಖುಷ್ಕಿ ಜಮೀನಿಗೆ ರೂ. 23,826–00 ಮತ್ತು ನೀರಾವರಿ ಜಮೀನಿಗೆ ರೂ. 29,782–00 ಗಳ ಮಾರುಕಟ್ಟೆ ಬೆಲೆ ನಿಗಧಿಪಡಿಸಿರುತ್ತಾರೆ. ಈ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಬಸವಕಲ್ಯಾಣ ಇಲ್ಲಿ ಸಲ್ಲಿಸಿದ್ದ ಕೆಳಕಂಡ ಎಲ್.ಎ.ಸಿ. ಪ್ರಕರಣಗಳನ್ನು ಪರಿಶೀಲಿಸಿ ನ್ಯಾಯಾಲಯವು ದಿನಾಂಕ 22–3–2010 ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆ ಖುಷ್ಕಿ ಜಮೀನಿಗೆ ರೂ. 1,60,000–00 ಮತ್ತು ನೀರಾವರಿ ಜಮೀನಿಗೆ ರೂ. 3,00,000–00 ಗಳಂತೆ ಮಾರುಕಟ್ಟೆ ಬೆಲೆಯನ್ನು ನಿಗಧಿಪಡಿಸಿ ಮತ್ತಿತರ ಶಾಸನಬದ್ಧ ಸವಲತ್ತುಗಳನ್ನು ನೀಡಲು ಆದೇಶಿಸಿದೆ.

| ಕ್ರ. ಸಂ. | ಎಲ್‌ಎಸಿ ಸಂಖ್ಯೆ | ಕಲ್ಲಖೋರಾ ಗ್ರಾಮದ ಸ.ನಂ. | ವಿಸ್ತೀರ್ಣ ಎ–ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 38/08 | 139/1 | 10–30 | 7931160 |
| 2 | 45/07 | 139/1 | 03–17 | 2526904 |
| 3 | 46/07 | 136/13 | 00–20 | 185899 |
| 4 | 47/07 | 137/1 | 05–20 | 2044895 |
| 5 | 58/07 | 139/1 | 08–00 | 5902258 |
| 6 | 59/07 | 138/4 | 10–24 | 3941069 |
| 7 | 60/07 | 137/2 | 08–30 | 3256241 |
| ಒಟ್ಟು | | | | 25785426 |

ಮೇಲ್ಕಂಡ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 905 ಎಲ್‌ಸಿಜಿ 2010, ದಿನಾಂಕ : 13–1–2011 ರಲ್ಲಿ ಅಭಿಪ್ರಾಯಪಟ್ಟಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸನೀಇ 55 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 19–5–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಗುಲ್ಬರ್ಗಾ ತಾಲ್ಲೂಕು ಓಕಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಸವಕಲ್ಯಾಣ ತಾಲ್ಲೂಕಿನ ಕಲ್ಲಖೋರಾ ಗ್ರಾಮದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ರೂ. 2,57,85,426–00 (ಎರಡು ಕೋಟಿ ಐವತ್ತೇಳು ಲಕ್ಷದ ಎಂಭತ್ತೈದು ಸಾವಿರದ ನಾಲ್ಕುನೂರ ಇಪ್ಪತ್ತಾರು ರೂಪಾಯಿಗಳು ಮಾತ್ರ) ಗಳ ಪರಿಹಾರ ಪವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–132–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ–ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 2,57,85,426–00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಗೋಪಾಲ್**

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1380 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಪೇಠಶಿರೂರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2011–12/2307, ದಿನಾಂಕ : 27–4–2011.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಪೇಠಶಿರೂರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪೇಠಶಿರೂರ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಪರಿಹಾರ ಪಾವತಿಸಲು ರೂ. 25,67,957–00ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ : 27–4–11 ರ ಪತ್ರದಲ್ಲಿ ಕೋರಿರುತ್ತಾರೆ.

ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ : 24–8–2006 ರಂದು ಹೊರಡಿಸಿದೆ. ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿ, ಗುಲ್ಬರ್ಗಾ ಇವರು ದಿನಾಂಕ : 21–11–2007 ರಂದು ರಚಿಸಿರುವ ಐತೀರ್ಪಿನಂತೆ ಪ್ರತಿ ಎಕರೆಗೆ ರೂ. 28,000–00 ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಈ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಚಿತ್ತಾಪೂರ ಇಲ್ಲಿ ಸಲ್ಲಿಸಿದ್ದ ಕೆಳಕಂಡ ಎಲ್.ಎ.ಸಿ. ಪ್ರಕರಣಗಳನ್ನು ಪರಿಶೀಲಿಸಿ ನ್ಯಾಯಾಲಯವು ದಿನಾಂಕ 15–7–2010 ರಂದು ನೀಡಿರುವ ಆದೇಶದಲ್ಲಿ ಈ ಜಮೀನಿನ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆಗೆ ರೂ. 1,18,000–00 ಗಳನ್ನು ನಿಗಧಿಪಡಿಸಿ ಇತರೆ ಶಾಸನಬದ್ಧ ಸವಲತ್ತುಗಳನ್ನು ನೀಡಲು ಆದೇಶಿಸಿದೆ.

| ಕ್ರ. ಸಂ. | ಎಲ್ಎಸಿ ಸಂಖ್ಯೆ | ಪೇಠಶಿರೂರ ಗ್ರಾಮದ ಸ.ನಂ. | ವಿಸ್ತೀರ್ಣ ಎ–ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 76/08 | 335 | 6–10 | 1167071 |
| 2 | 77/08 | 331/2 | 2–20 | 467128 |
| 3 | 78/08 | 336/2 | 5–00 | 933757 |
| ಒಟ್ಟು | | | | 2567957 |

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 1020 ಎಲ್‌ಸಿಜಿ 2010, ದಿನಾಂಕ : 28–3–2011, ಆರ್‌ಡಿ 1047 ಎಲ್‌ಸಿಜಿ 2010, ದಿನಾಂಕ : 28–12–2010 ಮತ್ತು ಆರ್‌ಡಿ 1036 ಎಲ್‌ಸಿಜಿ 2010, ದಿನಾಂಕ : 28–12–2010 ರಲ್ಲಿ ಅಭಿಪ್ರಾಯಪಟ್ಟಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸನೀಇ 45 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 19-5-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಪೇಠಶಿರೂರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪೇಠಶಿರೂರ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂ.ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಎಲ್.ಎ.ಸಿ ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ರೂ. 25,67,957-00 (ಇಪ್ಪತ್ತೈದು ಲಕ್ಷದ ಅರವತ್ತೇಳು ಸಾವಿರದ ಒಂಭೈನೂರ ಐವತ್ತೇಳು ರೂಪಾಯಿಗಳು ಮಾತ್ರ) ಗಳ ಪರಿಹಾರ ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-132-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ-ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 25,67,957-00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಗೋಪಾಲ್**
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 1381

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಪೇಠಶಿರೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2011-12/2306, ದಿನಾಂಕ : 27-4-2011.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಪೇಠಶಿರೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪೇಠಶಿರೂರ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಪರಿಹಾರ ಪಾವತಿಸಲು ರೂ. 29,39,094-00 ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ : 27-4-11 ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ : 24-8-2006 ರಂದು ಹೊರಡಿಸಿದೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿ, ಗುಲ್ಬರ್ಗಾ ಇವರು ದಿನಾಂಕ : 21-11-2007 ರಂದು ರಚಿಸಿರುವ ಐತೀರ್ಪಿನಲ್ಲಿ ಪ್ರತಿ ಎಕರೆ ಜಮೀನಿಗೆ ರೂ. 28,000-00 ಗಳ ಮಾರುಕಟ್ಟೆ ಬೆಲೆ ನಿಗಧಿಪಡಿಸಿರುತ್ತಾರೆ. ಐತೀರ್ಪಿನಂತೆ ಪರಿಹಾರ ಧನ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಚಿತ್ತಾಪೂರ ಇಲ್ಲಿ ಸಲ್ಲಿಸಲಾಗಿದ್ದ ಕೆಳಕಂಡ ಎಲ್.ಎ.ಸಿ. ಪ್ರಕರಣಗಳನ್ನು ಪರಿಶೀಲಿಸಿ ವಿವಿಧ ದಿನಾಂಕಗಳಂದು ನೀಡಿದ ಆದೇಶದಲ್ಲಿ ಈ ಜಮೀನಿನ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆಗೆ ರೂ. 1,18,000-00 ಗಳನ್ನು ನಿಗಧಿಪಡಿಸಿ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ.

| ಕ್ರ. ಸಂ. | ಎಲ್ಎಸಿ ಸಂಖ್ಯೆ | ಪೇಠಶಿರೂರ ಗ್ರಾಮದ ಸ.ನಂ. | ವಿಸ್ತೀರ್ಣ ಎ-ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 66/08 | 326/2 | 1-06 | 215149 |
| 2 | 67/08 | 337/2 | 0-09 | 42497 |
| 3 | 68/08 | 352/2 | 6-00 | 1120409 |
| 4 | 69/08 | 353/1 | 2-00 | 373803 |
| 5 | 70/08 | 353/2 | 2-00 | 373803 |
| 6 | 72/08 | 355 | 1-08 | 224482 |
| 7 | 74/08 | 356/2 | 0-36 | 168486 |
| 8 | 75/08 | 330/2 | 2-10 | 420466 |
| ಒಟ್ಟು | | | | 2939095 |

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವೆಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 1037 ಎಲ್‌ಸಿಜಿ 2010, ದಿನಾಂಕ : 28–12–2010, ಆರ್‌ಡಿ 1048 ಎಲ್‌ಸಿಜಿ 10, ದಿನಾಂಕ: 19–1–2011 ಮತ್ತು ಆರ್‌ಡಿ 1038 ಎಲ್‌ಸಿಜಿ 2010, ದಿನಾಂಕ : 28–12–2010, ಆರ್‌ಡಿ 1008 ಎಲ್‌ಸಿಜೆ 10, ದಿನಾಂಕ 28–12–2010, ಆರ್‌ಡಿ 1046 ಎಲ್‌ಸಿಜಿ 10, ದಿನಾಂಕ : 28–12–10, ಆರ್‌ಡಿ 1021 ಎಲ್‌ಜಿಸಿ 10, ದಿನಾಂಕ 28–12–10 ಮತ್ತು ಆರ್‌ಡಿ 1022 ಎಲ್‌ಸಿಜಿ 10, ದಿನಾಂಕ : 28–3–11ರ ಪತ್ರಗಳಲ್ಲಿ ಅಭಿಪ್ರಾಯಪಟ್ಟಿದೆ.

ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸನೀಇ 46 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 19–5–2011**

ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕು ಪೇಠಶಿರೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪೇಠಶಿರೂರ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ರೂ. 29,39,095–00 ಗಳ (ಇಪ್ಪತ್ತೊಂಭತ್ತು ಲಕ್ಷದ ಮೂವತ್ತೊಂಭತ್ತು ಸಾವಿರದ ತೊಂಭತ್ತೈದು ರೂ.ಗಳು ಮಾತ್ರ) ಪರಿಹಾರ ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00––ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ–132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 29,39,095–00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಗೋಪಾಲ್**

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1382 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಬಗ್ಗೆ.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010–11/4118, ದಿನಾಂಕ : 19–7–2010.

ಪ್ರಸ್ತಾವನೆ :

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಕೊಪ್ಪಳ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ಆದೇಶದಂತೆ ಹೆಚ್ಚುವರಿ ಪರಿಹಾರ ಮೊತ್ತ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ದಿನಾಂಕ : 19–7–10ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ : 3–10–1996ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ದಿನಾಂಕ : 18–7–99 ರಂದು ರಚಿಸಿದ ಐತೀರ್ಪಿನಂತೆ ಹಣ ಪಡೆದು ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ದಾಖಲಿಸಿದ್ದ ಪ್ರಕರಣಗಳಲ್ಲಿ ದಿನಾಂಕ 20–11–08 ರಂದು ನೀಡಿರುವ ಸಾಮಾನ್ಯ ಆದೇಶದಲ್ಲಿ ಹೆಚ್ಚಿನ ಪರಿಹಾರ ಧನ ನಿಗದಿಪಡಿಸಿದೆ. ಈ ತೀರ್ಪಿನಲ್ಲಿ ಸೇರಿದ್ದ ಕೆಳಕಂಡ ಎಲ್.ಎ.ಸಿ. ಪ್ರಕರಣಗಳ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ವಜಾ ಮಾಡಿದೆ. ಆದ್ದರಿಂದ, ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ.

| ಕ್ರ. ಸಂ. | ಎಲ್‌ಎಸಿ ಸಂಖ್ಯೆ | ಎಂಎಫ್‌ಎ ಸಂಖ್ಯೆ | ಬೆಂಚಮಟ್ಟಿ ಗ್ರಾಮದ ಸ.ನಂ. | ವಿಸ್ತೀರ್ಣ ಎ–ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | 410/2000 | 3926/05 | 12/3ಎ | 3–00 | 813785 |
| 2 | 412/2000 | 3932/05 | 12/4 | 3–01 | 820562 |
| 3 | 416/2000 | 3936/05 | 12/5ಎ | 2–00 | 542689 |
| ಒಟ್ಟು | | | | | 2177036 |

ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹವಲ್ಲವೆಂದು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 536 ಎಲ್ಎಸ್‌ಪಿ 2009, ದಿನಾಂಕ : 4–6–09, ಲಾ 471 ಎಲ್ಎಸ್‌ಪಿ 2009, ದಿನಾಂಕ 15–5–2009 ಮತ್ತು ಲಾ 1974 ಎಲ್ಎಸ್‌ಪಿ 2006, ದಿನಾಂಕ : 29–11–2006 ರಲ್ಲಿ ಅಭಿಪ್ರಾಯ ನೀಡಿದೆ.

ಮುಖ್ಯ ಇಂಜಿನಿಯರ್‌ರವರ ಪ್ರಸ್ತಾವನೆವನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸನೀಇ 108 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 20ನೇ ಮೇ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ : 410, 412, 416/2000ರಲ್ಲಿ ನೀಡಿರುವ ಆದೇಶದಂತೆ ಪರಿಹಾರ ರೂ. 21,77,036–00ಗಳನ್ನು (ಇಪ್ಪತ್ತೊಂದು ಲಕ್ಷದ ಎಪ್ಪತ್ತೇಳು ಸಾವಿರದ ಮೂವತ್ತಾರು ರೂ.ಗಳು ಮಾತ್ರ) ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ–132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 21,77,036–00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಗೋಪಾಲ್**

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1383 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

## INFRASTRUCTURE DEVELOPMENT SECRETARIAT

**Sub:** Construction of Kolar-*Chickballapura railway line [Gauge Conversion]*

***Read:***
1. G.O. No. IDD 35 NSW 09 dt. 24-04-2009.
2. G.O. No. IDD 80 NSW 09 dt 03-09-2010.
3. G.O. No. IDD 80 NSW 09 dt 23-02-2011.
4. Letter No. W63/CN/BNC/MR/B/GL dt 31-03-2011 from Chief Engineer/ CON/EAST/SWR, Bangalore.

**PREAMBLE:**

Railways are one of the most convenient and widely used means of travel in India and also a very critical component in logistics. The use of rail network for freight and passenger transport has the potential to reduce road congestion, improve safety, improve economic efficiencies and reduce environmental impacts. To increase the rail density in the State, the State Govt had taken initiatives to take up rail projects on cost sharing basis (50:50, 2/3$^{rd}$ and 1/3$^{rd}$ etc.,) since 2002. Keeping in view the facts that the allocations for railways has to be increased for early commissioning of railway projects, the State Government has decided to undertake some of the ongoing railway projects in the State, also on cost sharing basis.

2. Accordingly in G.O. read at (1) above, Government of Karnataka decided to take up the balance work of Kolar-Chickballapura gauge conversion railway project on (50:50 cost sharing basis between GoK and Railway). This project was sanctioned during 2006-07 and the total length of the project is 90 kms & cost of the project is Rs. 287.99 crore. The expenditure so far is Rs. 107.83 crore, the project is being taken up from 2010-11 onwards on cost sharing basis between railways and GoK from 2010-11.

3. In Go no read at (2) to (3) above Gok has released an amount of Rs. 45.00 crore towards Kolar-Chikkaballapur railway line.

4. The Chief Engineer, South Western Railway, Bangalore in his letter read at Sl. No. (4) above, has requested to release an amount of Rs. 15.00 crores towards Kolar-Chikkaballapur gauge conversion railway project.

5. The proposal of Railways has been examined and it has been decided to release an amount of Rs. 15.00 crore (Rupees Fifteen crore only) out of the Budget of Rs. 100.00 crore provided under the Head of Account "5465-01-190-3-05-133 (Plan) Special Development Plan 2011-2012.

6. Hence this order.

**GOVERNMENT ORDERS NO. IDD 80 NSW 2009, BANGALORE, DATED: 23-05-2011.**

After careful examination of the request of Railways, Government is pleased to undertake the balance project work of Construction of Kolar-Chikkaballapur Gauge Conversion railway line on 50:50 cost sharing basis and to release an amount of Rs. 15.00 crore (Rupees Fifteen Crore only) being the part of the share of Gok.

2. The expenditure shall be met under the Head of Account "5465-01-190-3-05-133 (Plan) Special Development Plan 2011-2012.

3. Railway Department should furnish the amount expended to the project and work completed or the utilization statement before seeking the next release.

4. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

5. This order is issued in accordance with the concurrence of Finance Department given, vide, U.O. Note, No. FD 840 Exp-1/2011 dated 18-05-2011.

By Order and in the name of the Governor of Karnataka

**C.A. BABURAVINDRANATH PATEL**

PR No. 1404

Under Secretary to Government

Infrastructure Development Department.

## INFRASTRUCTURE DEVELOPMENT SECRETARIAT

**Sub:** Release of State Share towards Bidar Gulbarga New Railway Line Project.

***Read:***

1. G.O. No. IDD 12 NSW 2004 dt. 05-09-2007.
2. G.O. No. IDD 12 NSW 2004 dt. 28-09-2007.
3. G.O. No. IDD 12 NSW 2004 dt. 21-01-2008.
4. G.O. No. IDD 12 NSW 2008 dt. 13-05-2008
5. G.O. No. IDD 12 NSW 2008 dt. 26-06-2009.
6. G.O. No. IDD 13 NSW 2008 dt. 21-08-2010.
7. G.O. No. IDD 13 NSW 2008 dt. 12-11-2010.
8. G.O. No. IDD 13 NSW 2008 dt. 09-02-2011.
9. Letter No. W.CoN/338/G/86 dated 31-03-2011 from the Chief Engineer/Constn.-1, South Central Railway, Secunderabad.

**PREAMBLE:**

In the Government Order read at Sl. No. (1) above, the State Government has accorded sanction for taking up Bidar-Gulbarga new railway project on 50:50 cost sharing basis between the Ministry of Railways and Government of Karnataka and for releasing 50% of the cost required for completion of the project within a period of 3 years.

2. In the G.O. read at Sl. No.(2) to (8) above the State Government has released so far an amount of Rs. 125.00 crore towards the share of the State Government for Bidar-Gulbarga New railway project.

3. The South Central Railway vide their letter read at Sl.No. (9) above, has requested to release an amount of Rs. 60.00 crore which is very much essential to complete the above new railway line project.

4. The proposal of the Railways has been examined and it has been decided to release an amount of Rs. 30.00 crores (Rupees Thirty crores only) out of the Budget of Rs. 100.00 crores provided under the Head of Account 5465-01-190-3-05-133 (plan) Special Development Plan during 2011-12. Hence this order

**GOVERNMENT ORDERS NO. IDD 13 NSW 2008, BANGALORE, DATED: 23-05-2011.**

After careful examination of the request of railways, Government of Karnataka are pleased to release an amount of Rs. 30.00 crores (Rupees Thirty crores only) towards the share of the State Government for the Bidar-Gulbarga new railway project.

2. The expenditure shall be met under the Head of Account "5465-01-190-3-05-133 (Plan)" Special Development Plan Rs. 100.00 crores during 2011-12.

3. The railway department should furnish the amount expended to the project and work completed or the utilization statement before seeking the next release.

4. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Central Railway, Secunderabad.

5. This order is issued with the concurrence of Finance Department vide U.O. Note No. FD 840 Exp-1/2011 dated 18-05-2011.

By Order and in the name of the Governor of Karnataka

**C.A. BABURAVINDRANATH PATEL**

PR No. 1405

Under Secretary to Government

Infrastructure Development Department.

## INFRASTRUCTURE DEVELOPMENT SECRETARIAT

**Sub:** Release of funds towards cost sharing Railway Project-Munirabad-Mehaboobnagar new broad gauge railway line project.

***Read:***
1. G.O. No. IDD 13 NSW 2003 dt. 11-09-2007.
2. G.O. No. IDD 1 NSW 2008 dt. 7/11-03-2008.
3. G.O. No. IDD 1 NSW 2008 dt. 23-08-2010.
4. G.O. No. IDD 1 NSW 2008 dt. 23-08-2010.
5. Letter No. W.63/CN/BNC/MR/B/GL dated 31-03-2011 of Chief Engineer, (Con.,)/East/SWR, Bangalore.

**PREAMBLE:**

In the Government Orders referred to at Sl. No.(1) to (4) above an amount of Rs. 45.00 crores has so far released towards cost sharing for Munirabad-Mehaboobnagar New railway line project.

2. The Chief Engineer, South Western Railway, Bangalore in his letter read at Sl.No. (5) above, has requested that an amount of Rs. 15.00 crores to release immediately for Munirabad (Ginigera)-Raichur new railway line project.

3. The proposal of Railways has been examined and it has been decided to release an amount of Rs. 15.00 crores out of the Budget of Rs. 100.00 crores provided under the Head of Account "5465-01-190-3-05-133 (plan) Special Development Plan" during 2011-12.

4. Hence this order

**GOVERNMENT ORDER NO. IDD 01 NSW 2008, BANGALORE, DATED: 23-05-2011.**

After careful examination of the request of Railways, Government is pleased to release Rs. 15.00 crores (Rupees Fifteen crores only) towards the share of the State Government for the Munirabad-Mehaboobnagar new railway line project.

2. The expenditure shall be met out of the Budget of Rs. 100 crores provided under the Head of Account "5465-01-190-3-05-133 (Plan) Special Development Plan during 2011-12.

3. Railway Department should furnish the amount expended to the project and work completed or the utilization statement before seeking the next release.

4. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

5. This order is issued with the concurrence of Finance Department vide U.O. Note No. FD 840 Exp-1/2011 dated 18-05-2011.

By Order and in the name of the Governor of Karnataka
**C.A. BABURAVINDRANATH PATEL**
Under Secretary to Government
Infrastructure Development Department.

PR No. 1406

## ಕಂದಾಯ ಸಚಿವಾಲಯ

ವಿಷಯ: ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾ: ಇಟ್ಟಗುಡಿ, ಕೆ.ಕಲ್ಲಹಳ್ಳಿ ಹಾಗೂ ಅರಸನಾಳು ಗ್ರಾಮಗಳ ವಿವಿಧ ಸರ್ವೆ ನಂಬರುಗಳ ಒಟ್ಟು ವಿಸ್ತೀರ್ಣ 44–00 ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಚಿತ್ರದುರ್ಗ ವಿಂಡ್ ಫವರ್ ಲಿಮಿಟೆಡ್ ಇವರಿಗೆ ಗುತ್ತಿಗೆ ನೀಡುವ ಬಗ್ಗೆ.

ಓದಲಾಗಿದೆ:
1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರ ಪತ್ರ ಸಂಖ್ಯೆ: ಎಲ್ಎನ್ಡಿ/ಸಿಆರ್/41/10–11, ದಿನಾಂಕ: 18–08–2010.
2) ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ದಾವಣಗೆರೆರವರು ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ಬೆಂಗಳೂರುರವರಿಗೆ ವಿಳಾಸಿಸಿ ಬರೆದಿರುವ ಪತ್ರ ಸಂಖ್ಯೆ: ಎಲ್ಎನ್ಡಿ/ಸಿ.ಆರ್/142/ 2009–10, ದಿನಾಂಕ: 24–06–2010.

**ಪ್ರಸ್ತಾವನೆ:**

ಮೇಲೆ ಓದಲಾದ (2)ರ ಪತ್ರದಲ್ಲಿನ ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ವರದಿಯನ್ನಾರಾಧರಿಸಿ ಹರಪನಹಳ್ಳಿ ತಾಲ್ಲೂಕು ಇಟ್ಟಗುಡಿ ಗ್ರಾಮದ ಸ.ನಂ. 1ರಲ್ಲಿ 11–00 ಎಕರೆ, ಕೆ.ಕಲ್ಲಹಳ್ಳಿ ಗ್ರಾಮದ ಸ.ನಂ.393ರಲ್ಲಿ 27–00 ಎಕರೆ ಮತ್ತು ಅರಸನಾಳು ಗ್ರಾಮದ ಸ.ನಂ.262ರಲ್ಲಿ 6–00 ಎಕರೆ ಒಟ್ಟು 44–00 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಚಿತ್ರದುರ್ಗ ವಿಂಡ್ ಫವರ್ ಲಿಮಿಟೆಡ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಮೇಲೆ ಓದಲಾದ (1)ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ, ಬೆಂಗಳೂರು ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

(2) ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಚಿತ್ರದುರ್ಗ ವಿಂಡ್ ಫವರ್ ಲಿಮಿಟೆಡ್ ಇವರಿಗೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನು ಇಟ್ಟಗುಡಿ ಗ್ರಾಮದ ಸ.ನಂ. 1ರಲ್ಲಿನ ಆರ್‌ಟಿಸಿಯ ಕಲಂ 9ರಲ್ಲಿ ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ಎಂಬುದಾಗಿ ವರ್ಗೀಕೃತಗೊಂಡಿದ್ದು 41.63 ಎಕರೆ ಇರುತ್ತದೆ. ಕೆ. ಕಲ್ಲಹಳ್ಳಿ ಗ್ರಾಮದ ಸ.ನಂ. 393ರಲ್ಲಿನ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ ಹೊಂಡಪೋಂಬೋಕು

ಸರ್ಕಾರ ಎಂಬುದಾಗಿ ವರ್ಗೀಕೃತಗೊಂಡಿದ್ದು 257.20 ಎಕರೆ ಇರುತ್ತದೆ. ಅರಸನಾಳು ಗ್ರಾಮದ ಸ.ನಂ. 262ರ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ ಸರ್ಕಾರ ಎಂಬುದಾಗಿ ವರ್ಗೀಕೃತಗೊಂಡಿದ್ದು 60.04 ಎಕರೆ ಇರುತ್ತದೆ. ನಕ್ಷೆಯಲ್ಲಿ ತೋರಿಸಿರುವಂತೆ ಇಟ್ಟಗುಡಿ ಗ್ರಾಮದ ಸ.ನಂ.1ರಲ್ಲಿ 41.63 ಎಕರೆ ಜಮೀನಿನ ಪೈಕಿ 11–00 ಎಕರೆ, ಕೆ.ಕಲ್ಲಹಳ್ಳಿ ಗ್ರಾಮದ ಸ.ನಂ. 393ರಲ್ಲಿನ 257.20 ಎಕರೆ ಜಮೀನಿನ ಪೈಕಿ 27–00 ಎಕರೆ, ಅರಸನಾಳು ಗ್ರಾಮದ ಸ.ನಂ.262ರಲ್ಲಿನ 60.04 ಎಕರೆ ಜಮೀನಿನ ಪೈಕಿ 6–00 ಎಕರೆ ಒಟ್ಟು 44–00 ಎಕರೆ ಜಮೀನನ್ನು ಸಂಸ್ಥೆಯವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಪ್ರಸ್ತಾವನೆ ಆಗಿರುತ್ತದೆ. ಸದರಿ ಮೂರು ಗ್ರಾಮಗಳಲ್ಲಿನ ಗ್ರಾಮಸ್ಥರು ಪ್ರಸ್ತಾಪಿತ ಜಮೀನನ್ನು ಮಂಜೂರು ಮಾಡುವ ಬಗ್ಗೆ ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಉಪ ವಿಭಾಗಾಧಿಕಾರಿಗಳ ಸ್ಥಳ ತನಿಖೆ ವರದಿಯಂತೆ ಸದರಿ ಪ್ರದೇಶವು ಕಲ್ಲುಮಟ್ಟಿಯಿಂದ ಕೂಡಿದ್ದು ಎತ್ತರವಾದ ಪ್ರದೇಶವಾಗಿರುತ್ತದೆ. ವ್ಯವಸಾಯಕ್ಕೆ ಯೋಗ್ಯ ಜಮೀನಾಗಿರುವುದಿಲ್ಲ ಚಿಕ್ಕಮಟ್ಟ ಗಿಡ ಗಂಟೆಗಳು ಸ್ವಾಭಾವಿಕವಾಗಿ ಬೆಳೆದಿರುತ್ತವೆ. ಬೆಲೆಬಾಳುವ ಮರಗಿಡಗಳು ಇರುವುದಿಲ್ಲ ಪುರಾತನ ಕಟ್ಟಡ ಹಾಗೂ ಸ್ಮಾರಕಗಳು ಇರುವುದಿಲ್ಲ ಗಾಳಿ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಸದರಿ ಜಮೀನು ಯೋಗ್ಯವಾಗಿರುತ್ತದೆ ಗ್ರಾಮಗಳಲ್ಲಿರುವ ಜಾನುವಾರುಗಳ ಮೇವಿಗಾಗಿ ಅಗತ್ಯಕ್ಕಿಂತ ಹೆಚ್ಚಿಗೆ ಸರ್ಕಾರಿ ಜಮೀನು ಲಭ್ಯವಿರುತ್ತದೆ ಪ್ರಸ್ತಾಪಿತ ಜಮೀನುಗಳು ಬಿ ಖರಾಬಿನಲ್ಲಿದ್ದು ಗುತ್ತಿಗೆ ಮಂಜೂರಾತಿಗೆ ಮುಕ್ತವಾದ ಜಮೀನುಗಳಾಗಿರುತ್ತವೆ ಎಂಬುದಾಗಿ ವರದಿ ಮಾಡುತ್ತಾ ಪ್ರಸ್ತಾಪಿತ ಜಮೀನಿನಲ್ಲಿ ಗಾಳಿಯಂತ್ರ ಘಟಕ ಸ್ಥಾಪಿಸಲು ಉಪ ವಿಭಾಗಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆಂದು ವರದಿ ಮಾಡಿರುತ್ತಾರೆ.

(3) ಪ್ರಾದೇಶಿಕ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ:71:ಎಲ್‌ಜಿಎ:2010 ಬೆಂಗಳೂರು ದಿನಾಂಕ: 20–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಇಟ್ಟಗುಡಿ ಗ್ರಾಮದ ಸ.ನಂ. 1ರಲ್ಲಿನ 41.63 ಎಕರೆ ಜಮೀನಿನ ಪೈಕಿ 11–00 ಎಕರೆ, ಕೆ.ಕಲ್ಲಹಳ್ಳಿ ಗ್ರಾಮದ ಸ.ನಂ. 393ರಲ್ಲಿನ 257.20 ಎಕರೆ ಜಮೀನಿನ ಪೈಕಿ 27–00 ಎಕರೆ, ಹಾಗೂ ಅರಸನಾಳು ಗ್ರಾಮದ ಸ.ನಂ.262ರಲ್ಲಿನ 60.04 ಎಕರೆ ಜಮೀನಿನ ಪೈಕಿ 6–00 ಎಕರೆ ಒಟ್ಟು 44.00 ಎಕರೆ ಜಮೀನನ್ನು (ನಕ್ಷೆಯಲ್ಲಿ ತೋರಿಸಿರುವಂತೆ) ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇ.10ರಷ್ಟು ಗುತ್ತಿಗೆ ದರ ನಿಗದಿಪಡಿಸಿ, ಸದರಿ ಗುತ್ತಿಗೆ ದರವನ್ನು ಪ್ರತಿ 2 ವರ್ಷಗಳಿಗೊಮ್ಮೆ ಶೇಕಡ 10ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19(3)(ಬಿ)ರನ್ವಯ 30 ವರ್ಷಗಳ ಅವಧಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ: ಚಿತ್ರದುರ್ಗ ವಿಂಡ್ ಫವರ್ ಪ್ರೈ ಲಿಮಿಟೆಡ್ ರವರಿಗೆ ಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:241:ವೆಚ್ಚ–7:2011 ದಿನಾಂಕ: 12–05–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್. ನಂ. 1407

## ಕಂದಾಯ ಸಚಿವಾಲಯ

ವಿಷಯ: ಶ್ರೀ ಜಿ. ತಮ್ಮಯ್ಯಗೌಡ, ನಿವೃತ್ತ ತಹಶೀಲ್ದಾರರು ಇವರಿಗೆ ಎರಡು ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1) ಶ್ರೀ ಜಿ. ತಮ್ಮಯ್ಯಗೌಡ, ನಿವೃತ್ತ ತಹಶೀಲ್ದಾರ್, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ಮನವಿ ಪತ್ರ ದಿನಾಂಕ: 20–10–2010.
2) ಮಹಾಲೇಖಪಾಲರು, ಕರ್ನಾಟಕ ರವರ ಪತ್ರ ಸಂಖ್ಯೆ: GE1/R5/Vol-T-114/2010-11/1484 ದಿನಾಂಕ: 24–12–2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀ ಜಿ. ತಮ್ಮಯ್ಯಗೌಡ, ನಿವೃತ್ತ ತಹಶೀಲ್ದಾರ್, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ತಮಗೆ ದಿನಾಂಕ: 1–4–2005 ಮತ್ತು 1–4–2006 ರಿಂದ ಬರಬೇಕಾಗಿರುವ ಎರಡು ಸ್ಥಗಿತ ವೇತನ ಬಡ್ತಿಗಳನ್ನು ಈವರೆಗೆ ಮಂಜೂರು ಮಾಡಿರುವುದಿಲ್ಲವೆಂದು ತಿಳಿಸುತ್ತಾ ಅವರು ಸೇವೆಯಿಂದ ನಿವೃತ್ತರಾಗಿ ಈಗಾಗಲೇ ನಾಲ್ಕು ವರ್ಷ ಮೇಲ್ಪಟ್ಟು ಆಗಿದ್ದು, ಅವರ ಸಹೋದ್ಯೋಗಿಗಳಿಗೆ ಈ ಸೌಲಭ್ಯವನ್ನು ಮಂಜೂರು ಮಾಡಲಾಗಿರುವುದರಿಂದ, ಮೇಲ್ಕಂಡ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಮಹಾಲೇಖಪಾಲರಿಗೆ ಕಳುಹಿಸಿ, ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ದಿನಾಂಕ: 22–11–2010ರ ಪತ್ರದಲ್ಲಿ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರುರವರ ದಿನಾಂಕ: 24–12–2010ರ ಪತ್ರದಲ್ಲಿ, ಶ್ರೀ ಜಿ. ತಮ್ಮಯ್ಯಗೌಡ, ನಿವೃತ್ತ ತಹಶೀಲ್ದಾರ್‌ರವರು ದಿನಾಂಕ: 1–4–2004 ರಂದು ವೇತನ ಶ್ರೇಣಿ ರೂ. 6000–11200 ರಲ್ಲಿ ಗರಿಷ್ಠ ವೇತನಕ್ಕೆ ತಲುಪಿದ್ದು, ದಿನಾಂಕ: 1–4–2005 ರಿಂದ 1ನೇ ಸ್ಥಗಿತ ವೇತನ ಬಡ್ತಿ ಮತ್ತು ದಿನಾಂಕ: 1–4–2006 ರಿಂದ 2ನೇ ಸ್ಥಗಿತ ವೇತನ ಬಡ್ತಿಗೆ ಅರ್ಹರಿರುವುದಾಗಿ ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಗಣಿಸಿದ ಸರ್ಕಾರವು ಶ್ರೀ ಜಿ. ತಮ್ಮಯ್ಯಗೌಡ, ನಿವೃತ್ತ ತಹಶೀಲ್ದಾರ್ ಇವರಿಗೆ ಎರಡು ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 672 ಎಎಸ್‌ಡಿ 2010 ಬೆಂಗಳೂರು ದಿನಾಂಕ: 17–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಜಿ. ತಮ್ಮಯ್ಯಗೌಡ ಇವರು ತಹಶೀಲ್ದಾರ್ ಹುದ್ದೆಯಲ್ಲಿ ನಿವೃತ್ತಿ ಹೊಂದಿದ್ದು, ಅವರು ದಿನಾಂಕ: 1–4–2004 ರಿಂದ ವೇತನ ಶ್ರೇಣಿ ರೂ. 6000–11200 ರಲ್ಲಿ ಗರಿಷ್ಟ ವೇತನಕ್ಕೆ ತಲುಪಿದ್ದು, ಶ್ರೀಯುತರಿಗೆ ಈ ಕೆಳಕಂಡಂತೆ ಎರಡು ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

(1) ದಿನಾಂಕ: 1–4–2005 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿ.

(2) ದಿನಾಂಕ: 1–4–2006 ರಿಂದ ಎರಡನೇ ಸ್ಥಗಿತ ವೇತನ ಬಡ್ತಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಸ್. ಬಾಲಕೃಷ್ಣಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇ–3).

ಪಿ.ಆರ್. ನಂ. 1408

## ಕಂದಾಯ ಸಚಿವಾಲಯ

ವಿಷಯ: ಕಾವೇರಿ ಯೋಜನೆಯನ್ನು ಉನ್ನತೀಕರಿಸಲು ಚಾಲನಾ ಸಮಿತಿಯನ್ನು ಪುನರ್‌ರಚನೆ ಕುರಿತು.

ಓದಲಾಗಿದೆ: 1) ಸರ್ಕಾರ ಆದೇಶ ಸಂಖ್ಯೆ: ಕಂಇ 190 ಮುನೋಮು 2009, ದಿನಾಂಕ: 14–12–2009.

2) ತಿದ್ದುಪಡಿ ಸಂಖ್ಯೆ: ಕಂಇ 130 ಮುನೋಮು 2010, ದಿನಾಂಕ: 23–07–2010.

3) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಕಂಇ 55 ಸಮಿತಿ 2011 ದಿನಾಂಕ: 01–03–2011 ಹಾಗೂ ತಿದ್ದುಪಡಿ ದಿನಾಂಕ 07–06–2011.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದನ್ವಯ ಕಾವೇರಿ ಯೋಜನೆಯನ್ನು ಉನ್ನತೀಕರಿಸಲು ಸರ್ಕಾರದ ಕಾರ್ಯದರ್ಶಿ ಕಂದಾಯ ಇಲಾಖೆ ನೋಂದಣಿ ಮತ್ತು ಮುದ್ರಾಂಕ ಇವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯನ್ನು ಮತ್ತು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಲಾಗಿತ್ತು. ಮೇಲೆ (2)ರಲ್ಲಿ ಓದಲಾದ ತಿದ್ದುಪಡಿ ಅನ್ವಯ ಶ್ರೀ ಎಸ್. ರಾಮನಾಥನ್ ಮತ್ತು ಪ್ರೊ. ರಾಹುಲ್ ಡೆ ಇವರನ್ನು ಈ ಸಮಿತಿಗಳಿಗೆ ಸದಸ್ಯರನ್ನಾಗಿ ನೇಮಿಸಲಾಗಿದೆ.

ಓದಲಾದ (3)ರ ಅಧಿಕೃತ ಜ್ಞಾಪನ ನೋಂದಣಿ ಇಲಾಖೆಯ ಎಲ್ಲಾ ಗಣಕೀಕರಣ ಮತ್ತು ಆಧುನೀಕರಣ ಕಾರ್ಯಕ್ರಮಗಳದಂತಹ ಕಾವೇರಿ ಗಣಕೀಕೃತ ವ್ಯವಸ್ಥೆಯ ನಿರ್ವಹಣೆ, ಹಾರ್ಡ್ ವೇರ್. ತಂತ್ರಾಂಶ ನಿರ್ವಹಣೆ ಬಳಕೆದಾರರ ಶುಲ್ಕ ನಿರ್ವಹಣೆ ಮತ್ತು ಸೌಲಭ್ಯ ವ್ಯವಸ್ಥೆಯ (Facility Management) ನಿರ್ವಹಣೆ ಹಾಗೂ ಭವಿಷ್ಯದ ದಿನಗಳ ಅಗತ್ಯವಾದ ಕಾವೇರಿ ತಂತ್ರಾಂಶದ ಪುನರ್ ಅಭಿವೃದ್ಧಿ ಕಾವೇರಿ–ಭೂಮಿ ಸಂಯೋಜನೆ, ಯಾವುದೇ ಸ್ಥಳದಿಂದ ನೋಂದಣಿ ಮಾಡುವ ಯೋಜನೆ (Any where Registration), e-Stamping ಕಾರ್ಯಕ್ರಮ, ಋಣಬಾರ ಡಾಟಾ ಎಂಟ್ರಿ, ಕಾವೇರಿ ಯೋಜನೆಯ ಮತ್ತು ಇತರೆ ಉದ್ದೇಶಕ್ಕಾಗಿ ಹೊಸ ಸೌಲಭ್ಯ ವ್ಯವಸ್ಥಾಪಕರ (Facility Manager) ಆಯ್ಕೆ ಮುಂತಾದ ಗಣಕೀಕರಣ ವಿಷಯಗಳ ನಿರ್ವಹಣೆಯನ್ನು ಸರ್ಕಾರದ ಕಾರ್ಯದರ್ಶಿ (ಭೂಮಿ ಮತ್ತು ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್) ಹುದ್ದೆಗೆ ಕಾರ್ಯ ಹಂಚಿಕೆ ಮಾಡಲಾಗಿದೆ. ಅದರಂತೆ, ಮೇಲೆ ಓದಲಾದ (1)ರ ಸರ್ಕಾರದ ಆದೇಶದನ್ವಯ ಸರ್ಕಾರದ ಕಾರ್ಯದರ್ಶಿ ಕಂದಾಯ ಇಲಾಖೆ ನೋಂದಣಿ ಮತ್ತು ಮುದ್ರಾಂಕ ಇವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯನ್ನು ಸರ್ಕಾರದ ಕಾರ್ಯದರ್ಶಿ(ಭೂಮಿ ಮತ್ತು ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್) ಅವರ ಅಧ್ಯಕ್ಷತೆಯಲ್ಲಿ ರಚಿಸಲು ಪ್ರಸ್ತಾಪಿಸಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 21 ಮುನೋಮು 2011 ಬೆಂಗಳೂರು ದಿನಾಂಕ: 21–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾವೇರಿ ಯೋಜನೆಯನ್ನು ಉನ್ನತೀಕರಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಚಾಲನಾ ಸಮಿತಿಯನ್ನು ಪುನರ್‌ರಚಿಸಿದೆ.

| ಕ್ರಮ ಸಂಖ್ಯೆ | ಹೆಸರು/ಇಲಾಖೆ | ಹುದ್ದೆ |
|---|---|---|
| 1 | ಸರ್ಕಾರದ ಕಾರ್ಯದರ್ಶಿ (ಭೂಮಿ ಮತ್ತು ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್), ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ) ಅಥವಾ ಅವರ ಪ್ರತಿನಿಧಿ | ಸದಸ್ಯರು |
| 3 | ಆಯುಕ್ತರು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ | ಸದಸ್ಯರು |
| 4 | ಡಾ: ಎಸ್. ರವೀಂದ್ರನ್, ಸಿ.ಇ.ಓ. ಇ–ಆಡಳಿತ ಕೇಂದ್ರ ಬೆಂಗಳೂರು | ಸದಸ್ಯರು |
| 5 | Deputy Director General, National Informatics Centre | ಸದಸ್ಯರು |
| 6 | ಶ್ರೀ ರಾಮನಾಥನ್ Head CND, Computer Information ISRO Satellite Centre, Bangalore | ಸದಸ್ಯರು |
| 7 | ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ) | ಸದಸ್ಯರು |
| 8 | ಸಹಾಯಕ ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ | ಸದಸ್ಯರು |
| 9 | ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು | ಸದಸ್ಯರ ಕಾರ್ಯದರ್ಶಿ |

1. ಸರ್ಕಾರದ ಆದೇಶ ಸಂಖ್ಯೆ: ಕಂಇ 190 ಮುನೋಮು 2009, ದಿನಾಂಕ: 14–12–2009 ರನ್ವಯ ಕಾವೇರಿ ಯೋಜನೆಯನ್ನು ಉನ್ನತೀಕರಿಸಲು ನೋಂದಣಿ ಮಹಾಪರವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿರುವ ತಾಂತ್ರಿಕ ಸಮಿತಿಯನ್ನು ಮುಂದುವರೆಸಲಾಗಿದೆ.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 190 ಮುನೋಮು 2009, ದಿನಾಂಕ: 14–12–2009 ರನ್ವಯ ಚಾಲನಾ ಸಮಿತಿ ಮತ್ತು ತಾಂತ್ರಿಕ ಸಮಿತಿಗಳು ನಿರ್ವಹಿಸಬಹುದಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಸೂಚಿಸಿದ್ದು ಅದರಲ್ಲಿ ಯಾವುದೇ ರೀತಿ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಟಿ.ಕೆ. ರಾಮಚಂದ್ರ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. ನಂ. 1409

## ಕಂದಾಯ ಸಚಿವಾಲಯ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಇತರೇ ಪರಿಕರ ಮತ್ತು ಸೇವೆಗಳನ್ನು ಪಡೆಯುವ ಸಲುವಾಗಿ ಇಲಾಖೆಯ ಗಣಕೀಕರಣದ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲು ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸುವ ಕುರಿತು.

ಓದಲಾಗಿದೆ: 1) ಕಂಇ 134 ಮುನೋಮು 2010 ದಿನಾಂಕ: 23–07–2010.
2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಕಂಇ 55 ಸಮಿತಿ 2011 ದಿನಾಂಕ: 01–03–2011 ಹಾಗೂ ತಿದ್ದುಪಡಿ ದಿನಾಂಕ 07–06–2011.

**ಪ್ರಸ್ತಾವನೆ:**

ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್, ಇತರೇ ಪರಿಕರ ಮತ್ತು ಸೇವೆಗಳನ್ನು ಪಡೆಯುವ ಸಲುವಾಗಿ ಹಾಗೂ ಇಲಾಖೆಯ ಗಣಕೀಕರಣದ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಸಲುವಾಗಿ ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿತ್ತು.

ಓದಲಾದ (2)ರ ಅಧಿಕೃತ ಜ್ಞಾಪನದಲ್ಲಿ ನೋಂದಣಿ ಇಲಾಖೆಯ ಎಲ್ಲಾ ಗಣಕೀಕರಣ ಮತ್ತು ಆಧುನೀಕರಣ ಕಾರ್ಯಕ್ರಮಗಳನ್ನು ಸರ್ಕಾರದ ಕಾರ್ಯದರ್ಶಿ (ಭೂಮಿ ಮತ್ತು ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್) ಹುದ್ದೆಗೆ ಕಾರ್ಯ ಹಂಚಿಕೆ ಮಾಡಲಾಗಿದೆ ಅದರಂತೆ ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವು ಸರ್ಕಾರದ ಕಾರ್ಯದರ್ಶಿ (ಭೂಮಿ ಮತ್ತು ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್) ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ತಾಂತ್ರಿಕ ಸಲಹಾ ಸಮಿತಿಗೆ ಮಾತ್ರ ಇರುವುದರಿಂದ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಚಿಸಲಾದ ತಾಂತ್ರಿಕ ಸಲಹಾ ಸಮಿತಿಯನ್ನು ರದ್ದುಗೊಳಿಸಲು ನಿರ್ಧರಿಸಿ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 134 ಮುನೋಮು 2010 ಬೆಂಗಳೂರು ದಿನಾಂಕ: 21–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹಾರ್ಡ್‌ವೇರ್, ಸಾಫ್ಟ್‌ವೇರ್, ಇತರೇ ಪರಿಕರ ಮತ್ತು ಸೇವೆಗಳನ್ನು ಪಡೆಯುವ ಸಲುವಾಗಿ ಹಾಗೂ ಇಲಾಖೆಯ ಗಣಕೀಕರಣದ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 1 ಎಂ.ಆರ್.ಆರ್. 2011 ದಿನಾಂಕ: 05–01–2011 ರನ್ವಯ ರಚಿಸಲಾದ ತಾಂತ್ರಿಕ ಸಲಹಾ ಸಮಿತಿಯು ನೀಡುವುದರಿಂದ ಸರ್ಕಾರದ ಆದೇಶ ಸಂಖ್ಯೆ: 134 ಮುನೋಮು 2010 ದಿನಾಂಕ: 23–07–2010 ರನ್ವಯ ರಚಿಸಲಾದ ತಾಂತ್ರಿಕ ಸಲಹಾ ಸಮಿತಿಯನ್ನು ರದ್ದುಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಟಿ.ಕೆ. ರಾಮಚಂದ್ರ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. ನಂ. 1410

## ಕಂದಾಯ ಸಚಿವಾಲಯ

ವಿಷಯ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಳಲವಾಡಿ ಗ್ರಾಮದ ಸ.ನಂ. 37 ಮತ್ತು 38 ರಲ್ಲಿ 2.02 ಎಕರೆ ಪ್ರದೇಶವನ್ನು ನಿರಂತರ ಫೌಂಡೇಷನ್ ಮೈಸೂರು ರವರಿಗೆ ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಮ್ಯಾನೇಜಿಂಗ್ ಟ್ರಸ್ಟಿ, ನಿರಂತರ ಫೌಂಡೇಷನ್(ರಿ), ಸರಸ್ವತಿಪುರಂ, ಮೈಸೂರು ರವರ ಮನವಿ ದಿನಾಂಕ: 15–06–2009.
2) ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ, ಮೈಸೂರು ರವರ ಪ್ರಸ್ತಾವನೆ ಸಂ: ಎಲ್‌ಎನ್‌ಡಿ/ಸಿಆರ್/09–10 ದಿನಾಂಕ: 01–03–2010.

**ಪ್ರಸ್ತಾವನೆ:**

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರು ದಿನಾಂಕ: 01–03–2010 ರಂದು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಳಲವಾಡಿ ಗ್ರಾಮದ ಸ.ನಂ. 37 ಮತ್ತು 38 ರಲ್ಲಿ 2.02 ಎಕರೆ ಪ್ರದೇಶವನ್ನು ನಿರಂತರ ಫೌಂಡೇಷನ್ ಮೈಸೂರು ರವರಿಗೆ ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣಕ್ಕಾಗಿ ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಹಾಗೂ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ಇವರು ತಮ್ಮ ಪ್ರಸ್ತಾವನೆಯಲ್ಲಿ ಮೈಸೂರು ತಾಲ್ಲೂಕು ಮಳಲವಾಡಿ ಗ್ರಾಮದ ಸ.ನಂ. 37 ರಲ್ಲಿ 0.33 ಗುಂಟೆ ಹಾಗೂ ಸ.ನಂ. 38 ರಲ್ಲಿ 1.22 ಎಕರೆ ಜಮೀನು ಒಟ್ಟು 2.15 ಎ/ಗು ಸರ್ಕಾರಿ

ಜಮೀನಿದ್ದು, ಆರ್.ಟಿ.ಸಿ ಪ್ರಕಾರ "ಸರ್ಕಾರಿ ಖರಾಬು" ಎಂದು ನಮೂದಾಗಿರುತ್ತದೆ. ಸದರಿ ಮಳಲವಾಡಿ ಗ್ರಾಮವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ. ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತದೆ. ಇದಲ್ಲದೆ ಮಳಲವಾಡಿ ಗ್ರಾಮದ ಸ.ನಂ. 37 ರಲ್ಲಿ 0.02 ಗುಂಟೆ ಹಾಗೂ ಸ.ನಂ. 38ರಲ್ಲಿ 0.11 ಗುಂಟೆ ಪ್ರದೇಶದಲ್ಲಿ ಯು.ಜಿ.ಡಿ. ಹಾದು ಹೋಗಿದ್ದು, ಸ.ನಂ. 38 ರಲ್ಲಿ 10 X 10 ಅಡಿ ಪಂಪ್‌ಹೌಸ್ ಇದೆಯೆಂದು ಸ.ನಂ. 37 ಮತ್ತು ಸ.ನಂ. 38 ರಲ್ಲಿ ಕೆಲವು ಕಾಡು ಮರಗಳು ಹಿಪ್ಪೆ, ಗೊಬ್ಬಳಿ, ಬೇವಿನ ಮರಗಳಿದ್ದು, ಈ ಜಮೀನುಗಳಲ್ಲಿ ಬೆಲೆಬಾಳುವ ಮರಮುಲ್ಕಿ ಯಾವುದೂ ಇರುವುದಿಲ್ಲ. ಅಲ್ಲದೆ, ಸದರಿ ಸರ್ಕಾರಿ ಜಮೀನು ಮಂಜೂರಾತಿಗೆ ಸಂಬಂಧಪಟ್ಟಂತೆ ಗ್ರಾಮಸ್ಥರ ಆಕ್ಷೇಪಣೆ ಇರುವುದಿಲ್ಲ ಎಂದು ವರದಿ ಮಾಡಲಾಗಿದೆ.

3. ಸದರಿ ಗ್ರಾಮವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ. ವಲಯದಲ್ಲಿ ಬರುವ ಬಗ್ಗೆ ಮೂಡಾದಿಂದ ಸ್ಪಷ್ಟೀಕರಣ ಪಡೆಯಲಾಗಿ, ಅವರು ದಿನಾಂಕ: 18–11–2009ರ ಪತ್ರದಲ್ಲಿ ಮಳಲವಾಡಿ ಗ್ರಾಮದ ಸ.ನಂ. 37 ಹಾಗೂ 38 ರಲ್ಲಿ 2.15 ಎಕರೆ ಜಮೀನುಗಳನ್ನು ಪ್ರಾಧಿಕಾರವು ಈವರೆಗೆ ಅಧಿಸೂಚನೆ ಮಾಡಿರುವುದಿಲ್ಲ ಹಾಗೂ ಇದು ಪ್ರಾಧಿಕಾರದ ಆಸ್ತಿಯಾಗಿರುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿರುತ್ತಾರೆ.

4. ಕರ್ನಾಟಕ ಭೂ ಮಂಜೂರಾತಿ ನಿಯಮ 10(3)ರ ಪ್ರಕಾರ ಸರ್ಕಾರದ ಪೂರ್ವಾನುಮೋದನೆ ಪಡೆದು ಕೃಷಿಯೇತರ ಉದ್ದೇಶಕ್ಕೆ ಮಂಜೂರು ಮಾಡಲು ಅವಕಾಶವಿರುವುದರಿಂದ ನಗರ ಪ್ರದೇಶದಲ್ಲಿನ ಜಮೀನನ್ನು ಸಾಂಸ್ಕೃತಿಕ ನಗರವಾದ ಮೈಸೂರಿನಲ್ಲಿ ಸಾಂಸ್ಕೃತಿಕ ಸಂಸ್ಥೆ ಸ್ಥಾಪಿಸುವ ಸಲುವಾಗಿ ಖಾಸಗಿ ಸಂಸ್ಥೆಗೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಭೂ ಮಂಜೂರಾತಿ ನಿಯಮ 10(3)ರ ಪ್ರಕಾರ ನಗರ ಹಾಗೂ ಪಟ್ಟಣ ಪ್ರದೇಶದಲ್ಲಿನ ಸರ್ಕಾರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ಮಂಜೂರು ಮಾಡಲು ಅವಕಾಶವಿದೆ. ಆದರೆ, ಕರ್ನಾಟಕ ಭೂ ಮಂಜೂರಾತಿ ನಿಯಮ 10(2)ವು ನಗರ ಪ್ರದೇಶದಲ್ಲಿನ ಸರ್ಕಾರಿ ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಮಂಜೂರು ಮಾಡಲು ನಿರ್ಬಂಧ ವಿಧಿಸುತ್ತದೆ. ಆದ್ದರಿಂದ ಸದರಿ ನಿಯಮ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

5. ನಿರಂತರ ಫೌಂಡೇಷನ್ (ರಿ) ಸಂಸ್ಥೆಯು ಕಳೆದ 15 ವರ್ಷಗಳಿಂದ ಅತ್ಯುತ್ತಮವಾಗಿ ರಂಗ ಚಟುವಟಿಕೆಗಳನ್ನು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದು, ಮೈಸೂರಿನ ಸಾಮಾಜಿಕ, ಸಾಂಸ್ಕೃತಿಕ ವಾತಾವರಣಕ್ಕೆ ತನ್ನದೇ ಅಪಾರವಾದ ಕೊಡುಗೆ ನೀಡುತ್ತಿದ್ದು, ಮಕ್ಕಳ, ಯುವಕರ, ಮಹಿಳೆಯರ ಮತ್ತು ರಂಗಾಸಕ್ತರ ನಡುವೆ ಉತ್ತಮ ಸಾಂಸ್ಕೃತಿಕ ವಾತಾವರಣ ನಿರ್ಮಿಸಿ, ಅವರೆಲ್ಲರಿಗೂ ವೇದಿಕೆಯಾಗಿ ಈ ಸಂಸ್ಥೆ ಕೆಲಸ ಮಾಡುತ್ತದೆ. ನಾಡಿನ ಗಣ್ಯರು, ಸಾಹಿತಿಗಳು ಹಾಗೂ ಚಿಂತಕರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ. ಮೈಸೂರಿನಲ್ಲಿ ಹೆಚ್ಚುತ್ತಿರುವ ರಂಗ ಚಟುವಟಿಕೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪೂರಕವಾಗಿ ರಂಗ ಮಂದಿರಗಳ ಹಾಗೂ ಸಾಂಸ್ಕೃತಿಕ ಕೇಂದ್ರಗಳ ಕೊರತೆಯಿರುವುದರಿಂದ, ನಿರಂತರ ಫೌಂಡೇಶನ್‌ನವರು ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಲು ಜಮೀನು ಕೋರಿರುವುದರಿಂದ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅದರಂತೆ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 56 ಎಲ್‌ಜಿಎಂ 2009 ಬೆಂಗಳೂರು ದಿನಾಂಕ: 21–05–2011**

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಳಲವಾಡಿ ಗ್ರಾಮದ ಸ.ನಂ. 37 ಮತ್ತು ಸ.ನಂ. 38ರಲ್ಲಿ ಕೊಳಾಯಿ ನಾಲಾ (ಯು.ಜಿ.ಡಿ.) ಹಾದು ಹೋಗುವ ವಿಸ್ತೀರ್ಣ ಅನುಕ್ರಮವಾಗಿ 0.02 ಗುಂಟೆ ಮತ್ತು 0.11 ಗುಂಟೆ ಮತ್ತು ಸ.ನಂ. 38ರಲ್ಲಿ ಇರುವ 10 X 10 ಅಡಿ ಪಂಪ್‌ಹೌಸ್ ಹೊರತುಪಡಿಸಿ, ಉಳಿದ ಒಟ್ಟು ವಿಸ್ತೀರ್ಣ ಅಂದರೆ 2.02 ಎಕರೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 10(3)ಅಡಿಯಲ್ಲಿ, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1969ರ ನಿಯಮ 21ರಡಿ ಪ್ರಚಲಿತ ಮಾರುಕಟ್ಟೆ ದರ ಹಾಗೂ ನಿಯಮಾನುಸಾರ ಇತರೆ ದರ ವಿಧಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 68ರ ವಿಧಿ ವಿಧಾನಗಳಂತೆ ಕ್ರಮ ಕೈಗೊಳ್ಳುವ ಷರತ್ತು ವಿಧಿಸಿ, ಮ್ಯಾನೇಜಿಂಗ್ ಟ್ರಸ್ಟ್, ನಿರಂತರ ಫೌಂಡೇಷನ್ ಮೈಸೂರು ಇವರಿಗೆ ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣಕ್ಕಾಗಿ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಲ್. ಕೃಷ್ಣಪ್ಪ**

ಪೀಠಾಧಿಕಾರಿ

ಪಿ.ಆರ್. ನಂ. 1411 ಕಂದಾಯ ಇಲಾಖೆ (ಭೂ.ಮಂ–2).

## DEPARTMENT OF PERSONNEL AND ADMINISTRATIVE REFORMS SECRETARIAT

**Sub:** Deputation of IAS officers for the 5th round of Phase III Mid-career Training Programme - Reg.

**Read:** D.O. letter No. 2/3/2011-Trg-IV, dated 15-03-2011 from Director, LBSNAA, Mussoorie.

**GOVERNMENT ORDER NO. DPAR 48 SIS 2011, BANGALORE, DATED: 24-05-2011.**

Sanction is accorded for the deputation of following IAS officers belonging to 2001 and 2002 batches of Karnataka cadre for the 5th round of Phase III Mid-career Training Programme to be held from 20-06-2011 to 12-08-2011 at Lal Bahadur Shastri National Academy for Administration, Mussoorie.

| Sl. No. | Name of the officer and designation Sriyuths/Smt | Sl. No. | Name of the officer and designation Sriyuths/Smt |
|---|---|---|---|
| 1. | N. Manjula, IAS (KN:02)<br>Deputy Commissioner<br>Chickballapur District<br>Chickballapur. | 4. | M.K. Aiyappa, IAS, (KN:02)<br>Deputy Commissioner<br>Bangalore Urban District<br>Bangalore. |
| 2. | Imkongla Jamir, IAS, (KN-02)<br>Additional Resident Commissioner<br>Karnataka Bhavan<br>New Delhi | 5. | Dr. Ekroop Caur, IAS, (KN:01)<br>Deputy Commissioner<br>Belgaum District<br>Belgaum. |
| 3. | D.S. Vishwanath, IAS (KN:02)<br>Secretary<br>Karnataka Public Service Commission<br>Bangalore. | 6. | Dr. J. Ravishankar, IAS, (KN:01)<br>Director<br>Karnataka Rural Water Supply and Sanitary Agency & E/o Joint Secretary to Government<br>RDPR Department, Bangalore. |

The period of deputation and the time reasonably required for to and fro journey shall be treated as on duty for all purposes and they are entitled to draw TA/DA Advance as per rules subject to adjustment in the final bill. The expenditure shall be met from the same head of Accountant from which pay and allowances of the officers are being met at the time of proceeding for training, subject to reimbursement, if any from Government of India

By Order and in the name of the Governor of Karnataka

**N. SRINIVASA MURTHY**

PR No. 1412

Under Secretary to Government

DP & AR (Services-1)

## COMMERCE AND INDUSTRIES SECRETARIAT

**Sub:** Reimbursement of Central Sales Tax paid on inter-state sale of metro coaches by M/s BEML Ltd., to Delhi Metro Rail Corporation - adjustment of account - reg.

***Read:***
1. Govt. Order No. FD 283 CSL 2009, dated: 08-12-2009.
2. Govt. Order No. CI 430 SPI 2010, dated: 20-09-2010.
3. Govt. Order No. FD 176 BRS 2010, dated: 18-12-2010.
4. Govt. Order No. CI 430 SPI 2010, dated: 21-02-2011.

**PREAMBLE:**

In the G.O. No.: CI 430 SPI 2010, dated: 20-09-2010 Rs. 50 crores and in G.O. dated 21-02-2011. Rs. 10.31 crores has been released towards the reimbursement of Central Sales Tax paid on inter-state sale of metro coaches by M/s BEML Ltd., to Delhi Metro Rail Corporation from the loan head of account "6852-02-800-0-02-394 (plan)".

In the Supplementary Estimates 2010-11, Rs. 60.31 crores has been provided for reimbursement of CST to BEML. The expenditure has been booked under the Loan Account Head which is to be classified as revenue expenditure by way of adjustment. Hence this order.

**GOVERNMENT ORDER NO. CI 430 SPI 2010, BANGALORE, DATED: 31-03-2011.**

For the reasons explained in the preamble, an expenditure of Rs. 60.31 crores (Rupees Sixty crores thirty one lakhs only) booked under "6852-02-800-0-02" (plan) shall be transferred to Revenue Expenditure Head of Account "2852-80-800-0-43-059 - others expenses" (Plan).

The Principal Accountant General (A&E) is requested to carryout the adjustment in the books of Account for the year 2010-11 through a book adjustment debting this expenditure to Head of Account "2852-80-800-0-43-059" by per contra credit to Head of account "6852-02-800-0-43-059-other expenses" (plan).

This order is issued with the of concurrence of Finance Department vide U.O. Note No.: FD 1444 Exp-1/10, dated: 08-09-2010.

By Order and in the name of the Governor of Karnataka

**A.V. SRINIVASA DIKSHIT**

PR No. 1413

Desk Officer (Technical Cell)

Commerce & Industries Department.

## ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

**ವಿಷಯ :** ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ವಾಹನ ಸಂಖ್ಯೆ: ಎಂಇಡಿ–6883ರ ವಾಹನ ಅಪಘಾತ ಸಂಭವಿಸಿದ ಬಗ್ಗೆ ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ವಿರುದ್ಧ–ಶಿಸ್ತು ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 136 ರೇಕೃವಿ 2004, ದಿನಾಂಕ 21–01–2011.
2. ಪತ್ರ ಸಂಖ್ಯೆ: ವಾಕೈ 136 ರೇಕೃವಿ 2004 ದಿನಾಂಕ 16–12–2010.
3. ರೇಷ್ಮೆ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ರೇಉಕೋ/ಸಿ1/ಎಂಇಡಿ/6883/ಎಂವಿಸಿ/114/04/22/06–07, ದಿನಾಂಕ 31–01–2011.
4. ತಿಳುವಳಿಕೆ ಪತ್ರ ಸಂಖ್ಯೆ: ವಾಕೈ 136 ರೇಕೃವಿ 2004 ದಿನಾಂಕ 19–03–2011.
5. ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ರಕ್ಷಣಾ ಹೇಳಿಕೆ ದಿನಾಂಕ 01–04–2011.

**ಪ್ರಸ್ತಾವನೆ :**

ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ ಇಲ್ಲಿನ ವಾಹನ ಸಂಖ್ಯೆ ಎಂಇಡಿ 6883 ಅಪಘಾತಕ್ಕೆ ಸಂಬಂಧಿಸಿದಂತೆ, ಸಿವಿಲ್ ದಾವೆ ಸಂಖ್ಯೆ: 114/2004 ರಲ್ಲಿ ಸಿವಿಲ್ ನ್ಯಾಯಾಲಯ (ಸೀನಿಯರ್ ಡಿವಿಜನ್) ಹಾಗೂ ವಾಹನ ಅಪಘಾತ ಪರಿಹಾರ ಮಂಡಳಿ, ಮದ್ದೂರು ಇಲ್ಲಿ ದಿನಾಂಕ 12–08–2004ರಲ್ಲಿ ನೀಡಿರುವ ತೀರ್ಪಿನಲ್ಲಿ ಅರ್ಜಿದಾರರಿಗೆ ಪರಿಹಾರ ಮೊತ್ತ ರೂ. 1,11,000/– ಶೇಕಡ 6ರ ಬಡ್ಡಿ ಸಮೇತ 1ನೇ ಪ್ರತಿವಾದಿಯಾದ ಜನರಲ್ ಮ್ಯಾನೇಜರ್, ಸಿಲ್ಕ್ ಫಿಲೇಚರ್ ಸಂತೇಮರಹಳ್ಳಿ, ಹಾಗೂ 2ನೇ ಪ್ರತಿವಾದಿಯಾದ ಕೆ.ಜಿ.ಐ.ಡಿ. ಬೆಂಗಳೂರು, ಇವರು ಜಂಟಿಯಾಗಿ

ಜವಾಬ್ದಾರರಾಗಿರುವುದರಿಂದ ಮೊತ್ತವನ್ನು ಆದೇಶ ಹೊರಡಿಸಿದ 30 ದಿನಗಳೊಳಗಾಗಿ ಸಿವಿಲ್ ನ್ಯಾಯಾಲಯ (ಸೀನಿಯರ್ ಡಿವಿಜನ್) ಮದ್ದೂರು, ಇವರ ಹೆಸರಿನಲ್ಲಿ ಚೆಕ್ ಅನ್ನು ನೀಡಿ ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ ಮತ್ತು ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು ಇವರುಗಳಿಂದ ಹಣ ಹಾಗೂ ಬಡ್ಡಿಯನ್ನು ವಸೂಲು ಮಾಡಬೇಕಾದ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಸರ್ಕಾರದ ವತಿಯಿಂದ ರೂ. 1,11,000/– ಗಳನ್ನು ಶೇಕಡ 6ರ ಬಡ್ಡಿ ಸಮೇತ ನ್ಯಾಯಾಲಯಕ್ಕೆ ಪಾವತಿಸಲು ಅನುಮತಿ ನೀಡಲಾಗಿದೆ ಹಾಗೂ ಇಲಾಖಾ ವಿಚಾರಣೆ ನಂತರ ಸಕಾಲದಲ್ಲಿ ವಾಹನದ ವಿಮೆಯನ್ನು ನವೀಕರಿಸಲು ವಿಫಲರಾದ ಅಧಿಕಾರಿಗಳಿಂದ ಈ ಮೊತ್ತವನ್ನು ವಸೂಲಿ ಮಾಡಿ ಸರ್ಕಾರಕ್ಕೆ ತಿಳಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಸದರಿ ವಾಹನವು ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ಹತೋಟಿಯಲ್ಲಿರುವುದರಿಂದ ಅದರ ಸಂಪೂರ್ಣ ಹೊಣೆಗಾರಿಕೆ ಈ ಅಧಿಕಾರಿಯವರಿದ್ದಾಗಿದ್ದರಿಂದ, ಶ್ರೀ ಎ. ನರಸಿಂಹಪ್ಪ ಅಂದಿನ ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, (ಪ್ರಸ್ತುತ ಅನ್ಯ ಕಾರ್ಯ ವ್ಯವಸ್ಥೆಯ ಮೇಲೆ ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ) ಹಾಗೂ ಶ್ರೀ ಜವರಾಯಿ, ರೇಷ್ಮೆ ಉಪ ನಿರ್ದೇಶಕರು ಹಾಗೂ ಉಸ್ತುವಾರಿ ಅಧಿಕಾರಿ, ಸರ್ಕಾರಿ ರೇಷ್ಮೆ ಕಾರ್ಖಾನೆ ಸಂತೇಮರಹಳ್ಳಿ ಈ ಈರ್ವರ ಮೇಲೆ ಇಲಾಖಾ ವಿಚಾರಣೆ ನಡೆಸಿ ನ್ಯಾಯಾಲಯದ ಆದೇಶದಂತೆ ಹಣವನ್ನು ಬಡ್ಡಿ ಸಹಿತ ತ್ವರಿತವಾಗಿ ಇವರುಗಳಿಂದ ವಸೂಲು ಮಾಡಬೇಕಾಗಿರುವುದರಿಂದ ಹಾಗೂ ಇವರೀರ್ವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯಾದ್ದರಿಂದ ಈ ಅಧಿಕಾರಿಗಳ ಮೇಲೆ ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವಂತೆ ಮೇಲೆ ಓದಲಾದ ಕ್ರ.ಸಂ. 2 ರ ಪತ್ರದಲ್ಲಿ ರೇಷ್ಮೆ ಆಯುಕ್ತರನ್ನು ಕೋರಲಾಗಿತ್ತು. ಅದರಂತೆ, ಮೇಲೆ ಓದಲಾದ ಕ್ರ.ಸಂ. 3 ರ ಪತ್ರದಲ್ಲಿ ರೇಷ್ಮೆ ಆಯುಕ್ತರು ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸಿರುತ್ತಾರೆ. ವಿಷಯವನ್ನು ಪರಿಶೀಲಿಸಿ ಮುಖ್ಯ ಆರೋಪಿಯಾದ ಶ್ರೀ ಎ. ನರಸಿಂಹಪ್ಪ, ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರಿಗೆ ಆರೋಪ ಪಟ್ಟಿಯನ್ನು ಮೇಲೆ ಓದಲಾದ ಕ್ರ.ಸಂ. 4ರ ತಿಳುವಳಿಕೆ ಪತ್ರದಲ್ಲಿ ಜಾರಿಗೊಳಿಸಲಾಯಿತು. ಸದರಿ ತಿಳುವಳಿಕೆ ಪತ್ರದಲ್ಲಿಯ ಎಲ್ಲಾ ಆರೋಪಗಳನ್ನು ಸದರಿ ಅಧಿಕಾರಿಯವರು ಮೇಲೆ ಓದಲಾದ ಕ್ರ.ಸಂ. 5ರಲ್ಲಿ ಅಲ್ಲಗಳೆದು ವಾಹನದ ವಿಮೆ ಮೊತ್ತವನ್ನು ಸಕಾಲದಲ್ಲಿ ಪಾವತಿಸದೇ ಕರ್ತವ್ಯ ನಿರ್ಲಕ್ಷತೆಯನ್ನು ತೋರಿರುವ ಶ್ರೀ ಎಂ.ಪಿ.ಸುಬ್ಬಣ್ಣ, ಇತರೆ ಗುಮಾಸ್ತರು ಹಾಗೂ ವಿಮೆ ರಕ್ಷಣೆ ಇಲ್ಲದ ವಾಹನವನ್ನು ಚಾಲನೆ ಮಾಡಿ ಅಪಘಾತಕ್ಕೀಡು ಮಾಡಿದ ಚಾಲಕ ಶ್ರೀ ಎಸ್.ಶೇಷಾದ್ರಿ ಜವಾಬ್ದಾರರೆಂದು ತಿಳಿಸಿರುತ್ತಾರೆ.

ಇದು ನ್ಯಾಯಾಲಯ ಪ್ರಕರಣವಾಗಿದ್ದು, ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಪ್ರಸ್ತುತ ರೇಷ್ಮೆ ವಿನಿಮಯ ಕೇಂದ್ರದಲ್ಲಿ (ನಿಯೋಜನೆ), ಓಕಳಿಪುರಂ, ಬೆಂಗಳೂರು. ಇವರು ಮುಖ್ಯ ಆರೋಪಿಯಾಗಿದ್ದು, ತಮ್ಮ ಮೇಲಿನ ಆರೋಪಗಳನ್ನು ಒಪ್ಪಿಕೊಳ್ಳದೇ ಇರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವಾಗಿರುತ್ತದೆಯಾದುದರಿಂದ, ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ವಾಕೈ 136 ರೇಕೃವಿ 2004 ಬೆಂಗಳೂರು, ದಿನಾಂಕ : 21-05-2011**

ವಾಹನ ಸಂಖ್ಯೆ: ಎಂಇಡಿ 6883 ರ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ, ಮುಖ್ಯ ಆರೋಪಿಯಾದ ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಪ್ರಸ್ತುತ ರೇಷ್ಮೆ ವಿನಿಮಯ ಕೇಂದ್ರದಲ್ಲಿ (ನಿಯೋಜನೆ), ಓಕಳಿಪುರಂ, ಬೆಂಗಳೂರು, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸುವುದಕ್ಕಾಗಿ ಶ್ರೀ ಪ್ರಕಾಶ್, ರೇಷ್ಮೆ ಉಪ ನಿರ್ದೇಶಕರು, ಕೇಂದ್ರ ಕಚೇರಿ, ರೇಷ್ಮೆ ಇಲಾಖೆ, ಬೆಂಗಳೂರು, ಇವರನ್ನು ವಿಚಾರಣಾ ಅಧಿಕಾರಿಯನ್ನಾಗಿ ಹಾಗೂ ಶ್ರೀ ಹೆಚ್.ಬಿ. ಪುಟ್ಟಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕರು-1, ರೇಷ್ಮೆ ಉದ್ಯಮಕೋಶ, ಓಕಳಿಪುರಂ ಇವರನ್ನು ಪ್ರಕರಣದ ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ನ್ಯಾಯಾಲಯದ ಪ್ರಕರಣವಾದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ವಿಚಾರಣಾಧಿಕಾರಿ ವಿಚಾರಣೆ ನಡೆಸಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಭಾರತಿ ಆರ್. ನಾಯಕ್**

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಪಿ.ಆರ್. 1414 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ರೇಷ್ಮೆ)

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

**ವಿಷಯ :** ಡಾ: ಎಸ್.ಶಶಿಧರ್, ಹಿಂದಿನ ಪ್ರಾಧ್ಯಾಪಕರು ಹಾಗೂ ಹಾಲಿ ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರಿಗೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ :**

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 343 ಪಿಟಿಡಿ 2006, ದಿನಾಂಕ 02-11-2006.

2) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಔನಿಇ/525/ಸಿಬ್ಬಂದಿ/2010-11, ದಿನಾಂಕ 15-10-2010.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ: ಎಂ.ಎಸ್. ಶ್ರೀನಾಥ್ ಇವರು ಸರ್ಕಾರಿ ಸೇವೆಯಿಂದ ದಿನಾಂಕ 31-12-2006 ರಂದು ಸ್ವಇಚ್ಛಾ ನಿವೃತ್ತಿ ಹೊಂದಿದ ನಿಮಿತ್ತ ತೆರವಾದ ಜಾಗಕ್ಕೆ ಡಾ: ಎಸ್. ಶಶಿಧರ್, ಹಿಂದಿನ ಪ್ರಾಧ್ಯಾಪಕರು ಅವರ ಹುದ್ದೆಯ ಜೊತೆಗೆ ದಿನಾಂಕ 02-01-2007 ರಿಂದ 28-07-2010 ರವರೆಗೆ ಪ್ರಾಂಶುಪಾಲರ ಹುದ್ದೆಯಲ್ಲಿ ಕಾರ್ಯನಿರ್ವಹಿಸುವಂತೆ ಅಧಿಕ ಪ್ರಭಾರದಲ್ಲಿರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ, ಡಾ: ಎಸ್. ಶಶಿಧರ್ ಇವರು ದಿನಾಂಕ 02-01-2007 ರಿಂದ 28-07-2010 ರವರೆಗೆ ಪ್ರಾಂಶುಪಾಲರ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರ ಕರ್ತವ್ಯ ನಿರ್ವಹಿಸಿರುವುದರಿಂದ, ಸದರಿ ಹುದ್ದೆಯ ವೇತನ ಶ್ರೇಣಿ ರೂ. 14300-19250 ರಲ್ಲಿ

ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 68 ರ ಮೇರೆಗೆ ಪ್ರಭಾರ ಭತ್ಯೆ ಮಂಜೂರು ಮಾಡುವಂತೆ ಔಷಧ ನಿಯಂತ್ರಕರು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಆಕುಕ 345 ಪಿಟಿಡಿ 2010 ಬೆಂಗಳೂರು, ದಿನಾಂಕ : 18–05–2011**

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಡಾ: ಎಸ್. ಶಶಿಧರ್, ಹಿಂದಿನ ಪ್ರಾಧ್ಯಾಪಕರು ಹಾಗೂ ಹಾಲಿ ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರು ದಿನಾಂಕ 02-01–2007 ರಿಂದ 28–07–2010 ರವರೆಗೆ ಅಂದರೆ, ವೇತನ ಸಹಿತ ರಜೆ ಅವಧಿಯನ್ನು ಹೊರತುಪಡಿಸಿ ಸದರಿ ಕಾಲೇಜಿನ ಪ್ರಾಂಶುಪಾಲರ ಹುದ್ದೆಯಲ್ಲಿ ಹೆಚ್ಚುವರಿಯಾಗಿ ಪ್ರಭಾರ ಕರ್ತವ್ಯ ನಿರ್ವಹಿಸಿರುವುದರಿಂದ, ಸದರಿ ಅವಧಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 68 ರಡಿ ಹಾಗೂ ಅದರ ಷರತ್ತಿಗೊಳಪಡಿಸಿ ಪ್ರಾಂಶುಪಾಲರ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನದ ಶೇಕಡಾ 5 ರಷ್ಟನ್ನು ಮೀರದಂತೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಆಕುಕ 308 ಆಂಆಸ 2011, ದಿನಾಂಕ 24–03–2011 ರಲ್ಲಿ ನೀಡಿದ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಆರ್.ಎಸ್. ಇಟಗಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. 1415

## ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

**ವಿಷಯ :** ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉತ್ತರ ಕನ್ನಡ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

**ಓದಲಾಗಿದೆ :**
1) ಸರ್ಕಾರಿ ಆದೇಶ ಸಂಖ್ಯೆ: ಯೋಇ 309 ಪಿಟಿಪಿ 94 ದಿನಾಂಕ 07–08–1995.
2) ಮುಖ್ಯಮಂತ್ರಿಯವರ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ: ಮುಮಂ/ಆ.ಕಾ/2328/2009 ದಿನಾಂಕ 13–07–2010.
3) ಸರ್ಕಾರಿ ಆದೇಶ ಸಂಖ್ಯೆ: ಯೋಇ 65 ಯೋವಿವಿ 2008 ದಿನಾಂಕ: 16–07–2009.

**ಪ್ರಸ್ತಾವನೆ :**

ಮೇಲೆ ಓದಲಾದ (1)ರ ದಿನಾಂಕ: 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ಶ್ರೀ ಜಗದೀಶ ನಿಂಗಪ್ಪ ಕರುಬರ ಸಾಳ ನ್ಯಾಸರ್ಗಿ, ಸಾಮಾನ್ಯ ವರ್ಗ ಇವರನ್ನು ಸದಸ್ಯರಾಗಿ ನೇಮಿಸಲಾಗಿತ್ತು. ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಇವರ ಬದಲಾಗಿ ಶ್ರೀ ಗುಡ್ಡಪ್ಪ ಶಿವನಾಗಪ್ಪ ಕಾತೂರು, ಸಾ:ಚಿಗಳ್ಳಿ, ಮುಂಡಗೋಡ ತಾಲ್ಲೂಕು ಇವರನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಯೋಇ 84 ಯೋವಿವಿ 2009 (ಭಾ–2) ಬೆಂಗಳೂರು, ದಿನಾಂಕ : 23ನೇ ಮೇ 2011.**

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಸದಸ್ಯರನ್ನು ಬದಲಾವಣೆ ಮಾಡಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

| ಕ್ರ. ಸಂ. | ತಾಲ್ಲೂಕು | ದಿನಾಂಕ 16–07–2009ರ ಆದೇಶದಲ್ಲಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ್ದ ಸದಸ್ಯರ ಹೆಸರು | ಬದಲಾವಣೆ ಮಾಡಿ ನಾಮನಿರ್ದೇಶನ ಮಾಡಿರುವ ಸದಸ್ಯರ ಹೆಸರು |
|---|---|---|---|
| 1. | ಉತ್ತರ ಕನ್ನಡ ಜಿಲ್ಲೆ ಮುಂಡಗೋಡು ತಾಲ್ಲೂಕು | ಶ್ರೀ ಜಗದೀಶ ನಿಂಗಪ್ಪ ಕುರುಬರ, ಸಾ: ನ್ಯಾಸರ್ಗಿ, ಮುಂಡಗೋಡ ತಾಲ್ಲೂಕು | ಶ್ರೀ ಗುಡ್ಡಪ್ಪ ಶಿವನಾಗಪ್ಪ ಕಾತೂರು, ಸಾ: ಚಿಗಳ್ಳಿ, ಮುಂಡಗೋಡ ತಾಲ್ಲೂಕು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಬಿ. ಚಿಕ್ಕರಾಜು**
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 1416

## ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

**ವಿಷಯ :** ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2011–12ನೇ ಸಾಲಿನ ಮೊದಲನೆಯ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** ಪತ್ರ ಸಂಖ್ಯೆ: ಹೈಕಪ್ರಮಂ/ಲೆಶಾ–ಅನುದಾನ ಬೇಡಿಕೆ/2011/12/263 ದಿನಾಂಕ 05–05–2011.

**ಪ್ರಸ್ತಾವನೆ :**

2010–11ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–01 (ಯೋಜನೆ)" ಅಡಿಯಲ್ಲಿ ರೂ. 130.00 ಲಕ್ಷಗಳನ್ನು ಹಾಗೂ "4515–00–800–0–01" ಅಡಿಯಲ್ಲಿ ರೂ. 4370.00 ಲಕ್ಷಗಳನ್ನು ಒದಗಿಸಲಾಗಿದೆ. ಮೇಲೆ ಓದಲಾದ (1)ರ ಪತ್ರದಲ್ಲಿ ಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಇವರು ಮೊದಲನೆಯ ಕಂತನ್ನು ಬಿಡುಗಡೆ ಮಾಡಲು ಕೋರಿರುವ ಹಿನ್ನಲೆಯಲ್ಲಿ ಮಂಡಳಿಗೆ ಮೊದಲನೆಯ ಕಂತಾಗಿ ರೂ. 1125.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಯೋಇ 25 ಹೈಕಮಂ 2011 ಬೆಂಗಳೂರು, ದಿನಾಂಕ : 20ನೇ ಮೇ 2011.**

2011–12ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಆಡಳಿತ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "2515–00–800–0–01–101 (ಸಹಾಯಾನುದಾನ)" ಅಡಿಯಲ್ಲಿ ರೂ. 25.00 ಲಕ್ಷಗಳನ್ನು (ಇಪ್ಪತ್ತೈದು ಲಕ್ಷಗಳು ಮಾತ್ರ) ಬಂಡವಾಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "4515–00–800–0–01–132" ಅಡಿ ರೂ. 800.00 ಲಕ್ಷಗಳನ್ನು (ಎಂಟುನೂರು ಲಕ್ಷಗಳು ಮಾತ್ರ) ವಿಶೇಷ ಘಟಕ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515–00–800–0–01–422" ಅಡಿಯಲ್ಲಿ ರೂ. 200.00 ಲಕ್ಷಗಳನ್ನು (ಇನ್ನೂರು ಲಕ್ಷಗಳು ಮಾತ್ರ) ಹಾಗೂ ಗಿರಿಜನ ಉಪಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515–00–800–0–01–423" ಅಡಿಯಲ್ಲಿ ರೂ. 100.00 ಲಕ್ಷಗಳನ್ನು (ನೂರು ಲಕ್ಷಗಳು ಮಾತ್ರ) ಒಟ್ಟು ರೂ. 1125.00 ಲಕ್ಷಗಳನ್ನು (ಹನ್ನೊಂದು ಕೋಟಿ ಇಪ್ಪತ್ತೈದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2011–12ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 1417

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

**ವಿಷಯ :** ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 2009–10ನೇ ಸಾಲಿನ ಹೊಸ ಯೋಜನೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ ರೂ. 10.00 ಕೋಟಿಗಳ ಅನುದಾನ – ಆಡಳಿತಾತ್ಮಕ ಮಂಜೂರಾತಿ.

**ಓದಲಾಗಿದೆ :** ಕಾರ್ಯ ನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಟಿಪ್ಪಣಿ ಸಂಖ್ಯೆ: VGST/P–12/SSP-UG/10–11/447, ದಿನಾಂಕ 01–12–2010.

**ಸರ್ಕಾರದ ಆದೇಶ ಸಂಖ್ಯೆ : ವಿಯಇ 183 ವಿತ್ರಮ 2010 ಬೆಂಗಳೂರು, ದಿನಾಂಕ : 21ನೇ ಮೇ 2011.**

**ತಿದ್ದುಪಡಿ**

ಸರ್ಕಾರಿ ಆದೇಶ ಸಂಖ್ಯೆ: ವಿಯಇ 33 ವಿತ್ರಮ 2009, ದಿನಾಂಕ 21–05–2010ರ ಅನುಬಂಧ 1ರಲ್ಲಿ ಕ್ರಮ ಸಂಖ್ಯೆ: 9 ಕ್ರಿಯಾ ಯೋಜನೆ/ಕಾರ್ಯಕ್ರಮಗಳ ಶೀರ್ಷಿಕೆಯನ್ನು ಕೆಳಗೆ ನಮೂದಿಸಿದಂತೆ ಮಾರ್ಪಡಿಸಲಾಗಿದೆ.

| | | |
|---|---|---|
| ಕ್ರ.ಸಂ. | ಪದವಿ ಕಾಲೇಜುಗಳಲ್ಲಿ ವಿಜ್ಞಾನದ ಸರಳ ಯೋಜನೆಗಳಿಗೆ ಸಹಾಯಾನುದಾನ | Science Projects in College Education (SPICE) |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ. ಭಾನುಮತಿ**

ಪೀಠಾಧಿಕಾರಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1418

## ಯುವಜನ ಸೇವಾ ಸಚಿವಾಲಯ

**ವಿಷಯ :** ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಅರ್ಧ ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ – ಆದೇಶ.

**ಓದಲಾಗಿದೆ :** ದಿನಾಂಕ 17–02–2011ರ ಯುಸೇಇ 31 ಯುರಾಸೇ 2009ರ ಸಂಖ್ಯೆಯ ಸರ್ಕಾರದ ಆದೇಶ.

**ಪ್ರಸ್ತಾವನೆ :**

ಬೆಂಗಳೂರು ನಗರ ಜಿಲ್ಲೆಯ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದ ಉತ್ತರ ಭಾಗದಲ್ಲಿ, ಎನ್‌ಸಿಸಿ ಕಟ್ಟಡದ ನಂತರ, ಅಗ್ನಿಶಾಮಕ ಠಾಣೆಯನ್ನು ನಿರ್ಮಿಸುವ ಸಲುವಾಗಿ ಶಾಲೆಗೆ ಸೇರಿದ ಅರ್ಧ ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಇವರ ವಶಕ್ಕೆ ನೀಡಲು ದಿನಾಂಕ: 17–02–2011ರ ಸರ್ಕಾರದ ಆದೇಶದ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಈ ಅರ್ಧ ಎಕರೆ ಜಮೀನಿನ ಗುತ್ತಿಗೆಗಾಗಿ ವಾರ್ಷಿಕ ಬಾಡಿಗೆಯನ್ನು ಹಾಗೂ ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಯುಸೇಇ 31 ಯುರಾಸೇ 2009 ಬೆಂಗಳೂರು, ದಿನಾಂಕ : 24ನೇ ಮೇ 2011.**

ದಿನಾಂಕ 17–02–2011ರ ಸರ್ಕಾರದ ಆದೇಶದ ಮೂಲಕ, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿರುವ ಅರ್ಧ ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಈ ಗುತ್ತಿಗೆಗಾಗಿ ವಾರ್ಷಿಕ ರೂ. 1,000/–ಗಳ ಗುತ್ತಿಗೆ ಬಾಡಿಗೆಯನ್ನು ನಿಗದಿಪಡಿಸಲು ಸರ್ಕಾರವು ಆದೇಶಿಸಿದೆ.

ಮುಂದುವರೆದು ಈ ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳನ್ನು ಈ ಆದೇಶದ ಅನುಬಂಧದ ಪ್ರಕಾರ ವಿಧಿಸಲು ಸಹ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಿ. ಶ್ರೀನಿವಾಸ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವಜನ ಸೇವಾ ಇಲಾಖೆ.

## ದಿನಾಂಕ 24–05–2011ರ ಯುಸೇಇ 31 ಯುರಾಸೇ 2009ನೇ ಸಂಖ್ಯೆಯ ಸರ್ಕಾರದ ಆದೇಶದ ಅನುಬಂಧ

### ಷರತ್ತು ಮತ್ತು ನಿಬಂಧನೆಗಳು

1. ದಿನಾಂಕ 17–02–2011ರ ಯುಸೇಇ 31 ಯುರಾಸೇ 2009ನೇ ಸಂಖ್ಯೆಯ ಸರ್ಕಾರದ ಆದೇಶದ ಮೂಲಕ, ಬೆಂಗಳೂರು ನಗರ ಜಿಲ್ಲೆಯ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದ ಉತ್ತರ ಭಾಗದಲ್ಲಿ, ಎನ್‌ಸಿಸಿ ಕಟ್ಟಡ ನಂತರ, ಅಗ್ನಿ ಶಾಮಕ ಠಾಣೆಯನ್ನು ನಿರ್ಮಿಸಲು ಶಾಲೆಗೆ ಸೇರಿದ ಅರ್ಧ ಎಕರೆ ಜಮೀನನ್ನು ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು ಇವರಿಗೆ ನೀಡಲು ಮಂಜೂರಾತಿಯನ್ನು ನೀಡಲಾಗಿರುತ್ತದೆ. ಇದರ ಪ್ರಕಾರ ಈ ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡತಕ್ಕದ್ದು.
2. ಶಾಲೆಯ ಈ ಅರ್ಧ ಎಕರೆ ಜಮೀನಿಗೆ ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ವಾರ್ಷಿಕ ರೂ. 1,000/– ಗಳ ಗುತ್ತಿಗೆ ಬಾಡಿಗೆಯನ್ನು ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಪಾವತಿಸತಕ್ಕದ್ದು.
3. ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿ ನೀಡಲಾಗುವ ಅರ್ಧ ಎಕರೆ ಜಾಗದಲ್ಲಿ ಅಗ್ನಿಶಾಮಕ ಠಾಣೆಯನ್ನು ಮಾತ್ರ ಕಟ್ಟತಕ್ಕದ್ದು.
4. ಸದರಿ ಜಾಗದಲ್ಲಿ ಇತರೆ ಯಾವುದೇ ರೀತಿಯ ತಾತ್ಕಾಲಿಕ/ಶಾಶ್ವತ ವಸತಿ ಗೃಹ/ಅರೆ ವಸತಿ ಗೃಹಗಳ ನಿರ್ಮಾಣವನ್ನು ಕೈಗೊಳ್ಳುವಂತಿಲ್ಲ.
5. ಸದರಿ ಜಾಗಕ್ಕೆ ಪಶ್ಚಿಮ ದಿಕ್ಕಿನಿಂದ (ಬೆಂಗಳೂರು–ಬಳ್ಳಾರಿ ಹೆದ್ದಾರಿ ಕಡೆಯಿಂದ) ಪ್ರವೇಶ ದ್ವಾರವನ್ನು ನಿರ್ಮಿಸಿಕೊಳ್ಳತಕ್ಕದ್ದು.
6. ಸದರಿ ಅರ್ಧ ಎಕರೆ ಜಾಗಕ್ಕೆ ಸುತ್ತಲೂ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಹಂಚಿಕೆಯಾದ ಅನುದಾನದಲ್ಲಿ ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡಿಕೊಳ್ಳತಕ್ಕದ್ದು.
7. ಪೆರೇಡ್ ಹಾಗೂ ಇನ್ನಿತರೆ ಚಟುವಟಿಕೆಗಳನ್ನು ಸಹ ಈ ಅರ್ಧ ಎಕರೆ ಜಾಗದಲ್ಲಿಯೇ ಕೈಗೊಳ್ಳತಕ್ಕದ್ದು.
8. ಯಾವುದೇ ರೀತಿಯ ವಾಣಿಜ್ಯ ವ್ಯವಹಾರಗಳಿಗಾಗಿ ಈ ಜಾಗವನ್ನು ಉಪಯೋಗಿಸಿಕೊಳ್ಳತಕ್ಕದ್ದಲ್ಲ ಮತ್ತು ಬೇರೆಯವರಿಗೆ ನೀಡತಕ್ಕದ್ದಲ್ಲ.
9. ಕಾಲದಿಂದ ಕಾಲಕ್ಕೆ ಸರ್ಕಾರವು ನಿಗದಿಪಡಿಸುವ ದರ, ತೆರಿಗೆ, ಇತ್ಯಾದಿಗಳನ್ನು ಪಾವತಿಸತಕ್ಕದ್ದು.
10. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ರೀತಿಯ ಆದೇಶಗಳಿಗೆ ಈ ಗುತ್ತಿಗೆಯು ಒಳಪಟ್ಟಿರುತ್ತದೆ.
11. ಈ ಷರತ್ತು ಮತ್ತು ನಿಬಂಧನೆಗಳನ್ವಯ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಮತ್ತು ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಈ ಅರ್ಧ ಎಕರೆ ಜಮೀನಿನ ಗುತ್ತಿಗೆ ಬಗ್ಗೆ ಕಾನೂನು ಬದ್ಧವಾಗಿ ಒಪ್ಪಂದವನ್ನು ನೆರವೇರಿಸಿಕೊಳ್ಳತಕ್ಕದ್ದು.

**ಸಿ. ಶ್ರೀನಿವಾಸ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವಜನ ಸೇವಾ ಇಲಾಖೆ.

ಪಿ.ಆರ್. 1419

## ENERGY SECRETARIAT

**Sub:** Order for signing of Memorandum of Understanding between Power Company of Karnataka Limited (PCKL) and all other ESCOMs.

**Read :** Letter No. PCKL/A 18/417/10-11/5550 dated 17-01-2011 of Power Company of Karnataka Limited (PCKL).

**PREAMBLE :**

Power Company of Karnataka Limited (PCKL), a Special Purpose Vehicle (SPV) has been formed by Government of Karnataka vide Order No: EN 138 PPC 2006, dated 7th April 2007. The expenditure of PCKL is being met out of the seed money of Rs.99 Lakhs received from each of the ESCOMs equally, based on the decision taken by PCKL Board in its meeting held on 4-12-2007. The same is being replenished as and when shortfall arises. However, in order to reduce the burden on Hubli Electricity Supply Company (HESCOM) & Gulbarga Electricity Supply Company (GESCOM), the expenditure earlier equally apportioned has been reduced to 10% each by changing the Accounting Policy.

During the course of audit of Annual Financial Statements of PCKL for Financial Year (FY) 2009-10, the Statutory Auditors have suggested the need for entering into a Memorandum of Understanding with all the Electricity Supply Companies (ESCOMs) authorizing PCKL to debit the expenditure against seed money.

In view of the above, a draft Memorandum of Understanding (MoU) was prepared and placed before the PCKL Board in its meeting held on 1st December 2010. The same was approved in its Board Meeting duly authorizing the Managing Director, PCKL to approach the Government with a request to issue necessary directions to the ESCOMs to sign the MoU in token of their acceptance for debiting PCKL expenditure against seed money received from them.

The Managing Director, PCKL has requested the Government vide letter dated 17-01-2011 referred to above for issuance of Government Order. The proposal has been examined at the Government level. Hence, the following order.

**GOVERNMENT ORDER NO. EN 28 VSC 2011, BANGALORE, DATED : 21-05-2011**

The Government is pleased to accord approval for entering into a Memorandum of Understanding between Power Company of Karnataka Limited (PCKL) and all Electricity Supply Companies (ESCOMs) for the purpose of debiting the expenditure of Power Company of Karnataka Limited (PCKL) against the seed money received from all ESCOMs.

Draft MoU to be entered between PCKL and all ESCOMs is enclosed as Annexure-1.

By Order and in the name of the Governor of Karnataka
**SURESH B. KRISHNAPPANAVAR**
Under Secretary to Government,
Energy Department.

## Annexure - 1

## POWER COMPANY OF KARNATAKA LIMITED

## Memorandum of Understanding

This Memorandum of Understanding (The Agreement) entered into on the day set forth below, by and between the Power Company of Karnataka Limited, Kaveri Bhavan, Bangalore (herein after called as PCKL) and five Electricity Supply Companies named as BESCOM, Bangalore, MESCOM, Mangalore, CESC, Mysore, HESCOM, Hubli and GESCOM, Gulbarga (herein after called as all ESCOMs).

1. The Government of Karnataka vide Order dated 7th April 2007 has accorded approval for formation of Special Purpose Vehicle to carry out the bidding process for establishment of power plants through competitive biddings.
2. In accordance with the approval accorded vide Government vide G.O. No. EN 138 PPC 2006 dated 12th July, 2007 PCKL has been incorporated as a Government Company with effect from 20th August 2007 as per the certificate of incorporation issued by the Assistant Registrar of Companies, Bangalore bearing No. U40101KA2007SGCO43640/2007-08 and its business activity has been commenced from 16th October, 2007 as per the certificate of commencement of business issued by Assistant Registrar of Companies, Bangalore bearing No. U40101KA2007SGC043640/2007-08.
3. In accordance with the directions issued in the said order all the five Electricity Supply Companies have contributed a sum of Rs. 1lakh (Rupees one lakh) each towards share capital and Rs. 99 lakhs (Rupees ninety nine lakhs) each towards seed money for carrying out the work of inviting tariff bidding and framing of business rules as per the guidelines of Ministry of Power, Government of India.
4. Consequent on formation of PCKL, the State Power Procurement Co-ordination Centre (SPPCC) cell was merged with PCKL along with the staff vide Government order No. EN 138 PPC 2006, Bangalore dated 1st September, 2007 to carry out the duties.

5. The expenditure to be incurred by PCKL to carry out the work of inviting tariff bidding and farming of business rules as done by Ministry of Power, Government of India, for procurement of power and to carry out erstwhile work of SPPCC, will be met out of Seed Money collected from all the five ESCOMs.
6. With regard to working capital requirement, it was decided in the meeting of the Board of Directors held on 4th December 2007, subject 1/26, to meet the day to day expenditure of PCKL out of seed money received from ESCOMs. The seed money of Rs. 99 lakhs needs to be replenished whenever short fall arises, for which Managing Director, PCKL will address ESCOMs for additional funds.
7. In the absence of any Revenue/Income streams for the Company other than miscellaneous receipts by way of sale of bid documents etc., such time, all the five ESCOMs shall share expenditure of PCKL as per the percentage indicated below.

   BESCOM: 50% MESCOM: 15% CESC: 15% HESCOM: 10% GESCOM: 10%
8. The expenditure so incurred as stated in Para (5) shall be shared buy all the five ESCOMs in accordance with the Para (7) and accordingly PCKL shall intimate its expenditure monthly/quarterly to all the five ESCOMs in order to exhibit the same in their books of accounts against the seed money provided to PCKL. The credits if any to be given towards interest earned on the deposit of surplus fund will be afforded/adjusted against the expenditure at the end of the financial year.
9. The expenditure of PCKL towards upcoming power projects in Karnataka or in any of the States on behalf of Government of Karnataka and Statutory levies, if any, payable, shall be initially met out of seed money and the same shall be recovered from the successful bidders of the power projects.
10. The expenditure reimbursed from the power projects referred in Para (9), will be credited back to the seed money since the initial expenditure is met out of the seed money.
11. In respect of charges collected/received by PCKL towards reactive energy/open access shall not be treated as PCKL income and it shall be passed on to respective five ESCOMs on par with the energy allocation/drawal.
12. In respect of wheeling charges collected/received by PCKL on behalf of ESCOMs or Generating Stations shall not be treated as income of the company and shall be passed on to respective ESCOMs or Generation Stations as the case may be.
13. All the expenditure debited by PCKL will be reimbursement within 60 days by the respective ESCOMs. Further the Statutory levies including Service Tax and Sales Tax, if any, shall be reimbursed with retrospective effect by the respective ESCOMs proportionately as mentioned in Para (6).
14. The Board of Directors of PCKL shall amend or vary any of the above Clauses as required from time to time with the consent of all ESCOMs duly obtaining approval from the Government of Karnataka.

IN WITNESS WHERE OF POWER COMPANY OF KARNATAKA LIMITED and all the Electricity Supply companies have executed this Memorandum of Understanding this…………day of…………..2011.

For POWER COMPANY OF KARNATAKA LIMITED

Authorized Signatory Witnesses: 1.

2.

FOR ELECTRICITY SUPPLY COMPANIES.

Managing Director, BESCOM

Managing Director, MESCOM

Managing Director, CESCOM

Managing Director, GESCOM

Managing Director, HESCOM

Witnesses: 1.

2.

**SURESH B. KRISHNAPPANAVAR**

Under Secretary to Government,

Energy Department

P.R. 1420

## ನಗರಾಭಿವೃದ್ಧಿ ಸಚಿವಾಲಯ

**ವಿಷಯ** : ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ : ನಅಇ 167 ಎಸಿಬಿ 2010, ದಿ: 13/8/2010
2) ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 167 ಎಸಿಬಿ 2010, ದಿ: 24/8/2010
3) ಸರ್ಕಾರದ ಆದೇಶ ಸಂಖ್ಯೆ : ನಅಇ 54 ಎಬಿಸಿ 2010, ದಿ: 26/11/2010
4) ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 18/1/2011
5) ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಪೌನಿ/ ತಾಂತ್ರಿಕ/ ಬಳ್ಳಾರಿ/116 (ಭಾಗ-4)09-10, ದಿನಾಂಕ 27/4/2011
6) ಸರ್ಕಾರದ ಆದೇಶ ಸಂಖ್ಯೆ: ನಅಇ 43 ಎಬಿಸಿ 2010, ದಿನಾಂಕ 17/1/2011
7) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009(4), ದಿನಾಂಕ 13/7/2009
8) ಸರ್ಕಾರದ ಆದೇಶ ಸಂಖ್ಯೆ: ನಅಇ 13 ಎಬಿಸಿ 2011, ದಿನಾಂಕ 23/2/2011

**ಪ್ರಸ್ತಾವನೆ:**

ಮೇಲೆ ಉಲ್ಲೇಖ (1) ರಲ್ಲಿ ಓದಲಾದ ಸರ್ಕಾರದ ದಿನಾಂಕ 13/8/2010ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ 7 ಮಹಾನಗರಪಾಲಿಕೆಗಳಲ್ಲಿ 2ನೇ ಹಂತದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು 2011-12 ರಿಂದ 2013-14ರ ಆರ್ಥಿಕ ವರ್ಷಗಳಲ್ಲಿ ಪ್ರತಿ ಮಹಾನಗರಪಾಲಿಕೆಗೆ ತಲಾ ರೂ. 100 ಕೋಟಿಯಂತೆ ವಿಶೇಷ ಅನುದಾನವನ್ನು ಒದಗಿಸಲು ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

2) ಮೇಲೆ (2) ರಲ್ಲಿ ಓದಲಾದ ಸರ್ಕಾರದ ದಿನಾಂಕ 24/8/2010ರ ಸುತ್ತೋಲೆಯಲ್ಲಿ ರಾಜ್ಯದಲ್ಲಿನ 7 ಮಹಾನಗರಪಾಲಿಕೆಗಳಲ್ಲಿ 2ನೇ ಹಂತದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡುವುದಕ್ಕೆ ಮತ್ತು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ.

3) ಮೇಲೆ (3) ರಲ್ಲಿ ಓದಲಾದ ಸರ್ಕಾರದ ದಿನಾಂಕ 26/11/2010ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವು ಷರತ್ತುಗಳು ಮತ್ತು ಮೊತ್ತದ ಮಿತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

4) ಮೇಲೆ (4) ರಲ್ಲಿ ಓದಲಾದ ಸರ್ಕಾರದ ದಿನಾಂಕ 18/1/2011ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಗೆ ಕೆಲವು ಷರತ್ತುಗಳು ಮತ್ತು ಮೊತ್ತದ ಮಿತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

5) ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ ಬಳ್ಳಾರಿ ಮಹನಗರಪಾಲಿಕೆಯಲ್ಲಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಯನ್ನು ಸಲ್ಲಿಸಿ ಅದಕ್ಕೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

6) ಪ್ರಸ್ತಾವನೆಯಲ್ಲಿ ವರದಿ ಮಾಡಿರುವಂತೆ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 18/1/2011 ರಲ್ಲಿ ಸರ್ಕಾರದ ಅನುಮೋದನೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 13 ಎಬಿಸಿ 2011, ದಿನಾಂಕ 23/2/2011 ರಲ್ಲಿ 26 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾದ ನಂತರ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಅಂದಾಜು ಪಟ್ಟಿಗಳನ್ನು ಹಾಗೂ ಸ್ಥಳ ಪರಿಶೀಲನೆ ಮಾಡಿ ಈಗಾಗಲೇ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದ ಕಾಮಗಾರಿಗಳಿಗೆ ಕೆಲವು ಮಾರ್ಪಾಡುಗಳನ್ನು ಮಾಡಲು ತಿಳಿಸಿದ ಮೇರೆಗೆ, ಸಮಾಲೋಚಕರು ಅಂದಾಜು ಪಟ್ಟಿಯಲ್ಲಿ ಬದಲಾವಣೆಗಳನ್ನು ಮಾಡಿದ ನಂತರ ತಯಾರಿಸಲಾಗಿರುವ ಪರಿಷ್ಕೃತ ಅಂದಾಜು ಪಟ್ಟಿಯನ್ನು ವಿಶೇಷಾನುದಾನ ಸಮಿತಿ ಅಧ್ಯಕ್ಷರಾದ ಮಾನ್ಯ ಪ್ರವಾಸೋದ್ಯಮ, ಮೂಲಭೂತ ಸೌಕರ್ಯಾಭಿವೃದ್ಧಿ ಹಾಗೂ ಯುವಜನ ಮತ್ತು ಕ್ರೀಡಾ ಇಲಾಖೆ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 5/3/2011ರಂದು ನಡೆದ ಸಭೆಯು ಪರಿಶೀಲಿಸಿ ಅಂತಿಮಗೊಳಿಸಿರುತ್ತದೆ. ಸಮಿತಿಯ ನಡವಳಿಯಲ್ಲಿ ಕಾಮಗಾರಿಗಳಿಗೆ ಅವಶ್ಯ ಅಂದಾಜು ತಯಾರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಸಂಬಂಧಪಟ್ಟವರಿಂದ ಪಡೆದು ಟೆಂಡರ್ ಕರೆಯಲು ಮತ್ತು ಈಗಾಗಲೇ ತಾಂತ್ರಿಕ ಹಾಗೂ ಆಡಳಿತಾತ್ಮಕವಾಗಿ ಅನುಮೋದನೆಯಾಗಿರುವ 25 ಕಾಮಗಾರಿಗಳಿಗೆ ಕೂಡಲೇ ಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ.

7) ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 201, ದಿನಾಂಕ 18/1/2011 ರಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು ಅದಕ್ಕೆ ಹೋಲಿಕೆ ಮಾಡಿ ಈಗ ಸಲ್ಲಿಸಿರುವ ಕ್ರಿಯಾ ಯೋಜನೆ ಪಟ್ಟಿಯ ವಿವರಗಳನ್ನು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಉಲ್ಲೇಖ (4)ರ ಪತ್ರದಲ್ಲಿ ಈ ಕೆಳಕಂಡಂತೆ ನೀಡಿರುತ್ತಾರೆ.

(ಮೊತ್ತ ಲಕ್ಷ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಕಾಮಗಾರಿ ಸ್ವರೂಪ | ಸರ್ಕಾರದಿಂದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಕಾಮಗಾರಿಗಳ | | ಬಳ್ಳಾರಿ ಮಹಾನಗರಪಾಲಿಕೆಯ ಪರಿಷ್ಕೃತ ಕ್ರಿಯಾ ಯೋಜನೆಯ ಅನ್ವಯ ಕಾಮಗಾರಿಗಳ | |
|---|---|---|---|---|---|
| | | ಸಂಖ್ಯೆ | ಮೌಲ್ಯ | ಸಂಖ್ಯೆ | ಮೌಲ್ಯ |
| 1 | ಮುಂದುವರೆದ ಕಾಮಗಾರಿಗಳು | 13 | 978.61 | 13 | 978.61 |
| 2 | ರಸ್ತೆ ಕಾಮಗಾರಿಗಳು | 26 | 7570.32 | 26 | 4269.68 |
| 3 | ಇತರೆ ಕಾಮಗಾರಿಗಳು | 11 | 1050.00 | 26 | 1782.30 |
| 4 | ಸಮಾಲೋಚಕರ ಶುಲ್ಕ | 1 | 256.47 | 1 | 146.38 |
| 5 | 3ನೇ ಪಾರ್ಟಿ ತಪಾಸಣಾ ಶುಲ್ಕ | 1 | 42.74 | 1 | 39.06 |
| 6 | ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಅಡಕ ಗೊಳಿಸಿರುವ ಹೆಚ್ಚುವರಿ ರಸ್ತೆ ಕಾಮಗಾರಿಗಳು | – | – | 36 | 2733.97 |
| 7 | ಕಂಟಿನ್‌ಜೆನ್ಸಿ | | 101.86 | | 50.00 |
| | ಒಟ್ಟು | 52 | 10000.00 | 103 | 1000.00 |

8) ಈಗ ಸರ್ಕಾರದ ಅನುಮೋದನೆ ಕೋರಿ ಸಲ್ಲಿಸಲಾಗಿರುವ ಪ್ರಸ್ತಾವನೆಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ:

ಅ) ಈ ಹಿಂದೆ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದ ರೂ.7,570.32 ಲಕ್ಷ ಮೌಲ್ಯ 26 ರಸ್ತೆ ಕಾಮಗಾರಿಗಳ ಸ್ಥಳವನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಸ್ಥಳ ಪರಿಶೀಲನೆ ಮಾಡಿ ನೀಡಿರುವ ಸೂಚನೆಯನ್ವಯ ಕಾಮಗಾರಿಯ ಅಂಶಗಳಲ್ಲಿ ಮಾರ್ಪಾಡಾಗಿರುವ ಕಾರಣ 26 ರಸ್ತೆ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತ ರೂ.4,269.68 ಲಕ್ಷಗಳಾಗಿರುತ್ತದೆ. ಆದ್ದರಿಂದ ಈ ಬಾಬ್ತು ಉಳಿತಾಯವಾಗುವ ಅನುದಾನದಲ್ಲಿ ರೂ. 2,733.97 ಲಕ್ಷಗಳ ಮೌಲ್ಯದ 36 ಹೊಸ ರಸ್ತೆ ಕಾಮಗಾರಿಗಳನ್ನು ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದೆ.

ಆ) ಈ ಹಿಂದೆ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದ ರೂ.1,050 ಲಕ್ಷ ಮೌಲ್ಯದ 11 ಕಾಮಗಾರಿಗಳನ್ನು ಮಾರ್ಪಡಿಸಿ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ರೂ. 1,782.30 ಮೌಲ್ಯದ 26 ಕಾಮಗಾರಿಗಳನ್ನು ಅಳವಡಿಸಲಾಗಿದೆ.

ಇ) ಈ ಹಿಂದೆ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸಮಾಲೋಚಕರ ಶುಲ್ಕಕ್ಕೆ ಮೀಸಲಿಟ್ಟಿದ್ದ ರೂ.256.47, 3ನೇ ಪಾರ್ಟಿ ತಪಾಸಣಗೆ ಏಜೆನ್ಸಿಗೆ ಮೀಸಲಿಟ್ಟಿದ್ದ ರೂ.42.74 ಹಾಗೂ ಕಂಟಿನ್‌ಜೆನ್ಸಿ ವೆಚ್ಚಕ್ಕೆ ಮೀಸಲಿಟ್ಟಿದ್ದ ರೂ.101.86 ಲಕ್ಷ ಅನುದಾನವನ್ನು ಕ್ರಮವಾಗಿ ರೂ.146.38, ರೂ 39.06 ಹಾಗೂ ರೂ.50 ಲಕ್ಷಗಳಿಗೆ ಮಿತಿಗೊಳಿಸಿ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಅಳವಡಿಸಿರುತ್ತಾರೆ.

9) ಮೇಲೆ (6) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ರೂ.100 ಕೋಟಿ ಮೊತ್ತದ ಕಾಮಗಾರಿಗಳನ್ನು ಈ ಆರ್ಥಿಕ ವರ್ಷದಲ್ಲಿಯೇ ಕೈಗೆತ್ತಿಕೊಳ್ಳಲು ಮತ್ತು ರೂ.15. ಕೋಟಿ ಮೊತ್ತವನ್ನು ಕಾಮಗಾರಿಗಳ ತೃಪ್ತಿಕರ ಪ್ರಗತಿ ಪರಿಗಣಿಸಿ ಹಂತ ಹಂತವಾಗಿ 2010–11ರ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

10) ಮೇಲೆ (7) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಬಳ್ಳಾರಿ ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ ಮಹಾನಗರಪಾಲಿಕೆಗಳಲ್ಲಿ ರೂ.10 ಲಕ್ಷಕ್ಕೆ ಮೀರಿದ ಎಲ್ಲಾ ರೀತಿಯ ಸಾರ್ವಜನಿಕ ಸಂಗ್ರಹಣೆಗಳನ್ನು ಇ– ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಮುಖಾಂತರ ಕೈಗೊಳ್ಳುವಂತೆ ಆದೇಶಿಸಲಾಗಿದೆ.

11) ಮೇಲೆ (8) ರಲ್ಲಿ ಓದಲಾದ ಆದೇಶದಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ರೂ.75,70,62,112.25 ಅಂದಾಜು ಮೊತ್ತದ 26 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

12) ಅದರಂತೆ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಂಕ 18/1/2011ರಲ್ಲಿ ಈಗ ಸರ್ಕಾರದ ಅನುಮೋದನೆ ಕೋರಿ ಸಲ್ಲಿಸಿರುವ ಪರಿಷ್ಕೃತ ಕ್ರಿಯಾ ಯೋಜನೆ ಪಟಿಯಲ್ಲಿನ ಕಾಮಗಾರಿಗಳು ಸೇರಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 18/1/2011ರ ಆದೇಶವನ್ನು ಹಿಂದಕ್ಕೆ ಪಡೆದು ಅದರಲ್ಲಿ ಹೇಳಲಾಗಿರುವ ಷರತ್ತುಗಳಿಗೊಳಪಟ್ಟು ಈಗ ಸರ್ಕಾರದ ಅನುಮೋದನೆ ಕೋರಿ ಸಲ್ಲಿಸಿರುವ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಗೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರ ಶಿಫಾರಸ್ಸನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2011 ಬೆಂಗಳೂರು, ದಿನಾಂಕ 25ನೇ ಮೇ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಿ ಹೊರಡಿಸಲಾಗಿದ್ದ ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 18/1/2011 ಅನ್ನು ಹಿಂದಕ್ಕೆ ಪಡೆಯಲಾಗಿದೆ.

2) ಮುಂದುವರೆದು, ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಈ ಕೆಳಕಂಡ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಿದೆ.

(ಮೊತ್ತ ಲಕ್ಷ ರೂಪಾಯಿಗಳಲ್ಲಿ)

| ಕ್ರ. ಸಂ | ಕ್ಷೇತ್ರ | ಕಾಮಗಾರಿ ಹೆಸರು | ಉದ್ದ ಕಿ.ಮೀ | ಮೊತ್ತ |
|---|---|---|---|---|
| | | ಮುಂದುವರೆದ ಕಾಮಗಾರಿಗಳು | | |
| 1 | | ನಗರದ ತೇರು ಬೀದಿಯನ್ನು ಮೋತಿ ವೃತ್ತದಿಂದ ಕನೇಕಲ್ ಬಸ್ ನಿಲ್ದಾಣದ ವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು | 1.00 | 330.67 |
| 2 | | ನಗರದ ಕಾಳಮ್ಮ ಬೀದಿಯನ್ನು ವೆಟನರಿ ಆಸ್ಪತ್ರೆಯಿಂದ ಭಾರತ್ ಬಿಸ್ಕತ್ ಫ್ಯಾಕ್ಟರಿ ವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು | 0.78 | 273.50 |
| 3 | | ನಗರದ ದುರ್ಗಮ್ಮ ವೃತ್ತದಿಂದ ಎಸ್.ಪಿ. ವೃತ್ತದವರೆಗೆ ಹಾಲಿ ಎಲ್.ಟಿ.ಓವರ್ ಹೆಡ್‌ಲೈನನ್ನು ಎಲ್.ಟಿ ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 20.68 |
| 4 | | ನಗರದ ದುರ್ಗಮ್ಮ ವೃತ್ತದಿಂದ ಎಸ್.ಪಿ. ವೃತ್ತದವರೆಗೆ 11 ಕೆ.ವಿ ಹೆಚ್.ಟಿ.ಓವರ್ ಹೆಡ್‌ಲೈನನ್ನು ಹೆಚ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 8.86 |
| 5 | | ನಗರದ ಎಸ್.ಪಿ ವೃತ್ತದಿಂದ ಫೈರ್ ಸ್ಟೇಷನ್‌ವರೆಗೆ ಹಾಲಿ ಎಲ್.ಟಿ.ಓವರ್ ಹೆಡ್‌ಲೈನನ್ನು ಎಲ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 16.13 |
| 6 | | ನಗರದ ಎಸ್.ಪಿ ವೃತ್ತದಿಂದ ಫೈರ್ ಸ್ಟೇಷನ್‌ವರೆಗೆ ಹಾಲಿ 11 ಕೆ.ವಿ.ಹೆಚ್.ಟಿ.ಓವರ್ ಹೆಡ್‌ಲೈನನ್ನು ಹೆಚ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 16.69 |
| 7 | | ನಗರದ ಫೈರ್ ಸ್ಟೇಷನ್‌ನಿಂದ ಓ.ಪಿ.ಡಿ ವೃತ್ತದ ವರೆಗೆ ಹಾಲಿ ಎಲ್..ಟಿ.ಓವರ್ ಹೆಡ್‌ಲೈನನ್ನು ಎಲ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 40.15 |
| 8 | | ನಗರದ ಫೈರ್ ಸ್ಟೇಷನ್ ದಿಂದ ಓ.ಪಿ.ಡಿ ವೃತ್ತದ ವರೆಗೆ ಹಾಲಿ 11 ಕೆ.ವಿ ಹೆಚ್.ಟಿ. ಓವರ್ ಹೆಡ್ ಲೈನನ್ನು ಹೆಚ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 16.69 |
| 9 | | ನಗರದ ಇಂದಿರಾ ವೃತ್ತದಿಂದ ಎಸ್.ಎನ್. ಪೇಟೆ ರಸ್ತೆಗೆ ಹಾಲಿ ಎಲ್.ಟಿ.ಓವರ್ ಹೆಡ್ ಲೈನನ್ನು ಎಲ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 1.42 |
| 10 | | ನಗರದ ಇಂದಿರಾ ವೃತ್ತದಿಂದ ಎಸ್.ಎನ್. ಪೇಟೆ ರಸ್ತೆಗೆ ಹಾಲಿ 11 ಕೆ.ವಿ. ಹೆಚ್.ಟಿ.ಓವರ್ ಹೆಡ್ ಲೈನನ್ನು ಹೆಚ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 49.63 |
| 11 | | ನಗರದ 1ನೇ ರೈಲ್ವೆ ಗೇಟ್ ನಿಂದ ಸುಧಾಕ್ರಾಸ್ ವರೆಗೆ 11 ಕೆ.ವಿ ಹೆಚ್.ಟಿ.ಓವರ್ ಹೆಡ್ ಲೈನನ್ನು ಹೆಚ್.ಟಿ ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 72.86 |
| 12 | | ನಗರದ 1ನೇ ರೈಲ್ವೆ ಗೇಟ್‌ನಿಂದ ಟಿ.ಬಿ.ಆಸ್ಪತ್ರೆ ವರೆಗೆ ಎಲ್.ಟಿ. ಓವರ್ ಹೆಡ್ ಲೈನನ್ನು ಎಲ್.ಟಿ.ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 78.80 |
| 13 | | ನಗರದ 1ನೇ ರೈಲ್ವೆ ಗೇಟ್‌ನಿಂದ ಟಿ.ಬಿ.ಆಸ್ಪತ್ರೆ ವರೆಗೆ 11 ಕೆ.ವಿ.ಹೆಚ್.ಟಿ.ಓವರ್ ಹೆಡ್ ಲೈನನ್ನು ಹೆಚ್.ಟಿ. ಅಂಡರ್ ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು | | 52.53 |
| | | ಒಟ್ಟು ಸ್ಪಿಲ್ ಓವರ್ ವರ್ಕ್ಸ್ ಮೊತ್ತ | 1.78 | 978.61 |
| | | ಹೊಸ ಕಾಮಗಾರಿಗಳು ಪ್ಯಾಕೇಜ್–1 | | |
| 14 | 93 | ನಗರದ ದೋಬಿ ಬೀದಿ, ಕೌಲ್‌ಬಜಾರ್ ಯಿಂದ ಬಂಡಿ ಹಟ್ಟಿವರಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.10 | 201.20 |
| 15 | 93 | ನಗರದ ಜವಾರಿ ಬೀದಿ, ಕೌಲ್‌ಬಜಾರ್ ಮುಖ್ಯರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.65 | 83.24 |
| 16 | 93 | ನಗರದ ಗಡಂಗ್ ಬೀದಿ, ಕೌಲ್‌ಬಜಾರ್ ಮುಖ್ಯರಸ್ತೆಯಿಂದ ಹಳೇ ಮಾರುಕಟ್ಟೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.10 | 119.57 |
| 17 | 93 | ನಗರದ ಕ್ರಿಶ್ಚಿಯನ್ ಸ್ಮಶಾನ, ಕೌಲ್ ಬಜಾರ್ ಮುಖ್ಯರಸ್ತೆಯಿಂದ ಬೈಪಾಸ್ ರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.10 | 134.89 |

| | | | | |
|---|---|---|---|---|
| 18 | 93 | ನಗರದ ಓ.ಪಿ.ಡಿ ರಸ್ತೆ, ಓ.ಪಿ.ಡಿ ವೃತ್ತದಿಂದ ಕೊಳಗಲ್ ರಸ್ತೆವರೆಗೆ (ಸುಧಾಕ್ರಾಸ್) ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.85 | 156.95 |
| 19 | 93 | ನಗರದ ಟೈಲರ್ ಬೀದಿ 2ನೇ ಗೇಟ್ ನಿಂದ ಕೌಲ್‌ಬಜಾರ್ ಮುಖ್ಯರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.75 | 92.05 |
| 20 | 93 | ನಗರದ ಬಂಡಿಹಟ್ಟಿ ರಸ್ತೆ, ಬೆಳಗಲ್ ಕ್ರಾಸ್‌ದಿಂದ ಬಂಟಿಹಟ್ಟಿ ಮುಖ್ಯರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.00 | 133.45 |
| 21 | 93 | ನಗರದ ಕೋಟೆ ಮುಖ್ಯರಸ್ತೆ, ರಿಬ್ಲಿಕ್ ವೃತ್ತಿದಿಂದ ರಾ.ಹೆ–63, ವಯಾ ಪಿ.ಡಬ್ಲ್ಯೂ.ಡಿ ಕಛೇರಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.30 | 233.65 |
| 22 | 93 | ನಗರದ ಇನ್‌ಫೆಂಟ್ರಿ ರಸ್ತೆಯ, ಇನ್‌ಫೆಂಟ್ರಿ ಮುಖ್ಯರಸ್ತೆಯಿಂದ ಕೌಲ್ ಬಜಾರ್ ಮುಖ್ಯರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.40 | 221.50 |
| 23 | 93 | ನಗರದ ದೋಡ್ಡಿ ಬೀದಿಯನ್ನು ರೇಡಿಯೋ ಪಾರ್ಕ್ ಮುಖ್ಯ ರಸ್ತೆಯಿಂದ ಕೌಲ್‌ಬಜಾರ್ ಮುಖ್ಯರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.55 | 70.00 |
| 24 | 93 | ನಗರದ ಮೋರ್‌ಗಲ್ಲಿ ಬೀದಿಯನ್ನು ಬಂಡಿಹಟ್ಟಿ ರಸ್ತೆಯಿಂದ ದೋಬಿ ಬೀದಿ ವರಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.20 | 114.98 |
| | | 93 ಕ್ಷೇತ್ರದ ಒಟ್ಟು ಮೊತ್ತ | 11.0 | 1,563.48 |
| | | ಹೊಸ ಕಾಮಗಾರಿಗಳು ಪ್ಯಾಕೇಜ್–2 | | |
| 25 | 94 | ನಗರದ ಕಪ್ಪಗಲ್ ರಸ್ತೆಯನ್ನು ದುರ್ಗಮ್ಮ ವೃತ್ತದಿಂದ ಕೆನಾಲ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.50 | 279.66 |
| 26 | 94 | ನಗರದ ಇಂದಿರಾ ನಗರ ರಸ್ತೆಯನ್ನು ಫೈರ್ ಸ್ಟೇಷನ್ ವೃತ್ತದಿಂದ ಓ.ಪಿ.ಡಿ ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸವುದು | 1.52 | 215.50 |
| 27 | 94 | ನಗರದ ಬಾಂಬೆಪ್ರೆಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.62 | 163.86 |
| 28 | 94 | ನಗರದ ಕಾಳಮ್ಮ ಬೀದಿಯನ್ನು ವೆಟನರಿ ಆಸ್ಪತ್ರೆಯಿಂದ ಭಾರತ್ ಬಿಸ್ಕತ್ ಫ್ಯಾಕ್ಟರಿ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 775 ರಿಂದ 980 ವರೆಗೆ | 0.20 | 58.94 |
| 29 | 94 | ನಗರದ ತೇರು ಬೀದಿಯನ್ನು ದೊಡ್ಡ ಮಾರುಕಟ್ಟೆಯಿಂದ ಕನೇಕಲ್ ಬಸ್ ನಿಲ್ದಾಣದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 1000 ರಿಂದ 1440 ವರೆಗೆ | 0.44 | 159.59 |
| 30 | 94 | ನಗರದ ಹಳೇ ಧಾರವಾಡ ರಸ್ತೆಯಲ್ಲಿ ಕುಟ್ಟಿ ಹೋಟೆಲ್‌ನಿಂದ ಫೈರ್ ಸ್ಟೇಷನ್ ವೃತ್ತದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.25 | 155.56 |
| 31 | 94 | ನಗರದ ಗಾಂದಿನಗರದ 1ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.00 | 141.41 |
| 32 | 94 | ನಗರದ ತಾಳೂರು ರಸ್ತೆಯನ್ನು ಪಾರ್ವತಿ ನಗರ ಮುಖ್ಯ ರಸ್ತೆಯಿಂದ ಮಹಾನಗರಪಾಲಿಕೆ ಹದ್ದಿನ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.75 | 783.83 |
| 33 | 94 | ನಗರದ ಗಾಂಧಿನಗರ 3ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆ ವಯಾ ಬಾಲಭಾರತಿ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.83 | 118.79 |
| 34 | 94 | ನಗರದ ನೆಹರೂ ಕಾಲೋನಿ 1ನೇ ಕ್ರಾಸ್ ರಸ್ತೆಯನ್ನು ಸಂಗನಕಲ್ ರಸ್ತೆಯಿಂದ ಅಂತ್ಯದ ವರಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.65 | 82.74 |
| 35 | 94 | ನಗರದ ಮುಲ್ಲಂಗಿ ಸಂಜೀವಪ್ಪ ಬೀದಿಯನ್ನು ತೇರು ಬೀದಿಯಿಂದ ರೂಪನಗುಡಿ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.55 | 95.54 |
| 36 | 94 | ನಗರದ ಗೋಲ್ಡ್‌ಸ್ಮಿತ್ ಬೀದಿಯನ್ನು ಭಾರತ್ ಬಿಸ್ಕತ್ ಫ್ಯಾಕ್ಟರಿ ಯಿಂದ ಬಾಂಬೆಪ್ರೆಸ್ ರಸ್ತೆ ಕ್ರಾಸ್ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.25 | 211.76 |
| 37 | 94 | ನಗರದ ಕಮ್ಮಿಂಗ್ ರಸ್ತೆ ರೂಪನಗುಡಿ ರಸ್ತೆಯಿಂದ ತೇರು ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.50 | 72.60 |
| 38 | 94 | ನಗರದ ಶಾಸ್ತ್ರೀ ನಗರ 1ನೇ ಕ್ರಾಸ್ ರಸ್ತೆಯನ್ನು ಎಸ್.ಪಿ. ವೃತ್ತದಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.90 | 119.53 |
| 39 | 94 | ನಗರದ ಶಾಸ್ತ್ರೀ ನಗರ 2ನೇ ಕ್ರಾಸ್ ಅವಂಬಾವಿ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.40 | 46.89 |
| | | 94 ಕ್ಷೇತ್ರದ ಒಟ್ಟು ಮೊತ್ತ | 13.36 | 2,706.20 |

| | | | | |
|---|---|---|---|---|
| | | ಹೊಸ ಕಾಮಗಾರಿಗಳು ಪ್ಯಾಕೇಜ್-3 | | |
| 40 | 93 | ನಗರದ ಕೌಲ್‌ಬಜಾರ್ ಮುಖ್ಯರಸ್ತೆಯಿಂದ ಕೆನಾಲ್‌ವರೆಗೆ ವಯಾ ಬಂಡಿಹಟ್ಟಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.91 | 276.70 |
| 41 | 93 | ನಗರದ ಬೆಳಗಲ ರಸ್ತೆ, ಬೆಳಗಲ್ ಕ್ರಾಸಿನಿಂದ ಎರಡನೇ ಗೇಟ್ ವಯಾ ಸೆಂಟ್ ಜೋಸೆಫ್ ಶಾಲೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 1.03 | 109.05 |
| 42 | 93 | ನಗರದ ಓಲ್ಡ್ ಟ್ರಂಕ್ ರಸ್ತೆ ಧೋಬಿ ಬೀದಿಯಿಂದ ಬವಾರಿ ಬೀದಿವರೆಗೆ ವಯಾ ತರಬೇತಿ ಶಾಲೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.295 | 38.65 |
| 43 | 93 | ನಗರದ ಬಹದ್ದೂರ್ ಬೀದಿ ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಬೈಪಾಸ್ ರಸ್ತೆಯವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.450 | 46.74 |
| 44 | 93 | ನಗರದ ಕೌಲ್ ಬಜಾರ್ ಪ್ರದೇಶ ಜವಾರಿ ಬೀದಿಯಿಂದ ಖಬರಸ್ತಾನ್ ವರೆಗೆ ರಸ್ತೆ ಅಗಲೀಕರಸಿ ಅಭಿವೃದ್ಧಿ ಪಡಿಸುವುದು | 0.19 | 58.51 |
| 45 | 93 | ನಗರದ ಕೌಲ್ ಬಜಾರ್ ಪ್ರದೇಶದ ಬೀಫ್ ಬುಚ್ಚರ್ ಮಾರ್ಕೆಟ್ ರಸ್ತೆಯನ್ನು ಬೈಪಾಸ್‌ದಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.51 | 51.89 |
| 46 | 93 | ನಗರದ ಬಂಡೀಹಟ್ಟಿ ಡಾಲರ್ಸ್ ಕಾಲೋನಿ ಲಿಂಕ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.530 | 43.78 |
| 47 | 93 | ನಗರದ ಗೋಲ್ಡ್‌ಸ್ಮಿತ್ ಕಾಲೋನಿ, ಗೋಲ್ಡ್‌ಸ್ಮಿತ್ ಕಾಲೋನಿಯಿಂದ ಬಂಡಿಹಟ್ಟಿ ರಸ್ತೆಯವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.390 | 58.00 |
| 48 | 93 | ನಗರದ ಮಾಜಿ ಸೈನಿಕರ ಕಾಲೋನಿ, ಮೈರಾಡ ರಸ್ತೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.37 | 45.56 |
| 49 | 93 | ನಗರದ ಮುನಿಸಿಪಲ್ ಕಾಲೋನಿ ಪ್ರದೇಶದಿಂದ ಬೆಳಗಲ್ ಕ್ರಾಸ್ ವರೆಗೆ ರಸ್ತೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.460 | 36.62 |
| 50 | 93 | ನಗರದ ರಾಮಾಂಜನೇಯ ನಗರ 1,3,4 ಮತ್ತು 5 ಅಡ್ಡ ರಸ್ತೆಗಳನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.650 | 51.50 |
| 51 | 93 | ನಗರದ ಗಡಂಗ್ ಬೀದಿ, ಖೂನಿತಾಣಾ ಮಸೀದಿಯಿಂದ ಅಬ್ದುಲ್ ಸಲಾಂ ಬೀದಿವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.820 | 65.58 |
| 52 | 93 | ನಗರದ ಕೌಲ್ ಬಜಾರ್ ಪ್ರದೇಶದ ಬೆಳಗಲ್ ಕ್ರಾಸ್ ಹಿಂಭಾಗದ ಗೋವಿಂದ ರೆಡ್ಡಿ ಕಿರಾಣಾ ಶಾಪ್ ದಿಂದ ದುರುಗಮ್ಮ ಗಡಿವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.425 | 41.71 |
| 53 | 93 | ನಗರದ ಜುಮ್ಮ ಮಸೀದಿ ರಸ್ತೆ ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಗಡಂಗ್ ಬೀದಿಯವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.350 | 27.42 |
| 54 | 93 | ನಗರದ ಬಂಡೀಹಟ್ಟಿ ಪ್ರದೇಶದ ರಾಮನಗರದ 1,2,3 ಮತ್ತು 4ನೇ ಲಿಂಕ್ ರಸ್ತೆಗಳನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವ ಕಾಮಗಾರಿ | 0.805 | 78.62 |
| 55 | 93 | ನಗರದ ಸೆಂಟ್ ಮನ್ರೋ ರಸ್ತೆಯಿಂದ ಸೆಂಟ್ ಜೋಸೆಫ್ ಶಾಲೆಯ ಹಿಂಭಾಗ 2 ನೇ ಕ್ರಾಸ್ ಮತ್ತು ಲಿಂಕ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.420 | 28.06 |
| | | 93 ಕ್ಷೇತ್ರದ ಒಟ್ಟು ಮೊತ್ತ | 11.193 | 1058.39 |
| | | ಹೊಸ ಕಾಮಗಾರಿಗಳು ಪ್ಯಾಕೇಜ್-4 | | |
| 56 | 94 | ನಗರದ ಕೋರ್ಟ್ ರಸ್ತೆಯನ್ನು ಚಾಲುಕ್ಯ ಹೋಟಲ್‌ದಿಂದ ಕೂಲ್ ಕಾರ್ನರ್‌ವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.600 | 85.05 |
| 57 | 94 | ನಗರದ ಸತ್ಯನಾರಾಯಣ ಪೇಟೆ 1ನೇ ಅಡ್ಡರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.620 | 113.61 |
| 58 | 94 | ನಗರದ ಹದ್ದಿನಗುಂಡು ರಸ್ತೆಯನ್ನು ಪಟೇಲ್ ನಗರ ರಸ್ತೆಯಿಂದ ಉಮಾಮಹೇಶ್ವರಿ ಕಲ್ಯಾಣ ಮಂಟಪದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.760 | 101.35 |
| 59 | 94 | ನಗರದ ಬ್ರಾಹ್ಮಣ ಬೀದಿಯನ್ನು, ಜಿಲ್ಲಾಧಿಕಾರಿಗಳ ಕಛೇರಿಯಿಂದ ತೇರು ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.600 | 51.47 |

| | | | | |
|---|---|---|---|---|
| 60 | 94 | ನಗರದ ಸಂಗನಕಲ್ ರಸ್ತೆ ಸತ್ಯನಾರಾಯಣ ಪೇಟೆ ಫ್ಲೈ ಓವರ್ ಬ್ರಿಡ್ಜ್‌ದಿಂದ ಕೆ.ಇ.ಬಿ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.600 | 401.77 |
| 61 | 94 | ನಗರದ ಗಾಂಧಿನಗರ ರಸ್ತೆ, ಬಗೀಚಾ ಹೋಟಲ್ ಅಡ್ಡರಸ್ತೆಯಿಂದ ಕೊನೆಯವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.320 | 42.70 |
| 62 | 94 | ನಗರದ ಕಮೇಲ ರಸ್ತೆ ಬೆಂಕಿ ಮಾರಮ್ಮ ಗುಡಿ ರಸ್ತೆಯಿಂದ ಆಂದ್ರಾಳ್ ಸರ್ಕಲ್‌ವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.800 | 86.56 |
| 63 | 94 | ನಗರದ ಸಿದ್ದಾರ್ಥ ಕಾಲೋನಿ ನೀರಿನ ಬೂಸ್ಟರ್ ಎದುರುಗಡೆಯಿಂದ ಕಪ್ಪಗಲ್ ರಸ್ತೆಯವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.945 | 164.32 |
| 64 | 94 | ನಗರದ ಕಪ್ಪಗಲ್ ರಸ್ತೆ 1ನೇ ಕ್ರಾಸ್ ರಸ್ತೆಯನ್ನು ಶೇಷಗಿರಿ ಆಸ್ಪತ್ರೆಯಿಂದ ತಾಳೂರು ರಸ್ತೆಯವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.400 | 36.29 |
| 65 | 94 | ನಗರದ ಕಪ್ಪಗಲ್ ರಸ್ತೆ 2ನೇ ಕ್ರಾಸ್ ರಸ್ತೆಯನ್ನು ವಯಾ ಮಾರಮ್ಮ ಗುಡಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು | 0.350 | 41.29 |
| 66 | 94 | ನಗರದ ಇಂದಿರಾ ವೃತ್ತದಿಂದ ಬೋಯಗೇರಿವರೆಗೆ ವಯಾ ರಾಘವೇಂದ್ರ ಚಿತ್ರಮಂದಿರ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.650 | 42.53 |
| 67 | 94 | ನಗರದ ಕಣೇಕಲ್ ರಸ್ತೆಯನ್ನು ರೂಪನಗುಡಿ ರಸ್ತೆಯಿಂದ ಆಂದ್ರಾಳ್ ವೃತ್ತದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 1.410 | 155.55 |
| 68 | 94 | ಶಾಮಲ ಲಾಡ್ಜ್‌ನಿಂದ ಬಿ.ಡಿ.ಎ. ಮೈದಾನದ ಗೇಟ್‌ವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.200 | 13.35 |
| 69 | 94 | ನಗರದ ನೆಹರೂ ಕಾಲೋನಿ 4ನೇ ಕ್ರಾಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.560 | 66.28 |
| 70 | 94 | ನಗರದ ಪಾರ್ವತಿ ನಗರ 1, 2 ಮತ್ತು 3ನೇ ಕ್ರಾಸ್ ರಸ್ತೆಗಳನ್ನು ಅಗಲೀಕರಿಸಿ ಅಭಿವೃದ್ಧಿಪಡಿಸುವುದು. | 1.220 | 127.26 |
| 71 | 94 | ನಗರದ ಕಪ್ಪಗಲ್ ರಸ್ತೆ 7ನೇ ಕ್ರಾಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿಪಡಿಸುವುದು. | 0.240 | 33.73 |
| 72 | 94 | ನಗರದ ಕಪ್ಪಗಲ್ ರಸ್ತೆ 8ನೇ ಕ್ರಾಸ್ ಬಲಗಡೆ ಮತ್ತು ಲಿಂಕ್ ರಸ್ತೆಗಳ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.200 | 17.30 |
| 73 | 94 | ನಗರದ ವಿಶಾಲ್ ನಗರದಲ್ಲಿ ಸಾಯಿಬಾಬಾ ಗುಡಿ ಹತ್ತಿರ 1,2,3 ಅಡ್ಡರಸ್ತೆಗಳನ್ನು ಅಗಲೀಕರಿಸಿ ಅಭಿವೃದ್ಧಿಪಡಿಸುವುದು | 0.380 | 32.30 |
| 74 | 94 | ನಗರದ ಬಾಲಾಜಿ ರಾವ್ ರಸ್ತೆಯನ್ನು ಡಾ: ಸುರೇಶ್ ಮನೆಯಿಂದ ಭಾರತ್ ಬಿಸ್ಕೆಟ್ ಫ್ಯಾಕ್ಟರಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು. | 0.320 | 50.40 |
| 75 | 94 | ನಗರದ ಪಾರ್ವತಿ ನಗರ, ಪಾರ್ವತಿನಗರ ಮುಖ್ಯರಸ್ತೆಯಿಂದ ಎಸ್.ಜೆ.ಎಸ್.ಆರ್.ವೈ. ಶಾಲೆಯ ಗೇಟ್‌ವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿಪಡಿಸುವುದು. | 0.110 | 12.47 |
| | | 94 ಕ್ಷೇತ್ರದ ಒಟ್ಟು ಮೊತ್ತ | | 1663.11 |
| | | ಹೊಸ ಕಾಮಗಾರಿಗಳು ಪ್ಯಾಕೇಜ್–5 | | |
| 76 | | ನಗರದ ಹನುಮಾನ್ ನಗರ ಕಾಂಪೋಸ್ಟ್ ಯಾರ್ಡ್ ವರಬಸಪ್ಪ ಗುಡಿ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ | | 100.00 |
| 77 | | ನಗರದ ಆರ್.ಟಿ.ಓ ರಸ್ತೆ ಕೆ.ಇ.ಬಿ. ಕಛೇರಿ ಮುಂಭಾಗದಿಂದ ಪಟೇಲ್ ಮನೆಯವರೆಗೆ ಮಳೆ ನೀರಿನ ಚರಂಡಿ ನಿರ್ಮಾಣ. | | 25.00 |
| 78 | | ನಗರ ಎಸ್.ಎನ್. ಪೇಟೆ ರಸ್ತೆ, ದ್ವಾರಕ ಅರ್ಮ್ಸ್ ಫ್ಯಾಕ್ಟರಿ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ | | 50.00 |
| 79 | | ನಗರದ ಕಂಟೋನ್ಮೆಂಟ್ ಸಿದ್ದಾರ್ಥ ನಗರದ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ. | | 25.00 |
| 80 | | ನಗರದ ವಡ್ಡರಬಂಡ ಗುಡಿ ಪ್ರದೇಶದಲ್ಲಿ ಮಳೆ ನೀರಿನ ಚರಂಡಿ ನಿರ್ಮಾಣ. | | 50.00 |
| 81 | | ನಗರದ ಎನ್. ಹೆಚ್–63 ರಸ್ತೆ (ಹೊಸಪೇಟೆ ರಸ್ತೆ) ಬೆಂಗಳೂರು ರಸ್ತೆ ಮತ್ತು ಅನಂತಪುರ ರಸ್ತೆಗಳಿಗೆ ಬೀದಿ ದೀಪಗಳ ಅಳವಡಿಕೆ. | | 50.00 |
| 82 | | ನಗರದ ಕೊಳಚೆ ಪ್ರದೇಶ ಮತ್ತು ವಸತಿ ಪ್ರದೇಶ (85 WCFL) ಗಳಲ್ಲಿ ಬೀದಿ ದೀಪ ಅಳವಡಿಸುವುದು. | | 15.00 |

| | | | | |
|---|---|---|---|---|
| 83 | | ನಗರದ ಮುಖ್ಯ ವೃತ್ತಗಳು ಮತ್ತು ಉಪಮುಖ್ಯ ವೃತ್ತಗಳು ದೀಪಗಳನ್ನು ಅಳವಡಿಸುವುದು. | | 20.00 |
| 84 | | 6 ರಸ್ತೆಗಳಿಗೆ 20 ಮೀಟರ್ ಮತ್ತು 6 ರಸ್ತೆಗಳಿಗೆ 16 ಮೀಟರ್ ಹೈಮಾಸ್ಟ್ ಲೈಟ್‌ಗಳನ್ನು ಒದಗಿಸುವುದು. | | 69.00 |
| 85 | | ಎಜರ್ನಿ ಸೇವಿಂಗ್ ಡಿವೈಸ್ ವಿತ್ ಆನ್ ಆಫ್ ಟೈಮರ್ ಡಿಮ್ಮರ್ ಅನದ ಜಿ.ಪಿ.ಆರ್.ಎಸ್. ಬೇಸ್ಡ್ ರಿಪೋರ್ಟಿಂಗ್ ಸಿಸ್ಟಮ್ ವಿತ್ ಕಂಪ್ಯೂಟರೈಸ್ಡ್ ಮ್ಯಾನೇಜ್‌ಮೆಂಟ್ ಒದಗಿಸುವುದು. | | 50.00 |
| 86 | | 15 ಸಣ್ಣ ವೃತ್ತಗಳನ್ನು ಅಭಿವೃದ್ಧಿ ಪಡಿಸುವುದು | | 10.00 |
| 87 | | ನಗರದ ವಿವಿಧ ಸ್ಥಳಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸುವುದು | | |
| 88 | | ಟ್ರಾಫಿಕ್ ಫರ್ನಿಚರ್ ಜೊತೆ ಮಿಡಿಯಮ್ ಮತ್ತು ಸೈಡ್ ರೇಲಿಂಗ್ ಪ್ಲಾಸ್ಟಿಕ್ ಸ್ಪೀಡ್ ಬ್ರೇಕರ್, ಕ್ಯಾಟ್ ಐ, ಬ್ಲಿಂಕರ್, ಸನ್ ಫ್ಲವರ್, ಸೈನೇಜ್, ಲೆಡ್, ಸೈನೇಜ್, ಥರ್ಮೊ ಪ್ಲಾಸ್ಟಿಕ್ ಸ್ಟ್ರೀಟ್ ಪೇಂಟಿಂಗ್ ಒದಗಿಸುವುದು. | | 75.00 |
| 89 | | ನಗರದ ಕೋಟೆ ಬೂಸ್ಟರ್ ಹತ್ತಿರ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | | 27.55 |
| 90 | | ನಗರದ ಗಾಂಧಿನಗರದ ವಾಟರ್ ಬೂಸ್ಟರ್ ಹತ್ತಿರ ಇರುವ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | | 22.51 |
| 91 | | ನಗರದ ಸತ್ಯನಾರಾಯಣ ಪೇಟೆ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | | 33.28 |
| 92 | | ನಗರದ ನಾರಾಯಣ ರಾವ್ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | | 13.85 |
| 93 | | ನಗರದ ರಾಮಯ್ಯ ಕಾಲೋನಿ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | | 27.81 |
| 94 | | ಎಸ್. ಡಬ್ಲ್ಯೂ.ಎಂ. ಸಾಮಗ್ರಿಗಳ ಖರೀದಿ | | 300.00 |
| 95 | | ಹೆಚ್ಚುವರಿ ಎಸ್. ಡಬ್ಲ್ಯೂ.ಎಂ. ಸಾಮಗ್ರಿಗಳ ಖರೀದಿ | | 122.00 |
| 96 | | ಲ್ಯಾಂಡ್ ಫಿಲ್ ಸೈಟಿನಲ್ಲಿ 2 ಕೊಳವೆ ಬಾವಿ, ನೀರು ಸರಬರಾಜು ಪೈಪ್‌ಲೈನ್, ಜನರೇಟರ್, ಎಲೆಕ್ಟ್ರಿಶಿಯನ್, ವೇ-ಬ್ರಿಡ್ಜ್‌ಗೇಟ್ ಕ್ಯಾಡಲ್ ಟ್ರ್ಯಾಪ್, ವಾಚ್ ಮ್ಯಾನ್ ಶೆಡ್, ಜಿಯೋ ಮೆಂಬರೆನ್ಸ್ ಒದಗಿಸುವುದು. | | 50.00 |
| 97 | | ಮಟನ್, ಚಿಕನ್ ಮತ್ತು ಮೀನು ಮಾರುಕಟ್ಟೆಗಳ ನಿರ್ಮಾಣ | | 270.00 |
| 98 | | ಸೈಂಟಿಫಿಕ್ ಸ್ಲಾಟರ್ ಹೌಸ್ ನಿರ್ಮಾಣ | | 236.30 |
| 99 | | ಐ.ಟಿ. & ಕಮ್ಯೂನಿಕೇಷನ್ ಎಕ್ವಿಪ್ಮೆಂಟ್ ಒದಗಿಸುವುದು. | | 30.00 |
| 100 | | ನೀರು ಸರಬರಾಜು ವ್ಯವಸ್ಥೆಗೆ ಹೆಚ್ಚಿನ ಪ್ರಮಾಣ ಮೀಟರ್‌ಗಳು ಅಳವಡಿಸಿರುವುದು | | 10.00 |
| 101 | | ಸರ್ವೆ ಎಕ್ವಿಪ್‌ವೆಂಟ್ & ಕ್ವಾಲಿಟಿ ಟೆಸ್ಟಿಂಗ್ ಲ್ಯಾಬ್ ಒದಗಿಸುವುದು | | 10.00 |
| | | ಒಟ್ಟು ಮೊತ್ತ | 16.120 | 1782.30 |
| | | ಹೊಸ ಕಾಮಗಾರಿಗಳು ಪ್ಯಾಕೇಜ್-6 | | |
| 102 | | ಸಮಾಲೋಚಕರ ಶುಲ್ಕ (1.8%) | | 146.38 |
| 103 | | 3ನೇ ತಪಾಸಣೆ ಪಕ್ಷ ಶುಲ್ಕ | | 39.06 |
| 104 | | ಕಂಟೆಂಜೆನ್ಸಿ (0.5%) | | 50.00 |
| | | ಒಟ್ಟು ಮೊತ್ತ | | 235.44 |
| ಎಲ್ಲಾ ಕಾಮಗಾರಿಗಳ ಒಟ್ಟು ಮೊತ್ತ (1 ರಿಂದ 104) | | | | 10,000.00 |

3) ಈ ಅನುಮೋದನೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿದೆ

(1) ಈ ಅನುಮೋದನೆಯನ್ನು ಕಾಮಗಾರಿಗಳ ಪಟ್ಟಿಗೆ ಮಾತ್ರ ನೀಡಲಾದ ಅನುಮೋದನೆ ಎಂದು ಪರಿಗಣಿಸುವುದು. ಈ ಅನುಮೋದನೆಯನ್ನು ಕಾಮಗಾರಿಗಳ ಪಟ್ಟಿಗೆ ಅಥವಾ ಪಟ್ಟಿಯಲ್ಲಿನ ಯಾವುದೇ ಕಾಮಗಾರಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆ ಎಂದು ಪರಿಗಣಿಸುವಂತಿಲ್ಲ.

(2) ಸರ್ಕಾರದ ಆದೇಶ ಸಂಖ್ಯೆ: ನಅಇ 167 ಎಸಿಬಿ 2010, ದಿನಾಂಕ 13/8/2010ರಲ್ಲಿ ಹೇಳಲಾದ ಸೂಚನೆ/ಷರತ್ತುಗಳನ್ನು ಪಾಲಿಸುವುದು.

(3) ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 26/11/2010 ರಲ್ಲಿ ಹೇಳಲಾದ ಸೂಚನೆ/ಷರತ್ತುಗಳನ್ನು ಪಾಲಿಸುವುದು.

(4) ಕರ್ನಾಟಕ ಪೌರನಿಗಮಗಳ ನಿಯಮಗಳು, 1977ರಲ್ಲಿ ನೀಡಲಾಗಿರುವ ಸೂಚನೆಗಳಂತೆ ಪ್ರತಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಮೇಲೆ ಹೇಳಲಾದ ಪರಿಷ್ಕೃತ ಅಂದಾಜು ಮೊತ್ತಕ್ಕೆ ತಯಾರಿಸಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಟೆಂಡರ್ / ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಪ್ರಾರಂಭಿಸುವ ಮೊದಲು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

(5) ರೂಪಾಯಿ ಎರಡು ನೂರು ಲಕ್ಷ ಮೀರಿರುವ ಕಾಮಗಾರಿಯ ಅಂದಾಜು ಪಟ್ಟಿಗಳಿಗೆ ಸರ್ಕಾರದ ಹಂತದಲ್ಲಿ ಕಡ್ಡಾಯವಾಗಿ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳುವುದು.

(6) ರೂಪಾಯಿ ಐದು ನೂರು ಲಕ್ಷ ಮೀರಿರುವ ಕಾಮಗಾರಿಯ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ಸಚಿವ ಸಂಪುಟ ಅನುಮೋದನೆ ಪಡೆಯುವ ಸಲುವಾಗಿ ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

(7) ಈ ಅನುದಾನದ ಅಡಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿ ರಚಿಸಿರುವ ನಿಯಮಗಳು ಮತ್ತು ಹೊರಡಿಸಲಾದ ಸೂಚನೆಗಳಲ್ಲಿನ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009 (4), ದಿನಾಂಕ 13/7/2009 ರಲ್ಲಿನ ಎಲ್ಲಾ ಅಂಶಗಳನ್ನು ಮತ್ತು ಕಟ್ಟುನಿಟ್ಟಾಗಿ ಪಾಲಿಸಿ ಟೆಂಡರ್ ಪ್ರಕ್ರಿಯೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳುವುದು.

(8) ಸರ್ಕಾರದ ಆದೇಶ ಸಂಖ್ಯೆ: ನಅಇ 54 ಎಬಿಸಿ 2010, ದಿನಾಂಕ 18/1/2011ರಲ್ಲಿ ರೂ. 75,70,62,112.25 ಅಂದಾಜು ಮೊತ್ತದ 26 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವುದರಿಂದ ಮೇಲೆ ಹೇಳಲಾದ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಸದರಿ ಕಾಮಗಾರಿಗಳ ಅಂದಾಜು ಮೊತ್ತ ಬದಲಾವಣೆಯಾಗಿದ್ದಲ್ಲಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ಹೊಸದಾಗಿ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳತಕ್ಕದ್ದು.

4) ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 2008, ದಿನಾಂಕ 16/5/2008ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಂ.ಆರ್. ಮಹೇಶ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಮಹಾನಗರ ಪಾಲಿಕೆ–2)

ಪಿ.ಆರ್ 1421

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

**ವಿಷಯ :** ಕ.ನಾ.ಸೇ. ನಿಯಮಗಳ ನಿಯಮ 247(I) ಮತ್ತು 247–ಎ ಅನ್ವಯ ನ್ಯಾಯಾಂಗ ಅಧಿಕಾರಿಗಳಿಗೆ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸುವ ಕುರಿತು.

**ಓದಲಾಗಿದೆ :** ರಿಜಿಸ್ಟ್ರಾರ್ ಜನರಲ್‌ರವರ ಪತ್ರದ ಸಂಖ್ಯೆ : ಜಿಒಬಿ ಋ.255/2007, ದಿನಾಂಕ : 26–11–2010.

**ಪ್ರಸ್ತಾವನೆ :**

ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ಮೇಲೆ ಓದಲಾದ ಪತ್ರದೊಂದಿಗೆ ನ್ಯಾಯಾಂಗ ಅಧಿಕಾರಿಗಳ ಸೇವಾ ವಿವರಗಳನ್ನೊಳಗೊಂಡ ಪಟ್ಟಿ ಮಾಡಿ ಲಗತ್ತಿಸಿ ಕಳುಹಿಸುತ್ತಾ, ಸದರಿ ಅಧಿಕಾರಿಗಳಿಗೆ ಕ.ನಾ.ಸೇ ನಿಯಮಾವಳಿಗಳ ನಿಯಮ 247 (ಋ) ಮತ್ತು 247–ಎ ಅನ್ವಯ ಲಭ್ಯವಾಗುವ ಅರ್ಹತಾದಾಯಕ ಸೇವೆಯನ್ನು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲು ಪ್ರಸ್ತಾಪಿಸಿರುತ್ತಾರೆ.

ಸರ್ಕಾರವು ಸದರಿ ಪಟ್ಟಿಯಲ್ಲಿನ ಅಧಿಕಾರಿಗಳ ಸೇವಾ ವಿವರಗಳನ್ನು ಪರಿಶೀಲಿಸಿ ಕ.ನಾ.ಸೇ. ನಿಯಮಗಳ ನಿಯಮ 247(ಋ) ಮತ್ತು 247–ಎ ಅನ್ವಯ ಅವರುಗಳಿಗೆ ಲಭ್ಯವಾಗುವ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಮಂಜೂರು ಮಾಡಲು ಪರಿಶೀಲಿಸಿ ಈ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಲಾ 263 ಎಲ್‌ಎಸಿ 2010, ಬೆಂಗಳೂರು, ದಿನಾಂಕ : 26–05–2011.**

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ– ಋ ಮತ್ತು ಅನುಬಂಧ–ಋಋ ರಲ್ಲಿ ಕ್ರಮವಾಗಿ ಪಟ್ಟಿ ಮಾಡಿರುವಂತೆ ನ್ಯಾಯಾಂಗ ಅಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಋ) ಮತ್ತು 247–ಎ ರಿತ್ಯಾ ಅರ್ಹವಾಗುವ ಹೆಚ್ಚುವರಿ ಸೇವೆಯನ್ನು ಅವರುಗಳ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವಂತೆ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸರ್ಕಾರವು ಮಂಜೂರು ಮಾಡಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 6ರನ್ವಯ ನೌಕರರು ನಿವೃತ್ತರಾಗುವ ದಿನದಂದು ಜಾರಿಯಲ್ಲಿರುವ ನಿಯಮಗಳನ್ನು, ಪಿಂಚಣಿ ಸೌಲಭ್ಯಗಳನ್ನು ಕ್ರಮಬದ್ಧಗೊಳಿಸಲು ಅನುಸರಿಸಬೇಕಾಗುತ್ತದೆ. ಸರ್ಕಾರವು ಸದರಿ ನಿಯಮ 247–ಎ ಗೆ ತಿದ್ದುಪಡಿ ತರಲು ಉದ್ದೇಶಿಸಿದ್ದು, ತಿದ್ದುಪಡಿ ತಂದ ದಿನಾಂಕದ ನಂತರ ಅನುಬಂಧ– ಋ ಹಾಗೂ ಋಋ ರಲ್ಲಿರುವ ನ್ಯಾಯಾಂಗ ಅಧಿಕಾರಿಗಳು ನಿವೃತ್ತಿ ಹೊಂದಿದ್ದಲ್ಲಿ ತಿದ್ದುಪಡಿ ನಿಯಮದನ್ವಯ ಲಭ್ಯವಾಗುವ ಸೌಲಭ್ಯಕ್ಕೆ ಮಾತ್ರ ಅರ್ಹರಾಗುತ್ತಾರೆಂಬ ಷರತ್ತಿನೊಂದಿಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1756 ಸೇ–3/2011, ದಿನಾಂಕ : 12–5–2011ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸಯ್ಯದ್ ಅಬ್ದುಲ್ ನಜೀರ್**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

**ಸರ್ಕಾರಿ ಆದೇಶ ಸಂಖ್ಯೆ : ಲಾ 263 ಎಲ್‌ಎಸಿ 2010, ಬೆಂಗಳೂರು, ದಿನಾಂಕ : 26–5–2011.**

**ಅನುಬಂಧ– I**

| ಕ್ರ. ಸಂ. | ನ್ಯಾಯಾಧೀಶರ ಹೆಸರು ಮತ್ತು ಪದನಾಮ ( ಶ್ರೀ/ಶ್ರೀಮತಿ) | ನಿಯಮ 247–ಎ ರನ್ವಯ ಲಭ್ಯವಾಗುವ ಹೆಚ್ಚುವರಿ ಅರ್ಹತಾದಾಯಕ ಸೇವೆ |
|---|---|---|
| 01 | ಜಿ.ಆರ್. ಪಾಟೀಲ, ಪ್ರಿಸೈಡಿಂಗ್ ಆಫೀಸರ್, ಫಾಸ್ಟ್ ಟ್ರ್ಯಾಕ್ ಕೋರ್ಟ್– IV ಬೆಂಗಳೂರು | ಗರಿಷ್ಠ 4 ವರ್ಷಗಳು ಪಿಂಚಣಿ ಸೌಲಭ್ಯಕ್ಕೆ ಮಾತ್ರ |
| 02 | ಎ.ಕೆ. ಮುಲ್ಲಾ, ಪ್ರಿಸೈಡಿಂಗ್ ಆಫೀಸರ್, III ನೇ ಅಪರ ಕಾರ್ಮಿಕ ಇಲಾಖೆ, ಬೆಂಗಳೂರು | ಗರಿಷ್ಠ 2 ವರ್ಷಗಳು ಪಿಂಚಣಿ ಸೌಲಭ್ಯಕ್ಕೆ ಮಾತ್ರ |

**ಸಯ್ಯದ್ ಅಬ್ದುಲ್ ನಜೀರ್**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

**ಸರ್ಕಾರಿ ಆದೇಶ ಸಂಖ್ಯೆ : ಲಾ 263 ಎಲ್‌ಎಸಿ 2010, ಬೆಂಗಳೂರು, ದಿನಾಂಕ : 26–5–2011.**

**ಅನುಬಂಧ– II**

| ಕ್ರ. ಸಂ. | ನ್ಯಾಯಾಧೀಶರ ಹೆಸರು ಮತ್ತು ಪದನಾಮ (ಶ್ರೀ/ಶ್ರೀಮತಿ) | ನಿಯಮ 247–(I) ರನ್ವಯ ಲಭ್ಯವಾಗುವ ಹೆಚ್ಚುವರಿ ಅರ್ಹತಾದಾಯಕ ಸೇವೆ |
|---|---|---|
| 01 | ಅಶೋಕ. ಜಿ. ನಿಜಗಣ್ಣನವರ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 02 | ಎಚ್.ಜಿ. ನಾಗರತ್ನಾ, ಪ್ರಿಸೈಡಿಂಗ್ ಆಫೀಸರ್, ಫಾಸ್ಟ್ ಟ್ರ್ಯಾಕ್ ಕೋರ್ಟ್–VII ಬೆಂಗಳೂರು | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 03 | ಪುಷ್ಪಾವತಿ. ವಿ., ಹಿರಿಯ ಸಿವಿಲ್ ಜಡ್ಜ್ ಮತ್ತು ಸಿಜೆಎಂ, ರಾಮನಗರ | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 04 | ಮಂಜುನಾಥ ನಾಯಕ್, ಅಪರ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಹುಣಸೂರು | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 05 | ಮೇಟಿ ಪೊಂಪಣಗೌಡ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಹುಣಸೂರು | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 06 | ಬಿ.ಎಂ. ಗೌಡ, ಹಿರಿಯ ಸಿವಿಲ್ ಜಡ್ಜ್, ಒಒಡಿ, 1ನೇ ಅಪರ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |
| 07 | ನಾಗರಾಜೇಗೌಡ. ಡಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಮುಳಬಾಗಿಲ | ಗರಿಷ್ಠ 5 ವರ್ಷಗಳು ನಿವೃತ್ತಿ ವೇತನಕ್ಕೆ ಮಾತ್ರ |

**ಸಯ್ಯದ್ ಅಬ್ದುಲ್ ನಜೀರ್**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)
ಪಿ.ಆರ್. 1422 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

**ಒಳಾಡಳಿತ ಸಚಿವಾಲಯ**

**ವಿಷಯ :** ಶ್ರೀ ಬಿ. ಇಸ್ಮಾಯಿಲ್, ಪಿಎಸ್‌ಐ, (ಎಫ್.ಪಿ.ಬಿ) ದಾವಣಗೆರೆರವರ ಖಾಯಂಪೂರ್ವ ಅವಧಿಯನ್ನು ಘೋಷಿಸುವ ಬಗ್ಗೆ.

**ಓದಲಾಗಿದೆ :** ಡಿಜಿ ಮತ್ತು ಐಜಿಪಿರವರ ಪತ್ರ ಸಂಖ್ಯೆ –105/ಸಿಬ್ಬಂದಿ–1/2009–10, ದಿನಾಂಕ : 13–10–2010 ಮತ್ತು 9–5–2011.

ಪ್ರಸ್ತಾವನೆ :

ಶ್ರೀ ಬಿ. ಇಸ್ಮಾಯಿಲ್, ರವರು ದಿನಾಂಕ : 24–6–2002 ರಂದು ಪ್ರೊ.ಪಿಎಸ್‌ಐ, (ಎಫ್.ಪಿ.ಬಿ) ಹುದ್ದೆಗೆ ನೇಮಕಾತಿ ಹೊಂದಿ ಅನುಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪ್ರಯುಕ್ತ ಸದರಿಯವರ ಖಾಯಂ ಪೂರ್ವ ಅವಧಿಯನ್ನು ಕೆ.ಸಿ.ಎಸ್. (ಪರಿವೀಕ್ಷಣಾ) ನಿಯಮಗಳು, 1977 ನಿಯಮ 4(1)(ಬಿ) ಅನ್ವಯ ದಿನಾಂಕ : 1–1–2005 ರಿಂದ 31–3–2006 ರ ವರೆಗೆ ವಿಸ್ತರಿಸಲಾಗಿರುತ್ತದೆ. ಈ ಅವಧಿಯಲ್ಲಿ ಸಹ ಅನುಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗದೇ ಇದ್ದ ಕಾರಣ ಮತ್ತೊಂದು ಅವಕಾಶವನ್ನು ನೀಡಲಾಗಿದೆ ಎಂದು ವರದಿ ಮಾಡಲಾಗಿರುತ್ತದೆ. ದಿನಾಂಕ : 9–7–2009 ರಂದು ಅನುಪೂರಕ ಪರೀಕ್ಷೆಯಲ್ಲಿ ಸದರಿ ಅಧಿಕಾರಿಯವರು ಉತ್ತೀರ್ಣರಾಗಿರುತ್ತಾರೆ ಎಂದು, ಸದರಿಯವರ ಖಾಯಂ ಪೂರ್ವ ಅವಧಿಯನ್ನು ಕೆ.ಸಿ.ಎಸ್. (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(1) (i) ರನ್ವಯ ದಿನಾಂಕ : 1–4–2006 ರಂದು ಅನುಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ದಿನಾಂಕ : 9–9–2009 ರ ವರೆಗೆ ವಿಸ್ತರಿಸುವಂತೆ ಮೇಲೆ ಓದಲಾದ (1) ರ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಒಇ 354 ಪೊಸಇ 2010, ಬೆಂಗಳೂರು, ದಿನಾಂಕ : 25–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಬಿ. ಇಸ್ಮಾಯಿಲ್, ಪಿ.ಎಸ್.ಐ (ಎಫ್.ಪಿ.ಬಿ) ದಾವಣಗೆರೆರವರಿಗೆ ಕೆ.ಸಿ.ಎಸ್. ಪ್ರೊಬೇಷನ್ ನಿಯಮಗಳು, 1977ರ ನಿಯಮ 4(1) (ು)ರ ಪ್ರಕಾರ ದಿನಾಂಕ : 1–4–2006 ರಿಂದ 31–7–2011ರ ವರೆಗೆ ಇವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಟಿ.ಎನ್. ರವಿಪ್ರಕಾಶ್**
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1423

## ಶಿಕ್ಷಣ ಸಚಿವಾಲಯ

**ವಿಷಯ :** ಸರ್ಕಾರಿ ಭದ್ರತಾ ಮುದ್ರಣಾಲಯ, ಪೀಣ್ಯ, ತುಮಕೂರು ರಸ್ತೆ, ಬೆಂಗಳೂರು ಇಲ್ಲಿಯ ಸಹಾಯಕ ನಿರ್ದೇಶಕರಿಗೆ (ತಾಂತ್ರಿಕೇತರ) ವೇತನ ಮತ್ತು ಇತರೆ ಬಿಲ್ಲುಗಳನ್ನು ಆದ್ಯರ್ಪಿಸಿ ವಿತರಿಸಲು ಅಧಿಕಾರ ನೀಡುವ ಬಗ್ಗೆ ಸರ್ಕಾರದ ಆದೇಶ.

**ಓದಲಾಗಿದೆ :**
1) ದಿನಾಂಕ : 11–5–2010ರ ಸರ್ಕಾರದ ಆದೇಶ ಸಂಖ್ಯೆ : ಇಡಿ 569 ಇಎಸ್‌ಡಬ್ಲ್ಯೂ 2009.
2) ದಿನಾಂಕ : 30–10–2010ರ ಸರ್ಕಾರದ ಆದೇಶ ಸಂಖ್ಯೆ : ಇಡಿ 569 ಇಎಸ್‌ಡಬ್ಲ್ಯೂ 2009.
3) ದಿನಾಂಕ : 11–3–2011ರ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಪತ್ರ ಸಂಖ್ಯೆ : ಡಿಪಿಎಸ್/ಲೆಕ್ಕಪತ್ರ–81/ಪಿ(ಪಿ) 279/2010–11.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ತುಮಕೂರು, ಸರ್ಕಾರಿ ಮುದ್ರಣಾಲಯವನ್ನು ಶಾಶ್ವತವಾಗಿ ಮುಚ್ಚಿ ಸದರಿ ಮುದ್ರಣಾಲಯದಲ್ಲಿರುವ ಯಂತ್ರೋಪಕರಣಗಳನ್ನು ಮೈಸೂರು ಮುದ್ರಣಾಲಯಕ್ಕೆ ಸ್ಥಳಾಂತರಿಸಿ ಆದೇಶಿಸಿದೆ. ಹಾಗೂ ಮೈಸೂರು ಮುದ್ರಣಾಲಯದಲ್ಲಿ ಲಭ್ಯವಿರುವ 59 ಮುದ್ರಕರಿಗೆ ತರಬೇತಿ ನೀಡಿ ಸುಸ್ಥಿತಿಯಲ್ಲಿ ಲಭ್ಯವಿರುವ ಯಂತ್ರಗಳನ್ನು ಚಾಲನೆಗೊಳಿಸಲು ಅನುಮತಿ ನೀಡಲಾಗಿದೆ. ಈ ಸಂಬಂಧ ತೆರವುಗೊಂಡ ತುಮಕೂರು ಜಿಲ್ಲಾ ಮುದ್ರಣಾಲಯದ ಕಟ್ಟಡವನ್ನು ಈಗಿರುವ ಸ್ಥಿತಿಯಲ್ಲಿ ಸಾರ್ವಜನಿಕ ಗ್ರಂಥಾಲಯಕ್ಕೆ ಹಸ್ತಾಂತರಿಸಲು ಸಹ ಆದೇಶಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ತುಮಕೂರು ಜಿಲ್ಲಾ ಮುದ್ರಣಾಲಯದಲ್ಲಿರುವ ಕೆಲವೊಂದು ಯಂತ್ರಗಳನ್ನು ಕೇಂದ್ರ ಮುದ್ರಣಾಲಯದ ಪೀಣ್ಯ ಕಟ್ಟಡಕ್ಕೆ ಸ್ಥಳಾಂತರಿಸಿ ಅಲ್ಲಿ ಒಂದು ಭದ್ರತಾ ಮುದ್ರಣಾಲಯವನ್ನು ಸ್ಥಾಪಿಸಲು ಹಾಗೂ ಸದರಿ ಮುದ್ರಣಾಲಯದಲ್ಲಿ ಮಂಜೂರಾದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಸ್ಥಳಾಂತರಿಸಲು ಅನುಮತಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ತುಮಕೂರು ಜಿಲ್ಲಾ ಮುದ್ರಣಾಲಯದಲ್ಲಿರುವ ಕೆಲವೊಂದು ಯಂತ್ರಗಳನ್ನು ಪೀಣ್ಯಕ್ಕೆ ಸ್ಥಳಾಂತರಿಸಿ ಅಲ್ಲಿ ಒಂದು ಭದ್ರತಾ ಮುದ್ರಣಾಲಯವನ್ನು ಸ್ಥಾಪಿಸಲು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಅಲ್ಲಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳ ವೇತನ ಹಾಗೂ ಇನ್ನಿತರ ಭತ್ಯೆಗಳನ್ನು ಸಹಾಯಕ ನಿರ್ದೇಶಕರು ವೇತನ ನೀಡುವ ಅಧಿಕಾರವನ್ನು ಸಹಾಯಕ ನಿರ್ದೇಶಕರಿಗೆ (ತಾಂತ್ರಿಕೇತರ) ನೀಡುವುದು ಅತ್ಯವಶ್ಯಕವಾಗಿದೆಯೆಂದು ನಿರ್ದೇಶಕರು ಪ್ರಸ್ತಾಪಿಸಿರುವುದನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 40 ಇಎಸ್‌ಡಬ್ಲ್ಯೂ 2011, ಬೆಂಗಳೂರು, ದಿನಾಂಕ : 26–5–2011.**

ಬೆಂಗಳೂರಿನ ತುಮಕೂರು ರಸ್ತೆಯ ಪೀಣ್ಯದಲ್ಲಿ ಹೊಸದಾಗಿ ಸ್ಥಳಾಂತರಿಸುವ ಸರ್ಕಾರಿ ಭದ್ರತಾ ಮುದ್ರಣಾಲಯದಲ್ಲಿನ ಈ ಕೆಳಕಂಡ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವೇತನ ಮತ್ತು ಇತರೆ ವೆಚ್ಚಗಳನ್ನು ಪಾವತಿಸಲು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 17(ಸಿ) 49 ಮತ್ತು 50ರನ್ವಯ ಮಹಾಲೇಖಪಾಲರಿಂದ ಪ್ರಾಧಿಕಾರ ಪಡೆಯುವ ಷರತ್ತಿಗೊಳಪಟ್ಟು ಲೆಕ್ಕಶೀರ್ಷಿಕೆ "2058–00–103–0–01" ಯೋಜನೇತರ ಅಡಿಯಲ್ಲಿ ಸಹಾಯಕ ನಿರ್ದೇಶಕರಿಗೆ (ತಾಂತ್ರಿಕೇತರ) ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

| | | |
|---|---|---|
| 1. | ಅಧಿಕಾರಿಗಳು | 3 ಹುದ್ದೆಗಳು |
| 2. | ಕಛೇರಿ ಸಿಬ್ಬಂದಿ | 14 ಹುದ್ದೆಗಳು |
| 3. | ಕೈಗಾರಿಕಾ ನೌಕರರು | 85 ಹುದ್ದೆಗಳು |
| | (ಅಪೆಂಡಿಕ್ಸ್ 'ಬಿ'ನಂತೆ) ಒಟ್ಟು | 102 ಹುದ್ದೆಗಳು |

ದಿನಾಂಕ : 9–5–2011ರ ಟಿಪ್ಪಣಿ ಸಂಖ್ಯೆ : ಆಇ 482, ಸೇ–3/11ರಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಸ್.ಬಿ. ಸಸಾಲಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಪಿ.ಆರ್. 1424

## PERSONNEL AND ADMINISTRATIVE REFORMS SECRETARIAT

**Sub:** Implementation of 'Aadhaar' (Unique ID) project and Karnataka Resident Data Hub (KRDH) project relating to collection of information from the residents on various Government benefits (subsidy related benefits).

**Read:** 1. Government Order No. DPAR 159 EGM 2009 (P-1) dated 17-12-2009.
2. Government Order No. DPAR 159 EGM 2009 (P-1) dated 16-01-2010.

**PREAMBLE:**

1. Government of India conceptualised the project of assigning Unique Identity Number (UID) to all the residents in India. The project is called 'Aadhaar' and the Unique Identity Number (UID) assigned thereunder is also called 'Aadhaar'. With a view to implement the same, the Unique Identification Authority of India (UIDAI) was constituted by the Government of India under the Planning Commission. The basic mandate of the authority is to issue Unique ID Numbers to the residents in India and one of the main purposes behind this project is to ensure better delivery of services and welfare schemes to the people, especially, the poor and the marginalized.

2. **UID Process and Utility.**

2.1 UIDAI implements Unique ID through designated Registrars, who are entrusted with the mandate of enrolling residents for being assigned a UID. Registrars, in turn, can appoint enrolment agencies, who will actually carry out the enrolment process at the village/habitation level.

2.2 UIDAI has the mandate from Government of India to uniquely identify residents and issue them with Unique Identity Number (UID) based on demographic and bio-metric data of each resident. The following demographic information is collected from each resident :

- Name
- Date of Birth
- Address and
- Gender

Of which, name , date of birth and address has to be substantiated with documentary proof. Residents seeking Unique Identity Number (UID), referred to as Aadhaar, shall provide at least one proof of identity (POI) with name and photograph and one or more documentary proof containing date of birth and address (POA) information. UIDAI has prepared a master list of documents a resident can provide to substantiate demographic details. The following bio-metric information is collected from residents, as a pre-requisite, to uniquely identify a resident :

(a) Photograph
(b) IRIS and
(c) Fingerprints

2.3 Aadhaar is a 12-digit unique number, which the Unique Identification Authority of India (UIDAI) issues to all residents. The number is stored in a centralized database and linked to the basic demographic and biometric information namely, photograph, ten fingerprints and iris, of each individual. Aadhaar will be :

- Easily verifiable in an online, cost-effective way.
- Unique and robust enough to eliminate the large number of duplicate and fake identities in Government and private databases.
- A randomly generated number, devoid of any classification based on caste, creed, religion and geography.

2.4 Aadhaar-based identification will have the following key benefits :

- Residents with Aadhaar would be spared the trouble of repeatedly proving identity through documents each time they acess services delivered by public and private sector agencies such as getting subsidized ration, unemployment benefits, social security pension, obtaining a bank account, passport, driving license etc.
- By providing a clear proof of identity, Aadhaar will empower the poor and under privileged residents in accessing services such as formal banking system and give them an opportunity to avail various services provided by the Government and the private sector. The centralized technology infrastructure of the UIDAI will enable 'anytime, anywhere, and how' authentication.

3. **Incentivising the enrolment into UID :** Considering the likely benefits of Aadhaar (UID), which will help the poor to access benefits, improve governance and delivery of public services and reduce transaction costs and leakages, Government of India has incentivized enrolments thereunder. The process of registering residents below poverty line (BPL) involves costs for both the beneficiaries and the State Governments. Hence, Government of India has incentivized states to enroll beneficiaries under Aadhaar (UID). Such support can be used by the State either to directly subsidise residents or to provide better facilities for enrolment so that their cost of participation is lowered.

3.1 Accordingly, the 13th Finance Commission proposed an incentive for States, during its award period, 2010-15, calculated at Rs. 100 per person mulitiplied by the persons below the poverty line (Uniform Recall Period : 2004-05, as publilshed by the Planning Commission) The guidelines for these grants are :

3.1.1 States may use this grant either to directly assist the intended beneficiaries or create convenient facilities for them so that the cost of registration is minimal to beneficiaries.

3.1.2 The assistance, if provided, will be restricted to BPL category beneficiaries of Mahathma Gandhi National Rural Employment Guarantee Scheme (MGNREGS), Rashtriya Swastya Bima Yojana (RSBY), Public Distribution System (PDS), old-age pensioners and other welfare schemes of the State and Central Schemes.

**4. Implementation of Aadhaar Project in Karnataka :**

4.1 The Centre for e-Governance, Bengaluru, has been designated as the nodel agency for implementation of Aadhaar project in Karnataka as per the Government Order dated 17-12-2009, read at (1) above. In Karnataka, an Empowered Committee, with the powers of Cabinet, was constituted under the chairmanship of Chief Secretary to take decisions relating to implementation of Aadhaar project in Karnataka, as per Government order dated : 16-01-2010, read at (2) above.

4.2 The Centre for e-Governance entered into a memorandum of understanding (MOU) with UIDAI, according to which, Centre for e-Governance shall, on behalf of Government of Karnataka, gather demographic and bio-metric information from residents of Karnataka State as per the standards prescribed by the UIDAI and upload the same to CIDR (Central ID Repository) for further processing and generation of UID.

4.3 The Empowered Committee, referred to in paragraph 4.1 above, approved a strategy of roll out of Aadhaar project in Karnataka, as per the following :-

(1) Phase I : Roll out in two pilot districts, namely, Mysore and Tumkur, to test and refine both technical and operational process of UID enrolment.

(2) Phase II : Roll out in 8 more districts in Karnataka, at the rate of two per revenue division.

(3) Phase III : Roll out to the remaining 20 districts in Karnataka.

(4) Creation of a Karnataka Resident Data Hub to seed the UID numbers into various databases of departments providing welfare services to the citizens, to enable efficient delivery and tracking of services and address pilferage.

4.4 The following are the main features vis-à-vis implementation of Aadhaar project in Karnataka :-

(a) Collection of information from the residents for 8 major services.

(b) Making it mandatory for the residents to furnish original documents at the time of enrolment, failing which the services concerned would be temporarily suspended and

(c) Directing concerned departments to take necessary action to publicize the same.

4.5 Accordingly UID enrolment was launched in the two pilot districts of Mysore and Tumkur engaging two enrolment agencies, one for each district, through a competitive tendering process. The enrolment programme was formally launched in Mysore and Tumkur on 8th October 2010.

**5. Karnataka Resident Data Hub (KRDH) Project :**

5.1 To leverage the uniqueness of the UID number, it is necessary to integrate the UID numbers to the various services offered to the citizens by the Government. For the purpose, it is required to establish a resident's data hub that would enable mapping of resident information in various databases to the UID number. To achieve this, it is essential to identify the major welfare oriented programmes and collect information from the residents on their participation in these programmes. Collection of such information during the enrolment process will facilitate integration of UID number into the databases.

5.2 Government of Karnataka is implementing several unique welfare oriented programmes for the benefit of people of Karnataka. It is extremely important that these beneficiary oriented services (subsidy related schemes) are delivered in an efficient manner. Linking of the delivery of the services to the Unique ID of residents has immense benefits in terms of :

(b) Unique identification and better targeting of services

(c) Prevention of pilferage/leakages in the service delivery by

(i) Eliminating duplicate and ghost entries and

(ii) Preventing duplication of enrolment in various services.

5.3 Government of Karnataka annually spends considerable amounts towards subsidy in various welfare programmes. Some of the services of the Government which have been shortlisted to be "Aadhaar enabled" are specified in the table below :-

**TABLE**

| Sl.No. | Department | Service identified |
|---|---|---|
| 1 | Revenue Department | Social Security Pension |
| 2 | Energy Department | IP pump sets |
| 3 | Animal Husbandry Department | Membership of Milk Co-operative Federation |
| 4 | Women & Child Development Department | Bhagyalakshmi |
| 5 | Food, Civil Supplies & Consumer Affairs Department | 1. LPG Connection<br>2. Ration Card |
| 6 | Rural Development and Panchayat Raj Department | MGNREGS Job Card |

5.4 Besides collecting the demographic and bio-metric information prescribed by the UIDAI, additional information about residents, titled as KYR+, has to be collected, wherein KYR refers to Know Your Resident. Specifically, residents seeking Aadhaar enrolment are also to be requested to provide the following additional KYR+ information :

- Social security pension (sanction order no. & money order no.)
- Ration card number
- Mahathma Gandhi National Rural Employment Guarantee Scheme Card number
- Bond Number in Bhagyalakshmi Scheme (details of children)
- IP pump set details
- Passbook number in Milk Co-operative Society &
- Customer card number for LPG connection

5.5 For this purpose, it is proposed to develop one single consolidated Karnataka Resident Data Hub (KRDH) as per the following :

- Develop a State-wide Data Governance Framework and build a secure and sustainable ICT (Information and Communication Technology) infrastructure for the same.
- Develop a State Level framework for seeding of resident databases of the departments with Aadhaar information and make the framework fully operational.
- Develop one single consolidated data hub for the State (KRDH) wherein key information about all residents of the State is maintained and constantly updated.
- Advise and facilitate modifications to existing legacy software applications and databases in the State, as required, to store Aadhaar information to deliver services.

6. In this background Government hereby orders as under.

**GOVERNMENT ORDER NO. DPAR 7 PRJ 2010, BANGALORE, DATED: 20TH MAY 2011.**

7. Under the circumstances explained in the preamble, Government hereby accords sanction to-

7.1 (i) Implement the Aadhaar (UID) project in the State as per the details in paragraphs 4.3 and 4.4 above.

(ii) Provide an incentive of Rs. 100 (One hundred) per head only to those BPL category beneficiaries under social security schemes and Mahathma Gandhi National Rural Employment Guarantee Scheme who produce the relevant documents as proof and after they get enrolled for UID number, through a process of transfer into their bank accounts ; and

(iii) The Centre for e-Governance, in consultation with Rural Development and Panchayat Raj Department, Revenue Department etc, to work out a mechanism and modality for incentivisation of the enrolment.

7.2 Develop a single consolidated Karnataka Resident Data Hub (KRDH) involving the following activities :

(b) Development of a State-wide Data Governance Framework and building secure and sustainable ICT infrastructure for the same.

(c) Development of a State level framework for seeding of resident databases of the departments with Aadhaar information and make the framework fully operational.

(d) Development of one single consolidated data hub for the State (KRDH) wherein key information about all residents of the State will be maintained and constantly kept updated.

(e) Advising and also facilitating modifications of existing legacy software applications and databases of various other departments in the State, as required, to store Aadhaar information to deliver different services.

(f) Mandating the departments concerned to take measures to highlight the necessity of providing KYR+ information on the part of the residents when they come for Aadhaar enrolment, wherever applicable with the stipulation that failure to provide the correct information will entail temporary suspension of the relevant service/benefit availed by the resident and

(g) Urging the residents through widespread publicity and awareness creation to provide KYR+ (Know Your Resident+) information while seeking Aadhaar enrolment.

7.3 The departments specified in the table in paragraph 5.3 above shall take action as per (e) and (f) in paragraph 7.2 above and accordingly issue necessary directions to the field level functionaries and to the beneficiaries concerned.

8. The expenditure on this account shall be debited to the head of account “3451-00-800-0-07-101 (Plan) - XIII FCG-Incentives For issuing Unique Identification (UIDs)” and the head of account “3451-00-090-2-04-059-e-Governance (Plan).”

By Order and in the name of the Governor of Karnataka

**PRASANNA KUMAR G.S.**

Desk Officer-2

Department of Peronnel and Administrative Reforms

(e-Governance)

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

**ವಿಷಯ :** ಆಧಾರ್ (ಅದ್ವಿತೀಯ ಗುರುತಿನ ಸಂಖ್ಯೆಗಳ) ಯೋಜನೆಯನ್ನು ಮತ್ತು ವಿವಿಧ ಸರ್ಕಾರಿ ಸೌಕರ್ಯಗಳನ್ನು (ಸಹಾಯಧನ ಸಂಬಂಧಿತ ಸೌಕರ್ಯಗಳನ್ನು) ಪಡೆಯುತ್ತಿರುವ ಬಗ್ಗೆ ನಿವಾಸಿಗಳಿಂದ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸಂಬಂಧಿಸಿದ ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)]ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

**ಓದಲಾಗಿದೆ :** 1. ದಿನಾಂಕ : 17–12–2009ರ ಆದೇಶ ಸಂಖ್ಯೆ : ಸಿಆಸುಇ 159 ಇಆಇ 2009 (ಪಿ–1)

2. ದಿನಾಂಕ : 16–01–2010ರ ಆದೇಶ ಸಂಖ್ಯೆ : ಸಿಆಸುಇ 159 ಇಆಇ 2009 (ಪಿ–1)

**ಪ್ರಸ್ತಾವನೆ:**

1. ಭಾರತದ ಎಲ್ಲಾ ನಿವಾಸಿಗಳಿಗೆ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಈ ಯೋಜನೆಯನ್ನು 'ಆಧಾರ್' ಎಂದು ಕರೆಯಲಾಗುತ್ತದೆ ಮತ್ತು ಅದರಡಿಯಲ್ಲಿ ನೀಡುವ ಅದ್ವಿತೀಯ ಗುರುತಿನ ಸಂಖ್ಯೆಯನ್ನು ಸಹ 'ಆಧಾರ್' ಎಂದು ಕರೆಯಲಾಗುತ್ತದೆ. ಅದನ್ನು ಜಾರಿಗೊಳಿಸುವ ಸಲುವಾಗಿ ಭಾರತದ ಅದ್ವಿತೀಯ ಗುರುತಿನ ಪ್ರಾಧಿಕಾರ (Unique Identification Authority of India (UIDAI) ವನ್ನು ಕೇಂದ್ರ ಸರ್ಕಾರ ಯೋಜನಾ ಆಯೋಗದಡಿಯಲ್ಲಿ ಸ್ಥಾಪಿಸಿದೆ. ಭಾರತೀಯ ನಿವಾಸಿಗಳಿಗೆ ಅದ್ವಿತೀಯ ಗುರುತಿನ ಸಂಖ್ಯೆಗಳು ನೀಡುವುದು ಆ ಪ್ರಾಧಿಕಾರದ ಮೂಲ ಕಾರ್ಯವ್ಯಾಪ್ತಿಯಾಗಿದೆ ಮತ್ತು ಸಾರ್ವಜನಿಕರಿಗೆ, ವಿಶೇಷವಾಗಿ, ಬಡಜನರಿಗೆ ಸೇವೆಗಳನ್ನು ಹಾಗೂ ಕಲ್ಯಾಣ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ತಲುಪಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಈ ಯೋಜನೆಯ ಮುಖ್ಯ ಉದ್ದೇಶಗಳ ಪೈಕಿ ಒಂದಾಗಿರುತ್ತದೆ.

2. **<u>ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನೀಡುವ ಪ್ರಕ್ರಿಯೆ ಮತ್ತು ಅದರ ಉಪಯೋಗಗಳು :–</u>**

2.1 ಪದನಾಮೀಕರಿಸಿದ ರಿಜಿಸ್ಟ್ರಾರುಗಳ ಮೂಲಕ ಭಾರತದ ಅದ್ವಿತೀಯ ಗುರುತಿನ ಪ್ರಾಧಿಕಾರ ಅದ್ವಿತೀಯ ಗುರುತಿನ ಸಂಖ್ಯೆಯನ್ನು ಜಾರಿಗೊಳಿಸುತ್ತದೆ. ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡುವ ಸಲುವಾಗಿ ನಿವಾಸಿಗಳನ್ನು ನೋಂದಾಯಿಸುವುದು ಈ ರಿಜಿಸ್ಟ್ರಾರುಗಳ ಕಾರ್ಯವ್ಯಾಪ್ತಿಯಾಗಿದೆ. ಪಟ್ಟಿ ಮಾಡುವ (enrolment) ಏಜೆನ್ಸಿಗಳನ್ನು ಈ ರಿಜಿಸ್ಟ್ರಾರ್‌ಗಳು ನೇಮಿಸಬಹುದಾಗಿದ್ದು. ಅವುಗಳು ಗ್ರಾಮ/ವಾಸ ಮಟ್ಟದಲ್ಲಿ ಪಟ್ಟಿ ಮಾಡುವ ಪ್ರಕ್ರಿಯೆಯನ್ನು ಕೈಗೊಳ್ಳುತ್ತವೆ.

2.2 ಪ್ರತಿ ವೈಯಕ್ತಿಕ ನಿವಾಸಿಗೆ ಸಂಬಂಧಿಸಿದಂತೆ, ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ದತ್ತಾಂಶದ ಆಧಾರದ ಮೇಲೆ ನಿವಾಸಿಗಳನ್ನು ಅದ್ವಿತೀಯವಾಗಿ ಗುರುತಿಸಿ ಅವರಿಗೆ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡುವುದು ಸದರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯಾಗಿದೆ. ಪ್ರತಿಯೊಬ್ಬ ನಿವಾಸಿಯಿಂದ ಈ ಕೆಳಕಂಡ ಜನವಿವರಣೆ (demographic) ಮಾಹಿತಿಯನ್ನು ಪಡೆಯಲಾಗುವುದು :–

- ಹೆಸರು
- ಜನ್ಮ ದಿನಾಂಕ
- ವಿಳಾಸ ಮತ್ತು
- ಲಿಂಗ

ಇವುಗಳ ಪೈಕಿ ಹೆಸರು, ಜನ್ಮ ದಿನಾಂಕ ಮತ್ತು ವಿಳಾಸವನ್ನು ದಾಖಲಾತಿಗಳ ಸಾಕ್ಷಾಧಾರದ ಮೇಲೆ ಸಮರ್ಥಿಸತಕ್ಕದ್ದು. ಆಧಾರ್ ಎಂಬ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡಬೇಕೆಂದು ಕೋರುವ ನಿವಾಸಿಗಳು ಅವರ ಹೆಸರು ಮತ್ತು ಭಾವಚಿತ್ರ ಇರುವ ಗುರುತಿನ ಸಾಕ್ಷಾಧಾರವನ್ನು (proof of identity) ಮತ್ತು ಅವರ ಜನ್ಮ ದಿನಾಂಕ ಮತ್ತು ವಿಳಾಸಕ್ಕೆ (proof of address) ಸಂಬಂಧಿಸಿದಂತೆ, ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಾಕ್ಷಾಧಾರವನ್ನು ಒದಗಿಸತಕ್ಕದ್ದು. ಜನವಿವರಣೆ (demographic) ವಿವರಗಳನ್ನು ಸಮರ್ಥಿಸುವ ಸಲುವಾಗಿ ಒಬ್ಬ ನಾಗರೀಕನು ಸಲ್ಲಿಸಬಹುದಾದ ದಾಖಲೆಗಳ ಒಂದು ಮಾಸ್ಟರ್ ಪಟ್ಟಿಯನ್ನು ಸದರಿ ಪ್ರಾಧಿಕಾರ ತಯಾರಿಸಿದೆ. ಒಬ್ಬ ನಾಗರೀಕನನ್ನು ಅದ್ವಿತೀಯವಾಗಿ ಗುರುತಿಸುವ ಸಲುವಾಗಿ, ಪೂರ್ವಾಗತ್ಯವಾಗಿ, ಈ ಕೆಳಕಂಡ ಮಾಹಿತಿಯನ್ನು ಅವರಿಂದ ಸಂಗ್ರಹಿಸಲಾಗುವುದು :–

(ಅ) ಭಾವಚಿತ್ರ

(ಆ) ಅಕ್ಷಿಪಟಲ ಮೂಲಕ ಗುರುತಿಸುವುದು (IRIS)

(ಇ) ಬೆರಳಚ್ಚು

2.3 ಸದರಿ ಪ್ರಾಧಿಕಾರದ ಎಲ್ಲಾ ನಿವಾಸಿಗಳಿಗೆ ನೀಡುವ ಆಧಾರ್ ಸಂಖ್ಯೆಯು 12 ಸಂಖ್ಯೆಗಳ ಅದ್ವಿತೀಯ ಸಂಖ್ಯೆಯಾಗಿದೆ. ಈ ಸಂಖ್ಯೆಯನ್ನು ಕೇಂದ್ರೀಕೃತ ದತ್ತಾಂಶದಲ್ಲಿ ಶೇಖರಿಸಲಾಗುವುದು ಮತ್ತು ಅದನ್ನು ಪ್ರತಿಯೊಬ್ಬ ನಿವಾಸಿಗೆ ಸಂಬಂಧಿಸಿದ ಮೂಲ ಜನವಿವರಣೆ ಮತ್ತು ಬಯೋಮೆಟ್ರಿಕ್ (demographic an bio-metric) ಮಾಹಿತಿಯೊಂದಿಗೆ–ಭಾವಚಿತ್ರ. ಹತ್ತು ಬೆರಳಚ್ಚುಗಳು ಮತ್ತು ಐರೀಸ್ (IRIS) ಜೋಡಿಸಲಾಗುವುದು. ಆಧಾರ್ ಸಂಖ್ಯೆಯನ್ನು –

- ಆನ್‌ಲೈನ್ ಮೂಲಕ ಕಡಿಮೆ ದರದಲ್ಲಿ ಸುಲಭವಾಗಿ ಪರಿಶೀಲನೆ ಮಾಡಬಹುದಾಗಿದೆ.
- ಖಾಸಗಿ ಮತ್ತು ಸರ್ಕಾರಿ ದತ್ತಾಂಶಗಳಲ್ಲಿ ಬಹು ಸಂಖ್ಯೆಯಲ್ಲಿರುವ ಡ್ಯೂಪ್ಲಿಕೆಟ್ ಮತ್ತು ಸುಳ್ಳು ಗುರುತುಗಳನ್ನು ತೆಗೆದುಹಾಕಲು ಅದ್ವಿತೀಯ ಮತ್ತು ಸದೃಢವಾಗಿರುತ್ತದೆ.
- ಮನಬಂದಂತೆ (randomly) ಈ ಸಂಖ್ಯೆಯನ್ನು ಸೃಜಿಸಿದ್ದು, ಜಾತಿ ಮತ, ಭೂವಿವರಣೆ, ಇವುಗಳ ಆಧಾರದ ಮೇಲೆ ವರ್ಗೀಕರಿಸದೇ ಇರುವ ಸಂಖ್ಯೆಯಾಗಿದೆ.

2.4 ಆಧಾರ್ ಗುರುತಿನಿಂದಾಗಿ ಈ ಕೆಳಕಂಡ ಮುಖ್ಯ ಅನುಕೂಲಗಳಿರುತ್ತವೆ :–

- ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ಸಂಸ್ಥೆಗಳು ನೀಡುವ ಸೇವೆಗಳಾದ ಸಬ್‌ಸಿಡಿಯುಳ್ಳ ಆಹಾರ ಧಾನ್ಯ, ನಿರುದ್ಯೋಗಿ ಸೌಲಭ್ಯಗಳು, ಸಾಮಾಜಿಕ ಭದ್ರತಾ ಪಿಂಚಣಿ, ಬ್ಯಾಂಕ್ ಖಾತೆ ತೆರೆಯಲು, ಪಾಸ್‌ಪೋರ್ಟ್, ವಾಹನ ಚಾಲಕರ ಪರವಾನಗಿ ಇತ್ಯಾದಿಗಳನ್ನು ಪಡೆಯಲು ನಿವಾಸಿಗಳು ಮನಃ ಮನಃ ಅವರ ಗುರುತನ್ನು ಸಾಬೀತು ಪಡಿಸುವುದು ಅಗತ್ಯವಿರುವುದಿಲ್ಲ.

- ಆಧಾರ್ ಸಂಖ್ಯೆಯಿಂದ ಗುರುತಿನ ಸಾಕ್ಷಾಧಾರ (proof of identity) ಲಭ್ಯವಾಗಲಿದ್ದು, ಇದರಿಂದಾಗಿ ಬಡ ವರ್ಗಕ್ಕೆ ಸೇರಿದ ನಿವಾಸಿಗಳು ಬ್ಯಾಂಕಿಂಗ್ ಮುಂತಾದ ಸೇವೆಗಳನ್ನು ಪಡೆಯಲು ಅಧಿಕಾರ ಹೊಂದುತ್ತಾರೆ ಮತ್ತು ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿನ ಸೇವೆಗಳನ್ನು ಸುಲಭವಾಗಿ ಪಡೆಯಲು ಅವರಿಗೆ ಅವಕಾಶವಾಗುತ್ತದೆ. ಸದರಿ ಪ್ರಾಧಿಕಾರದ ಕೇಂದ್ರೀಕೃತ ತಂತ್ರಾಂಶದ ಮೂಲ ಸೌಕರ್ಯದಿಂದಾಗಿ ಯಾವುದೇ ಸಮಯ, ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲಿ ದೃಢೀಕರಣಕ್ಕಾಗಿ (anytime, anywhere, anyhow authentication) ಆಸ್ಪದವಾಗಿದೆ.

3. **<u>ಆಧಾರ್ ಸಂಖ್ಯೆಗಾಗಿ ನೋಂದಾಯಿಸುವುದನ್ನು ಪ್ರೋತ್ಸಾಹಿಸುವ ಬಗ್ಗೆ :</u>** ಆಧಾರ್ ಸಂಖ್ಯೆಯಿಂದ ಉಂಟಾಗಬಹುದಾದ ಸೌಲಭ್ಯಗಳಾದ ಬಡವರ್ಗಕ್ಕೆ ಸೇರಿದ ಜನರು ಸೌಲಭ್ಯಗಳನ್ನು ಪಡೆಯುವುದು, ಆಡಳಿತದಲ್ಲಿ ಮತ್ತು ಸಾರ್ವಜನಿಕ ಸೇವೆಗಳ ನೀಡುವಿಕೆಯಲ್ಲಿ ಉತ್ತಮಗೊಳಿಸುವಿಕೆ, ವಹಿವಾಟು ವೆಚ್ಚ ಮತ್ತು ಸೋರಿಕೆಗಳನ್ನು ಕಡಿತಗೊಳಿಸುವುದು. ಇವುಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರ ಆಧಾರ್ ಸಂಖ್ಯೆಗಾಗಿ ನೋಂದಾಯಿಸುವುದನ್ನು ಪ್ರೋತ್ಸಾಹಿಸಲು ನಿರ್ಣಯಿಸಿದೆ. ಬಡತನ ರೇಖೆಗಿಂತ ಕೆಳಗಿರುವ (Below Poverty Line) ನಿವಾಸಿಗಳನ್ನು ನೋಂದಾಯಿಸುವ ಪ್ರಕ್ರಿಯೆಯಿಂದಾಗಿ ಫಲಾನುಭವಿಗಳು ಮತ್ತು ರಾಜ್ಯ ಸರ್ಕಾರಗಳಿಗೆ ವೆಚ್ಚ ಉಂಟಾಗುತ್ತದೆ. ಆದುದರಿಂದ ಫಲಾನುಭವಿಗಳ ನೋಂದಣಿ ಮಾಡುವುದನ್ನು ಪ್ರೋತ್ಸಾಹಿಸಬೇಕೆಂದು ಕೇಂದ್ರ ಸರ್ಕಾರ ನಿರ್ಣಯಿಸಿದೆ. ಈ ರೀತಿ ಲಭ್ಯವಾದ ನೆರವನ್ನು ನಿವಾಸಿಗಳಿಗೆ ನೇರವಾಗಿ ಸಹಾಯಧನ ನೀಡಲು ಅಥವಾ ಅವರ ನೋಂದಣಿ ಮಾಡಲು ಉತ್ತಮ ಸೌಲಭ್ಯಗಳನ್ನು ನೀಡಲು ರಾಜ್ಯಗಳು ಬಳಸಬಹುದಾಗಿದ್ದು, ಇದರಿಂದಾಗಿ ಅವರ ನೋಂದಣಿಗೆ ಸಂಬಂಧಿಸಿದಂತೆ ಅವರಿಗೆ ತಗಲಬಹುದಾದ ವೆಚ್ಚ ಕಡಿಮೆಯಾಗುತ್ತದೆ.

3.1 ಅದರಂತೆ, 13ನೇ ಆರ್ಥಿಕ ಆಯೋಗ, ಅದರ ಅವಾರ್ಡ್ ಅವಧಿಯಾದ 2010–15ಗಾಗಿ ಬಡತನ ರೇಖೆಗಿಂತ ಕೆಳಗಿರುವ (Below Poverty Line) ಪ್ರತಿ ನಿವಾಸಿಗಾಗಿ ತಲಾ ರೂ. 100.00 ರಂತೆ, ರಾಜ್ಯಗಳಿಗೆ ಪ್ರೋತ್ಸಾಹ ಧನ ನೀಡಲು ಉದ್ದೇಶಿಸಿದೆ. (Uniform Recall Period : 2004-05, as published by the Planning Commission) ಈ ಅನುದಾನ ನೀಡಲು ಈ ಕೆಳಕಂಡ ಮಾರ್ಗಸೂಚಿಗಳು ಅನ್ವಯವಾಗುತ್ತವೆ :–

3.1.1 ನಿವಾಸಿಗಳಿಗೆ ನೇರವಾಗಿ ಸಹಾಯಧನ ನೀಡಲು ಅಥವಾ ಅವರ ನೋಂದಣಿ ಮಾಡಲು ಉತ್ತಮ ಸೌಲಭ್ಯಗಳನ್ನು ನೀಡಲು ರಾಜ್ಯಗಳು ಈ ಅನುದಾನವನ್ನು ಬಳಸಬಹುದಾಗಿದ್ದು, ಇದರಿಂದಾಗಿ ಅವರ ನೋಂದಣಿಗೆ ಸಂಬಂಧಿಸಿದಂತೆ ಅವರಿಗೆ ತಗಲಬಹುದಾದ ವೆಚ್ಚ ಕಡಿಮೆಯಾಗುತ್ತದೆ.

3.1.2 ಈ ನೆರವು ನೀಡಿದ ಪಕ್ಷದಲ್ಲಿ, ಅದು ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಮ್, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ, ಸಾರ್ವಜನಿಕ ವಿತರಣಾ ವ್ಯವಸ್ಥೆ, ವೃದ್ಧಾಪ್ಯ ವೇತನ ಮತು ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಇತರೆ ಕಲ್ಯಾಣ ಯೋಜನೆಗಳ ಬಡತನ ರೇಖೆಗಿಂತ ಕೆಳಗಿರುವ (Below Poverty Line) ಫಲಾನುಭವಿಗಳಿಗೆ ಸೀಮಿತಗೊಳಿಸಲಾಗುವುದು.

4. **<u>ಕರ್ನಾಟಕದಲ್ಲಿ ಆಧಾರ್ ಯೋಜನೆಯ ಜಾರಿಗೊಳಿಸುವಿಕೆ :</u>**

4.1 ಕರ್ನಾಟಕದಲ್ಲಿ ಆಧಾರ್ ಯೋಜನೆಯ ಜಾರಿಗೊಳಿಸುವಿಕೆಗಾಗಿ ಇ–ಆಡಳಿತ ಕೇಂದ್ರ, ಬೆಂಗಳೂರು, ಈ ಸಂಸ್ಥೆಯನ್ನು, ಮೇಲೆ (1)ರಲ್ಲಿ ಓದಲಾದ ದಿನಾಂಕ : 17–12–2009ರ ಸರ್ಕಾರಿ ಆದೇಶದನ್ವಯ ನೋಡಲ್ ಏಜೆನ್ಸಿಯನ್ನಾಗಿ ಪದನಾಮೀಕರಿಸಲಾಗಿದೆ. ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನೀಡುವ ಆಧಾರ್ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳುವ ಸಲುವಾಗಿ ಮೇಲೆ (2)ರಲ್ಲಿ ಓದಲಾದ ದಿನಾಂಕ : 16–01–2010ರ ಸರ್ಕಾರಿ ಆದೇಶದನ್ವಯ, ಸಚಿವ ಸಂಪುಟದ ಅಧಿಕಾರವುಳ್ಳ–ಅಧಿಕಾರಯುಕ್ತ ಸಮಿತಿಯನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

4.2 ಸದರಿ ಪ್ರಾಧಿಕಾರ ಇ–ಆಡಳಿತ ಕೇಂದ್ರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ನಿವೇದನಾ ಪತ್ರ (memorandum of understanding) ದನ್ವಯ, ಆ ಪ್ರಾಧಿಕಾರ ನಿಗದಿಪಡಿಸಿದ ಮಾನದಂಡದ ಪ್ರಕಾರ, ಕರ್ನಾಟಕ ಸರ್ಕಾರದ ಪರವಾಗಿ ರಾಜ್ಯದ ನಿವಾಸಿಗಳಿಗೆ ಸಂಬಂಧಿಸಿದಂತೆ ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ ಮತ್ತು ಅದನ್ನು ಪ್ರಕ್ರಿಯೆಗೊಳಿಸಿ ಅದ್ವಿತೀಯ ಗುರುತಿನ ಸಂಖ್ಯೆಯನ್ನು ಸೃಷ್ಟಿಸಲು ಅನುವಾಗಲು ಆ ಮಾಹಿತಿಯನ್ನು ಸಿಐಡಿಆರ್ (Central ID Repository) ಗೆ ದಾಖಲಿಸಬೇಕಾಗಿದೆ.

4.3 ಕರ್ನಾಟಕದಲ್ಲಿ ಆಧಾರ್ ಯೋಜನೆಯನ್ನು ಜಾರಿಗೊಳಿಸಲು ಈ ಕೆಳಕಂಡಂತೆ ತಂತ್ರವನ್ನು ಮೇಲಿನ ಕಂಡಿಕೆ 4.1ರಲ್ಲಿ ಉಲ್ಲೇಖಿಸಿದ ಅಧಿಕಾರಯುಕ್ತ ಸಮಿತಿ ಅನುಮೋದಿಸಿರುತ್ತದೆ :–

(1) ಮೊದಲನೆ ಹಂತ :– ಪ್ರಾಯೋಗಿಕವಾಗಿ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಜಾರಿಗೊಳಿಸುವುದು. ಇದರಿಂದಾಗಿ ನೋಂದಣಿಗೆ ಸಂಬಂಧಿಸಿದಂತೆ, ತಾಂತ್ರಿಕ ಮತ್ತು ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸಲು ಮತ್ತು ಉತ್ತಮಪಡಿಸಲು ಆಸ್ಪದವಾಗುತ್ತದೆ.

(2) ಎರಡನೆ ಹಂತ :– ಕರ್ನಾಟಕದ ಇನ್ನೂ ಎಂಟು ಜಿಲ್ಲೆಗಳಲ್ಲಿ, ಪ್ರತೀ ಕಂದಾಯ ವಿಭಾಗಕ್ಕೆ ಎರಡು ಜಿಲ್ಲೆಗಳಂತೆ ಜಾರಿಗೊಳಿಸುವುದು.

(3) ಮೂರನೆ ಹಂತ :– ಕರ್ನಾಟಕದ ಉಳಿದ 20 ಜಿಲ್ಲೆಗಳಲ್ಲಿ ಜಾರಿಗೊಳಿಸುವುದು.

(4) ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)] ವನ್ನು ಸೃಜಿಸುವುದು ಮತ್ತು ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನಾಗರೀಕರ ಕಲ್ಯಾಣ ಸೇವೆಗಳನ್ನು ನೀಡುವ ಇಲಾಖೆಗಳ ದತ್ತಾಂಶಗಳಲ್ಲಿ ಅಳವಡಿಸಿಕೊಳ್ಳುವುದು. ಇದರಿಂದಾಗಿ ಆ ಸೇವೆಗಳನ್ನು ದಕ್ಷ ರೀತಿಯಲ್ಲಿ ನೀಡಲು ಮತ್ತು ಉಸ್ತುವಾರಿ ಮಾಡಲು ಮತ್ತು ಸೋರಿಕೆಗಳನ್ನು ನಿವಾರಿಸಲು ಅನುವಾಗುತ್ತದೆ.

4.4 ಕರ್ನಾಟಕ ರಾಜ್ಯದಲ್ಲಿ ಆಧಾರ್ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮುಖ್ಯ ಅಂಶಗಳು ಇರುತ್ತವೆ :–

(ಅ) ನಿವಾಸಿಗಳಿಂದ ಎಂಟು ಮುಖ್ಯ ಸೇವೆಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು.

(ಆ) ನೋಂದಣಿಯ ಸಮಯದಲ್ಲಿ ಮೂಲ ದಾಖಲೆಗಳನ್ನು ನಿವಾಸಿಗಳು ಒದಗಿಸಬೇಕೆಂದು ಕಡ್ಡಾಯಗೊಳಿಸುವುದು, ಇಲ್ಲದೆ ಇದ್ದಲ್ಲಿ ಸಂಬಂಧಪಟ್ಟ ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದು ಮತ್ತು

(ಇ) ಸಂಬಂಧಪಟ್ಟ ಇಲಾಖೆಗಳು ಇದಕ್ಕೆ ಪ್ರಚಾರ ಕೊಡಬೇಕೆಂದು ನಿರ್ದೇಶಿಸುವುದು.

4.5 ಅದರಂತೆ, ಪ್ರಾಯೋಗಿಕವಾಗಿ (on pilot basis) ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ನೋಂದಣಿಯ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಪ್ರತಿಯೊಂದು ಜಿಲ್ಲೆಗಾಗಿ ಒಂದೊಂದು ಸಂಸ್ಥೆಯಂತೆ ಎರಡು ಸಂಸ್ಥೆಗಳನ್ನು ನೋಂದಣಿ ಕಾರ್ಯಕ್ಕಾಗಿ, ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆಯ ಮೂಲಕ, ತೊಡಗಿಸಲಾಗಿದೆ. ಈ ನೋಂದಣಿ ಕಾರ್ಯಕ್ರಮವನ್ನು ಔಪಚಾರಿಕವಾಗಿ ಮೈಸೂರು ಮತ್ತು ತುಮಕೂರಿನಲ್ಲಿ ದಿನಾಂಕ : 08–10–2010 ರಂದು ಉದ್ಘಾಟಿಸಲಾಗಿದೆ.

5. **<u>ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ ಯೋಜನೆ : [Karnataka Resident Data Hub Project] :</u>**

5.1 ಆಧಾರ್ ಸಂಖ್ಯೆಯ ಅದ್ವಿತೀಯತೆಯ ಲಾಭವನ್ನು ಪಡೆಯಲು ಅನುವಾಗಲು, ನಾಗರೀಕರಿಗೆ ಸರ್ಕಾರ ನೀಡುತ್ತಿರುವ ವಿವಿಧ ಸೇವೆಗಳೊಂದಿಗೆ ಅದನ್ನು ವಿಲೀನಗೊಳಿಸುವುದು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ನಿವಾಸಿ ದತ್ತಾಂಶ ಕೇಂದ್ರ [Resident Data Hub] ವನ್ನು ಸ್ಥಾಪಿಸಬೇಕಾಗಿದೆ. ಇದರಿಂದಾಗಿ ವಿವಿಧ ದತ್ತಾಂಶಗಳಲ್ಲಿರುವ ನಾಗರೀಕರ ಮಾಹಿತಿಯನ್ನು ಆಧಾರ್ ಸಂಖ್ಯೆಯೊಂದಿಗೆ ಜೋಡಿಸಲು ಅನುವಾಗುತ್ತದೆ. ಈ ಉದ್ದೇಶವನ್ನು ಸಾಧಿಸಲು ಮುಖ್ಯ ಕಲ್ಯಾಣ ಯೋಜನೆಗಳನ್ನು ಗುರುತಿಸಬೇಕಾಗಿದೆ ಮತ್ತು ಅವುಗಳ ಲಾಭವನ್ನು ಪಡೆಯುತ್ತಿರುವ ಬಗ್ಗೆ ಮಾಹಿತಿಯನ್ನು ನಾಗರೀಕರಿಂದ ಸಂಗ್ರಹಿಸಬೇಕಾಗುತ್ತದೆ. ನೋಂದಣಿಯ ಪ್ರಕ್ರಿಯೆಯನ್ನು ನಡೆಸುತ್ತಿರುವ ಸಮಯದಲ್ಲಿ ಅಂತಹ ಮಾಹಿತಿಯನ್ನು ಸಂಗ್ರಹಿಸಿದ್ದಲ್ಲಿ, ಇದರಿಂದಾಗಿ ಆಧಾರ್ ಸಂಖ್ಯೆಯನ್ನು ದತ್ತಾಂಶಗಳಲ್ಲಿ ವಿಲೀನಗೊಳಿಸಲು ಅನುವಾಗುತ್ತದೆ.

5.2 ಕರ್ನಾಟಕ ಸರ್ಕಾರ, ಕರ್ನಾಟಕದ ನಿವಾಸಿಗಳಿಗಾಗಿ ಹಲವು ಅದ್ವಿತೀಯ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಫಲಾನುಭವಿಗಳಿಗೆ ಸಂಬಂಧಿಸಿದ ಈ ಸೇವೆಗಳನ್ನು (ಸಹಾಯಧನ ಸಂಬಂಧಿತ ಯೋಜನೆಗಳು) (subsidy related schemes) ನಿವಾಸಿಗಳಿಗೆ ದಕ್ಷ ರೀತಿಯಲ್ಲಿ ತಲುಪಿಸುವುದು ಬಹುಮುಖ್ಯವಾಗಿದೆ. ಈ ಸೇವೆಗಳನ್ನು ನೀಡುವುದನ್ನು ಆಧಾರ್ ಸಂಖ್ಯೆಗೆ ಜೋಡಿಸುವುದರಿಂದ ಈ ಕೆಳಕಂಡ ಅನುಕೂಲಗಳು ಉಂಟಾಗುತ್ತವೆ :–

(ಅ) ಅದ್ವಿತೀಯ ಗುರುತು ಮತ್ತು ಸೇವೆಗಳನ್ನು ಉತ್ತಮವಾಗಿ ನೀಡುವುದು.

(ಆ) ಸೇವೆಗಳ ನೀಡುವಿಕೆಯಲ್ಲಿ ಸೋರಿಕೆಗಳನ್ನು ಈ ಕೆಳಕಂಡವುಗಳ ಮೂಲಕ ನಿವಾರಿಸಲು

(i) ನಕಲಿ ದಾಖಲೆಗಳನ್ನು ತೆಗೆದುಹಾಕುವುದು ಮತ್ತು

(ii) ವಿವಿಧ ಸೇವೆಗಳಿಗಾಗಿ ಮತ್ತೆ ಮತ್ತೆ ನೋಂದಾಯಿಸುವುದನ್ನು ನಿವಾರಿಸುವುದು.

5.3 ವಿವಿಧ ಕಲ್ಯಾಣ ಯೋಜನೆಗಳಡಿಯಲ್ಲಿ ಸಹಾಯಧನ (subsidy) ನೀಡುವ ಸಲುವಾಗಿ ಕರ್ನಾಟಕ ಸರ್ಕಾರ ಪ್ರತಿ ವರ್ಷ ಗಣನೀಯವಾದ ಮೊತ್ತವನ್ನು ವೆಚ್ಚ ಮಾಡುತ್ತದೆ. "Aadhaar enabled" ಮಾಡುವ ಸಲುವಾಗಿ ಆಯ್ಕೆ ಮಾಡಲಾದ ಕೆಲವು ಸರ್ಕಾರಿ ಸೇವೆಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ನಮೂದಿಸಲಾಗಿದೆ :–

**<u>ಪಟ್ಟಿ</u>**

| ಕ್ರ.ಸಂ. | ಇಲಾಖೆ | ಗುರುತಿಸಿದ ಸೇವೆ |
|---|---|---|
| 1 | ಕಂದಾಯ ಇಲಾಖೆ | ಸಾಮಾಜಿಕ ಭದ್ರತೆ ಪಿಂಚಣಿ |
| 2 | ಇಂಧನ ಇಲಾಖೆ | ಐಪಿ ಪಂಪ್ ಸೆಟ್‌ಗಳು |
| 3 | ಪಶುಸಂಗೋಪನಾ ಇಲಾಖೆ | ಹಾಲು ಸಹಕಾರ ಮಹಾಮಂಡಳದ ಸದಸ್ಯತ್ವ |
| 4 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಭಾಗ್ಯಲಕ್ಷ್ಮಿ ಯೋಜನೆ |
| 5 | ಆಹಾರ, ನಾಗರೀಕ ಸೇವೆಗಳು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ | i. ಎಲ್‌ಪಿಜಿ ಸಂಪರ್ಕ<br>ii. ಪಡಿತರ ಚೀಟಿ |
| 6 | ಆರ್‌ಡಿಪಿಆರ್ | ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಮ್ (ಎಂಜಿಎನ್‌ಆರ್‌ಇಜಿಎಸ್) ಗುರುತಿನ ಚೀಟಿ (job card) |

5.4 ಸದರಿ ಪ್ರಾಧಿಕಾರ (UIDAI) ನಿಗದಿಪಡಿಸಿದಂತೆ ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ಮಾಹಿತಿಯನ್ನು ಪಡೆಯುವುದಲ್ಲದೇ, ನಿವಾಸಿಗಳ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಪಡೆಯಬೇಕಾಗಿದೆ. ಅದನ್ನು ಕೆವೈಆರ್+ ಎಂದು ಕರೆಯಲಾಗುತ್ತದೆ. ಕೆವೈಆರ್ ಎಂದರೆ (Know Your Resident) ಎಂಬುದಾಗಿದೆ. ಆಧಾರ್ ನೋಂದಣಿಯನ್ನು ಕೋರುವ ನಿವಾಸಿಗಳು ಈ ಕೆಳಕಂಡ ಹೆಚ್ಚುವರಿ ಕೆವೈಆರ್+ ಮಾಹಿತಿಯನ್ನು ನೀಡಬೇಕೆಂದು ಕೋರಬೇಕಾಗಿದೆ :–

- ಸಾಮಾಜಿಕ ಭದ್ರತೆ ಪಿಂಚಣಿ
- ಪಡಿತರ ಚೀಟಿ ಸಂಖ್ಯೆ
- ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯಮೆಂಟ್ ಗ್ಯಾರಂಟೀ ಸ್ಕೀಮ್ ಗುರುತಿನ ಚೀಟಿ (job card) ಸಂಖ್ಯೆ

- ಭಾಗ್ಯಲಕ್ಷ್ಮಿ ಯೋಜನೆಯಡಿ ನೀಡಲಾದ ಬಾಂಡ್ ಸಂಖ್ಯೆ (ಮಕ್ಕಳ ವಿವರಗಳು)
- ಐಪಿ ಪಂಪ್ ಸೆಟ್‌ಗಳ ವಿವರಗಳು
- ಹಾಲು ಸಹಕಾರ ಸಂಘದ ಪಾಸ್‌ಬುಕ್ ಸಂಖ್ಯೆ
- ಎಲ್‌ಪಿಜಿ ಸಂಪರ್ಕಕ್ಕೆ ಸಂಬಂಧಿಸಿದ ಗ್ರಾಹಕರ ಚೀಟಿಯ ಸಂಖ್ಯೆ

5.5 ಈ ಉದ್ದೇಶಕ್ಕಾಗಿ, ವ್ಯಾಪಕವಾದ ಒಂದು ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)] ವನ್ನು ಈ ಕೆಳಕಂಡಂತೆ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ :–

- ರಾಜ್ಯಾದ್ಯಂತ ದತ್ತ ನಿರ್ವಹಣಾ ಚೌಕಟ್ಟನ್ನು (Data Governance Framework) ಅಭಿವೃದ್ಧಿಗೊಳಿಸಲು ಮತ್ತು ಭದ್ರವಾದ ಹಾಗೂ ಬೆಂಬಲವಾಗಿರುವ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ (ಐಸಿಟಿ) ಮೂಲಸೌಕರ್ಯಗಳನ್ನು ಈ ಉದ್ದೇಶಕ್ಕಾಗಿ ಅಭಿವೃದ್ಧಿಗೊಳಿಸಲು
- ಇಲಾಖೆಗಳು ಹೊಂದಿರುವ ನಾಗರೀಕರ ದತ್ತಾಂಶಗಳನ್ನು ಆಧಾರ್ ಮಾಹಿತಿಯೊಂದಿಗೆ ಜೋಡಿಸುವ ಸಲುವಾಗಿ ರಾಜ್ಯ ಮಟ್ಟದ ಚೌಕಟ್ಟನ್ನು ಅಭಿವೃದ್ಧಿಗೊಳಿಸಲು ಮತ್ತು ಅದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಲು
- ರಾಜ್ಯಕ್ಕಾಗಿ ಒಂದು ಕ್ರೋಢೀಕೃತ ದತ್ತಾಂಶ ಕೇಂದ್ರ [Karnataka Resident Data Hub (KRDH)] ವನ್ನು ಅಭಿವೃದ್ಧಿಗೊಳಿಸಲು ಮತ್ತು ರಾಜ್ಯದ ಎಲ್ಲಾ ನಿವಾಸಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಿರ್ವಹಿಸಲು ಮತ್ತು ಅದನ್ನು ಸತತವಾಗಿ ಇಂದೀಕರಿಸಲು
- ಆಧಾರ್ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಸೇವೆಗಳನ್ನು ನೀಡಲು ಅಗತ್ಯಾನುಸಾರ ರಾಜ್ಯದ ಪ್ರಸ್ತುತ ಪೂರ್ವಾಜಿತ ಸಾಫ್ಟ್‌ವೇರ್ ಅನ್ವಯಿಕೆಗಳಿಗೆ (existing legacy software applications) ಮತ್ತು ದತ್ತಾಂಶಗಳಿಗೆ ಮಾರ್ಪಾಡುಗಳನ್ನು ಮಾಡುವ ಬಗ್ಗೆ ಸಲಹೆ ನೀಡುವುದು ಮತ್ತು ಅನುವು ಮಾಡುವುದು

6. ಈ ಹಿನ್ನೆಲೆಯಲ್ಲಿ, ಸರ್ಕಾರ ಈ ಮೂಲಕ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 7 ಯೋಜನೆ 2010, ಬೆಂಗಳೂರು, ದಿನಾಂಕ: 20–05–2011**

7 ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಸರ್ಕಾರ ಈ ಮೂಲಕ ಈ ಕೆಳಕಂಡದಕ್ಕೆ ಮಂಜೂರಾತಿ ನೀಡಿದೆ :–

7.1 (i) ಮೇಲಿನ ಕಂಡಿಕೆ 4.3 ಮತ್ತು 4.4 ಗಳಲ್ಲಿ ನಮೂದಿಸಿದ ವಿವರಗಳಂತೆ, ರಾಜ್ಯದಲ್ಲಿ ಆಧಾರ್ (ಯುಐಡಿ) ಯೋಜನೆಯನ್ನು ಜಾರಿಗೊಳಿಸಲು

(ii) ಸಾಮಾಜಿಕ ಭದ್ರತಾ ಯೋಜನೆಗಳ ಹಾಗೂ ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟೀ ಸ್ಕೀಮ್, ಇವುಗಳ ಫಲಾನುಭವಿಗಳ ಪೈಕಿ ಬಡತನ ರೇಖೆಗಿಂತ ಕೆಳಗಿರುವ (Below Poverty Line) ಫಲಾನುಭವಿಗಳು ಸಂಬಂಧಿಸಿದ ದಾಖಲೆಗಳನ್ನು ಸಾಕ್ಷ್ಯಾಧಾರವನ್ನಾಗಿ ನೀಡಿದ್ದಲ್ಲಿ ಮಾತ್ರ, ಅದ್ವಿತೀಯ ಗುರುತಿನ ಸಂಖ್ಯೆ (ಯುಐಡಿ) ಪಡೆಯಲು ನೋಂದಾಯಿಸಿದ ನಂತರ, ಅವರಿಗೆ ತಲಾ ರೂ. 100 (ಒಂದು ನೂರು ರೂಪಾಯಿಗಳು)ರ ಪ್ರೋತ್ಸಾಹಧನವನ್ನು ಅವರವರ ಬ್ಯಾಂಕ್ ಖಾತೆಗೆ ಅದನ್ನು ಜಮಾ ಮಾಡುವ ಪ್ರಕ್ರಿಯೆಯ ಮೂಲಕ ನೀಡಲು ಮತ್ತು

(iii) ನೋಂದಣಿ ಮಾಡುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಇ–ಆಡಳಿತ ಕೇಂದ್ರ, ಬೆಂಗಳೂರು ಇದರ ವತಿಯಿಂದ ಸಂಬಂಧಿಸಿದ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ ಇಲಾಖೆ ಇತ್ಯಾದಿ ಇಲಾಖೆಗಳೊಂದಿಗೆ ಸಮಾಲೋಚಿಸಿ, ಸೂಕ್ತ ತಂತ್ರಾಂಶ ಮತ್ತು ಕಾರ್ಯವಿಧಾನವನ್ನು ತಯಾರಿಸಲು

7.2 ರಾಜ್ಯಕ್ಕಾಗಿ, ಈ ಕೆಳಕಂಡ ಚಟುವಟಿಕೆಗಳನ್ನು ಒಳಗೊಂಡ ಒಂದು ಕ್ರೋಢೀಕೃತ ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)]ವನ್ನು ಅಭಿವೃದ್ಧಿಗೊಳಿಸಲು :–

(ಅ) ರಾಜ್ಯಾದ್ಯಂತ ದತ್ತ ನಿರ್ವಹಣಾ ಚೌಕಟ್ಟನ್ನು (Data Governance Framework) ಅಭಿವೃದ್ಧಿಗೊಳಿಸಲು ಮತ್ತು ಭದ್ರವಾದ ಹಾಗೂ ಬೆಂಬಲವಾಗಿರುವ ಐಸಿಟಿ ಮೂಲಸೌಕರ್ಯಗಳನ್ನು ಈ ಉದ್ದೇಶಕ್ಕಾಗಿ ಅಭಿವೃದ್ಧಿಗೊಳಿಸಲು

(ಆ) ಇಲಾಖೆಗಳು ಹೊಂದಿರುವ ನಾಗರೀಕರ ದತ್ತಾಂಶಗಳನ್ನು ಆಧಾರ್ ಮಾಹಿತಿಯೊಂದಿಗೆ ಜೋಡಿಸುವ ಸಲುವಾಗಿ ರಾಜ್ಯ ಮಟ್ಟದ ಚೌಕಟ್ಟನ್ನು ಅಭಿವೃದ್ಧಿಗೊಳಿಸಲು ಮತ್ತು ಅದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಲು

(ಇ) ರಾಜ್ಯಕ್ಕಾಗಿ ಒಂದು ಕ್ರೋಢೀಕೃತ ದತ್ತಾಂಶ ಕೇಂದ್ರ [Karnataka Resident Data Hub (KRDH)] ವನ್ನು ಅಭಿವೃದ್ಧಿಗೊಳಿಸಲು ಮತ್ತು ರಾಜ್ಯದ ಎಲ್ಲಾ ನಿವಾಸಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಿರ್ವಹಿಸಲು ಮತ್ತು ಅದನ್ನು ಸತತವಾಗಿ ಇಂದೀಕರಿಸಲು

(ಈ) ಆಧಾರ್ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಸೇವೆಗಳನ್ನು ನೀಡಲು ಅಗತ್ಯಾನುಸಾರ ರಾಜ್ಯದ ಪ್ರಸ್ತುತ ಪೂರ್ವಾಜಿತ ಸಾಫ್ಟ್‌ವೇರ್ ಅನ್ವಯಿಕೆಗಳಿಗೆ (existing legacy software applications) ಮತ್ತು ದತ್ತಾಂಶಗಳಿಗೆ ಮಾರ್ಪಾಡುಗಳನ್ನು ಮಾಡುವ ಬಗ್ಗೆ ಸಲಹೆ ನೀಡುವುದು ಮತ್ತು ಅನುವು ಮಾಡುವುದು

(ಉ) ಆಧಾರ್ ಯೋಜನೆಯಡಿ ನೋಂದಣಿ ಮಾಡುವ ಸಂದರ್ಭದಲ್ಲಿ ಕೆವೈಆರ್+ (Know Your Resident+) ಮಾಹಿತಿಯನ್ನು ನಿವಾಸಿಗಳು ಕಡ್ಡಾಯವಾಗಿ ನೀಡಬೇಕೆಂಬ ಅಗತ್ಯತೆಯನ್ನು ಸಂಬಂಧಪಟ್ಟ ಇಲಾಖೆಗಳು ನಿವಾಸಿಗಳಿಗೆ ತಿಳಿಸಲು ಕ್ರಮ ತೆಗೆದುಕೊಳ್ಳುವುದು ಮತ್ತು ಸರಿಯಾದ ಮಾಹಿತಿಯನ್ನು ನೀಡಲು ನಿವಾಸಿಗಳು ವಿಫಲವಾದ ಪ್ರಕರಣಗಳಲ್ಲಿ ಅವರುಗಳು ಪಡೆಯುವ ಸಂಬಂಧಪಟ್ಟ ಸೇವೆ/ಸೌಲಭ್ಯಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು

(ಊ) ಆಧಾರ್ ಯೋಜನೆಯಡಿ ನೋಂದಣಿ ಮಾಡುವ ಸಂದರ್ಭದಲ್ಲಿ ಕೆವೈಆರ್+ (Know Your Resident+) ಮಾಹಿತಿಯನ್ನು ನೀಡಬೇಕೆಂದು ವ್ಯಾಪಕವಾದ ಪ್ರಚಾರ ಮಾಡುವ ಹಾಗೂ ಅರಿವು ಮೂಡಿಸುವುದರ ಮೂಲಕ ನಿವಾಸಿಗಳನ್ನು ಕೋರಲು

7.3 ಮೇಲಿನ ಕಂಡಿಕೆ 5.3ರಲ್ಲಿನ ಪಟ್ಟಿಯಲ್ಲಿ ನಮೂದಿಸಲಾದ ಇಲಾಖೆಗಳು ಮೇಲಿನ ಅಂಶ (ಉ) ಮತ್ತು (ಊ) ರಂತೆ ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಅದರಂತೆ ಸಂಬಂಧಪಟ್ಟ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡತಕ್ಕದ್ದು.

8. ಇದಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "3451–00–800–0–07 ಯುನಿಕ್ ಐಡೆಂಟಿಫಿಕೇಷನ್ (ಯುಐಡಿ) ವಿತರಣೆಗೆ 13ನೇ ಆರ್ಥಿಕ ಆಯೋಗದ ಅನುದಾನ 101 ಸಹಾಯನುದಾನ (ಯೋಜನೆ)" ಮತ್ತು ಲೆಕ್ಕ ಶೀರ್ಷಿಕೆ "3451–00–090–2–04–059 ವಿದ್ಯುನ್ಮಾನ ಆಡಳಿತ ಯೋಜನೆ–ಇತರೆ ವೆಚ್ಚಗಳು (ಯೋಜನೆ)" ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಎಸ್.ಪ್ರಸನ್ನ ಕುಮಾರ್
ಪೀಠಾಧಿಕಾರಿ–2
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಇ–ಆಡಳಿತ)

ಪಿಆರ್.ನಂ. 1425

## WATER RESOURCES SECRETARIAT

**Sub:** Approval for the implementation of dam rehabilitation and improvement project (DRIP) with loan assistance from the world bank.

**Read:**
1. D.O. Ltr No : WRD 7 DSP 2009 dated 22-02-2010 of the Government of Karnataka.
2. Ltr. No. 16/3/2010-DSRD/360 dtd. 22-06-2010 from the Chief Engineer, DSO, Central Water Commission, Dam Safety (Rehabilitation) Directorate, GOI, New Delhi.
3. Memorandum No : WRD 10 DSP 2010 dated : 28-09-2010 of Water Resources Department, Government of Karnataka.

**PREAMBLE:**

1. Government of Karnataka vide letter at (1) above has expressed interest in participating in the World Bank Aided DRIP programme.

2. The Chief Engineer, DSO, Central Water Commission, New Delhi vide letter at (2) has intimated that, the total project cost is estimated at US $ 437.50 million (i.e. Rs. 2100.00 crore using conversion rate of 1 US $=Rs.48/-) in which a provision of US $M 100.05 (Rs. 480.24 crore) has been included as unallocated resources that can be used during implementation for cost over runs, rehabilitation of additional Dams in one or more of the four States, or for similar works in additional States which may desire to join the project at a later date during the course of the scheme. In consideration of Karnataka's interest in participating in DRIP, it was requested to send a proposal with the list of Dams and their likely rehabilitation requirements with tentative cost estimate.

3. The Chief Engineer, Water Resources Development Organisation is nominated as Nodal Officer vide memorandum at (3) for representing the State of Karnataka in formulating and finalizing the DRIP proposals by pursuing the matter further with Dam Safety Rehabilitation Directorate, CWC, New Delhi (identified as "Central Project Management Unit (CPMU)" for DRIP implementation), on the request of the Chief Engineer, DSO, Central Water Commission, Dam Safety (Rehabilitation) Directorate, GOI, New Delhi.

**4. Project Description & its necessity.**

The project comprises of total 178 number of Dams of the Karnataka State.

a) 39 Dams under Major & Medium and

b) 139 Dams under Minor irrigation

{57 Dams of Minor Irrigation (South) and 82 Dams of Minor Irrigation (North)}

This project will mainly improve the structural safety & operational performance of existing large Dams in the State and will also improve the overall safety of each Dam in view of the introduction of Dam Safety Bill-2010 in Lok Sabha.

**5. Objectives of the Project :**

a) To Rehabilitate and improve the Dams and Associated Appurtenances.

b) To conduct hydrological review of the Dams as per the guidelines issued by theCentral Water Commission (CWC), which involves calculation of revised design flood and comparing the same with the value adopted while designing the project, as a part of Technical Preparedness.

c) Preparation of Asset Management Plans and Emergency Action Plans (EAP).

d) Development of emergency warning systems , conducting public awareness campaigns and flood plain mapping.

e) To conduct structural review of the Dams.

f) To conduct Dam break analysis as a part of stability analysis of Dams etc.]

g) Institututional strengthening of KERS to establish and strengthen the Dam Safety Organization which has to take the lead in overseeing the safety to the Dams from structural and operational point of view.

The aspects (b) to (f) are proposed to be considered as part of consultancy studies.

6. **Name of the Executing Agency** : Chief Engineers in-charge of large Dams under Nigams/Water Resources Department and Minor Irrigation, Government of Karnataka.

7. **Estimated Project Cost, Sharing Pattern & its Cost Details :**
   a) In Foreign currency - $ 100.69 Million (conversion is $ 1=Rs.48)
   b) In Local currency - Rs. 483.32 crores
      i) External Aid - Rs. 386.66 crores (80% of total)
      ii) State Share - Rs. 96.66 crores (20% of total)

(wherein the State's Share is in the form of the Budgetary support)

The Abstract of the Cost is as under :

| Sl.No. | Project | Phase-I (2011-12) | Phase-II (2012-13 & 2013-14) | Phase-III (2014-15 & 2015-16) | Total |
|---|---|---|---|---|---|
| 1. | Major & Medium Irrigation Projects<br>In US $ Million<br>In Rs. Lakhs | <br>11.72<br>5625.00 | <br>32.90<br>15790.75 | <br>31.97<br>15346.55 | <br>76.59<br>36762.30 |
| 2. | Minor Irrigation Projects<br>In US $ Million<br>In Rs. Lakhs | <br>2.14<br>1029.36 | <br>9.70<br>4654.40 | <br>8.93<br>4286.60 | <br>20.77<br>9970.36 |
| 3. | Institutional Strengthening<br>In US $ Million<br>In Rs. Lakhs | <br>3.33<br>1600.00 | <br>- | <br>- | <br>3.33<br>1600.00 |
| | **Total**<br>**In US $ Million**<br>**In Rs. Lakhs** | <br>**17.19**<br>**8254.36** | <br>**42.60**<br>**20445.15** | <br>**40.90**<br>**19633.15** | <br>**100.69**<br>**48332.66** |

8. Project Components :

The details of the Project Components proposed to be taken up in three phases are as under :-

***(A) Major & medium irrigation projects***

(i) Phase-I (2011-12)

The following works are proposed to be taken up :

a) Hydrological studies, investigation works, stability studies.
b) Sedimentation studies.
c) Arrest leakages/seepage in masonry or concrete dam and earthen dam.
d) Seepage studies in drainage gallery, porous holes.

(ii) Phase-II (2012-13 & 2013-14)

The following are the works proposed to be taken up :

a) Strengthening of spillway, stilling basin, waste weir, aprons, training wall (Part-I).
b) Construction of Rock-toe drains, providing V-notch.
c) Providing instrumentation, power pack rooms, Piezometer, rain guage stations.
d) Strengthening & improvement of gates.
e) Providing stop log gates & gantry.

(iii) Phase-III (2014-15 & 2015-16)

The following are the works proposed to be taken up :

a) Strengthening of spillway, stilling basin, waster weir, aprons, training wall (Part-II).
b) Providing security aspects like lighting, chain link fencing, fixing CC Cameras.
c) Providing approach roads & linking field officers with computer network.
d) Gardening & tourism.
e) Providing fish ladder.
f) Other essential works.

***(B) Minor irrigation projects :***

**(i) Phase-I (2011-12)**

The following are the works proposed to be taken up.

Hydrological Studies, flood routing analysis, conducting safety checks as per new BIS code, O&M manual preparation.

**(ii) Phase-II (2012-13 & 2013-14)**

The following are the works proposed to be taken up :

Rectification of defects, carrying out DSRP recommendations.

**(iii) Phase-III (2014-15 & 2015-16)**

The following are the works proposed to be taken up :

Rectification of structural deficiency if any as per hydrological studies.

***(C) Institutional Strengthening (Capacity Building) :***

The following are the works proposed to be taken up :

**(i) Training :**

a) Capacity building of Engineers pertaining to Dam Safety to ensure the "Technical Preparedness" for the "Draft Dam Safety Act 2002" (for a period of 4 to 5 years).

b) Procurement of software for conducting above programmes.

c) Procurement of computer system compatible to the above software.

**(ii) Infrastructure Development :**

a) Construction of new buildings for Dam Safety Organization & Central Dam Organization at Bangalore (If ready land is available)

b) Cost of land purchase (if land is not available)

c) Upgrading Karnataka Engineering Research Station to suit the Modern needs for providing State of Art Technical solution to the problems in the field of Civil Engineering (pertaining to Dams) faced by various State Government Depts.

9. The State Level Co-ordination Committee (SLCC) has given clearance for the proposed project vide the proceedings No : PD 04 PFE 2010 dated : 22-12-2010.

10. For the smooth implementation of the project and to achieve Co-ordination of the various Agencies and Departments involved in the project, it is proposed to constitute an Empowered Committee as per the Circular No : FD 27 PMU 97 dated 13th April 1999.

11. The State Government has decided to implement the Dam Rehabilitation & Improvement Project (DRIP) Programme with the loan Assistance of the World Bank at an estimated project cost of $ 100.69 Million (Rs. 483.32 crores).

Hence the following Orders.

**Government Order No. WRD 07 DSP 2009, Bangalore, Dated : 12-05-2011**

In principle sanction is accorded for Implementation of the World Bank Aided Dam Rehabilitation and Improvement Project (DRIP) to ensure long term safety of dams at an estimated project cost of Rs. 483.32 crores (US $ 100.69 Million where conversion rate is US $ 1=Rs. 48) with an external aid of Rs. 386.66 crores (US $ 80.55 Million, 80% of total) and a State share of Rs. 96.66 crores (US $ 20.14 Million,, 20% of total) through budgetary support.

Further, sanction is accorded for the following :

1. To approach the Government of India for posting the project to World Bank through the Ministry of Water Resources (Line Ministry) and Dept. of Economic Affairs, Ministry of Finance, Government of India.
2. To authorise the Department of the Water Resources to negotiate with the Government of India and the World bank, the detailed terms and conditions for financing the project in consultation with the Finance Department.
3. Constitution of Empowered Committee for the smooth implementation of the project and to achieve Co-ordination of the various Agencies and Departments involved in the project, as per the guidelines issued by the Finance Department vide Circular No. FD 27 PMU 1997, dated 13th April 1999.

The Empowered Committee for DRIP is constituted as detailed below :

| | | |
|---|---|---|
| 1. | Additional Chief Secretary | Chairperson |
| 2. | Principal Secretary, WRD | Member |
| 3. | Principal Secretary, Planning Dept. | Member |
| 4. | Secretary, Finance Dept. (B&R) | Member |
| 5. | Secretary, WRD | Member |
| 6. | Secretary, Minor Irrigation | Member |
| 7. | Chief Engineer, WRDO & Nodal Officer (DRIP) | Member Secretary |
| 8. | Chief Engineer of the concerned Projects | Member |
| 9. | Secretary, DPAR | Invitee |
| 10. | Secretary, Dept. of Law | Invitee |

This empowered committee shall-

a) Approve the works to be taken up under this Dam Rehabilitation & Improvement Project (DRIP) Programme.

b) Sanction and Award contracts regardless of their costs.

c) Engage consultants as per the project agreement with the World Bank.

d) Approve the requirements of staff to implement the project.

e) Create posts for the duration of the project in accordance with the project agreements or to be filled up on contract.

f) Procure vehicles, equipment, furniture and other supplies, consultancy services and procurement of Civil Works as provided in the Project Agreement.

g) To constitute sub-committees such as Project Steering Committee, Tender Evaluation Committee as supportive Committees reporting to Empowered Committee, as and when required for the smooth implementation of the proposed project.

h) Take any other decision for the smooth implementation of the project.

i) Review the progress of the project implementation

This Order is issued with the concurrence of the Finance Department vide Note No. PWD 730 FC-1/10 dated 04-10-2010 and Note No. PWD 73 FC-1/11 dated 09-02-2011 and the Planning Department vide Ltr. No. PD 04 PFE 2010 dated 29-10-2010 and Note No. PD 01 OTM 2011 dated 28-01-2011.

By Order and in the name of the Governor of Karnataka

**B.G. GURUPADASWAMY**

Secretary to Government,

Water Resources Department

PR No. 1426

## ಕಂದಾಯ ಸಚಿವಾಲಯ

### ಸುತ್ತೋಲೆ

ಸಂಖ್ಯೆ: ಕಂಇ/26/ಭೂಸ್ವಾಮ್ಯೆ/2011, ಬೆಂಗಳೂರು, ದಿನಾಂಕ 27–05–2011

**ವಿಷಯ** : ರಾಜ್ಯದಲ್ಲಿ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಲಂ 6(1) ಹಾಗೂ ಐತೀರ್ಪು ಪ್ರಸ್ತಾವನೆಗಳನ್ನು ವಿಳಂಬವಾಗಿ ಕಳುಹಿಸುತ್ತಿರುವ ಬಗ್ಗೆ.

ಭೂಸ್ವಾಧೀನ ಕಾಯ್ದೆ 1894ರಂತೆ ಕಲಂ 6(1–ಎ), ಕಲಂ 6(1) ಮತ್ತು ಕೆಲವು ಐತೀರ್ಪು ಪ್ರಕರಣಗಳನ್ನು ಪರಿಶೀಲಿಸಿ ಸರ್ಕಾರದ ಹಂತದಲ್ಲಿ ಅನುಮೋದನೆ ಕೊಡಬೇಕಾಗಿರುತ್ತದೆ. ಈ ಪ್ರಸ್ತಾವನೆಗಳನ್ನು ವಿಳಂಬ ಮಾಡಿ ಕಳುಹಿಸಬಾರದೆಂದು ಕಾಲಕಾಲಕ್ಕೆ ಅನೇಕ ಬಾರಿ ಸೂಚನೆಗಳನ್ನು ನೀಡಿದ್ದರೂ ಸಹ ಕೆಲವೊಂದು ಪ್ರಕರಣಗಳಲ್ಲಿ ಕಲಂ 6(1) ಮತ್ತು ಐತೀರ್ಪು ಪ್ರಸ್ತಾವನೆಗಳು ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳಿಂದ ತುಂಬ ವಿಳಂಬವಾಗಿ ಅಂದರೆ ಪ್ರಕರಣಗಳು ಅಸಿಂಧುಗೊಳ್ಳಲು ಕೆಲವೇ ದಿನಗಳಿರುವಾಗ ಸರ್ಕಾರಕ್ಕೆ ಬರುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಸರ್ಕಾರಕ್ಕೆ ಬಂದಂತಹ ಪ್ರಸ್ತಾವನೆಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಬೇಕಾಗಿದ್ದು, ಅದನ್ನು ಅನುಮೋದಿಸಲು ಕನಿಷ್ಠ 15 ದಿನಗಳ ಕಾಲಾವಕಾಶವು ಬೇಕಾಗಿರುತ್ತದೆ. ಆದುದರಿಂದ ಕಲಂ 6(1) ಹಾಗೂ ಐತೀರ್ಪು ಅನುಮೋದಿಸುವಂತಹ ಪ್ರಸ್ತಾವನೆಗಳನ್ನು ಪ್ರಕರಣಗಳು ಅಸಿಂಧು"ವಾಗುವ ದಿನಾಂಕಕ್ಕಿಂತ ಕನಿಷ್ಠ 15 ದಿನಗಳಿಗಿಂತ ಮುಂಚಿತವಾಗಿ ಕಡ್ಡಾಯವಾಗಿ ಸರ್ಕಾರಕ್ಕೆ ತಲುಪುವಂತೆ ಕಳುಹಿಸಲು ತಿಳಿಸಲಾಗಿದೆ.

ಒಂದು ವೇಳೆ ಕಲಂ 6(1) ಹಾಗೂ ಐತೀರ್ಪು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ವಿಳಂಬವಾಗಿ ಕಳುಹಿಸಿದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಪರಿಶೀಲಿಸದೆ ಸಂಬಂಧಿಸಿದ ಕಚೇರಿಗೆ ಹಿಂತಿರುಗಿಸಲಾಗುವುದು ಹಾಗೂ ಅಂತಹ ಸನ್ನಿವೇಶದಲ್ಲಿ ಪ್ರಕರಣಗಳು ಅಸಿಂಧುವಾದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು. ಅಲ್ಲದೆ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಕಟಣಾ ವೆಚ್ಚವನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**ಅಶೋಕ ಕುಮಾರ ಸಿ. ಮನೋಲಿ**

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಪಿ.ಆರ್. ನಂ. 1427 ಕಂದಾಯ ಇಲಾಖೆ

## ಆರ್ಥಿಕ ಸಚಿವಾಲಯ

**ವಿಷಯ :** ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ವಿತರಿಸುವ ಕುರಿತು ಉನ್ನತ ಅಧಿಕಾರದ ಸಮಿತಿಯ (High Power Committee) ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 53 ಇಎಫ್‌ಎಲ್ 2009, ದಿನಾಂಕ 09–02–2010.

2. ಅಬಕಾರಿ ಆಯುಕ್ತರ ಪತ್ರ ಸಂಖ್ಯೆ: ಇಸಿಇ/15/ಆರ್‌ಎಸ್‌ಎ/2007, ದಿನಾಂಕ 24–03–2011.

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ಹಂಚಿಕೆ ಮಾಡುವ ಸಂಬಂಧ ಉನ್ನತ ಅಧಿಕಾರದ ಸಮಿತಿ (High Power Committee)ಯನ್ನು ಒಂದು ವರ್ಷದ ಅವಧಿಗೆ ರಚಿಸಲಾಗಿತ್ತು. ಮೇಲೆ ಓದಲಾದ (2)ರ ಪತ್ರದಲ್ಲಿ ಅಬಕಾರಿ ಆಯುಕ್ತರು ಈಗಿರುವ ಸದಸ್ಯರುಗಳನ್ನೊಳಗೊಂಡಂತೆ ಸದರಿ ಸಮಿತಿಯ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ. ಅದರಂತೆ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಆಇ 53 ಇಎಫ್‌ಎಲ್ 2011, ಬೆಂಗಳೂರು, ದಿನಾಂಕ : 10–5–2011**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ಹಂಚಿಕೆ ಮಾಡಲು ಉನ್ನತ ಅಧಿಕಾರದ ಸಮಿತಿ (High Power Committee) ಯನ್ನು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ಈ ಆದೇಶ ಹೊರಡಿಸಿದ ದಿನಾಂಕದಿಂದ ದಿನಾಂಕ 31-03–2012 ರವರೆಗೆ ವಿಸ್ತರಿಸಿ ಆದೇಶಿಸಿದೆ.

| | | |
|---|---|---|
| 1 | ಮಾನ್ಯ ಅಬಕಾರಿ ಸಚಿವರು | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಸದಸ್ಯರು |
| 4 | ಪ್ರಾಧ್ಯಾಪಕರು, ರಾಸಾಯನಿಕ ಇಂಜಿನಿಯರಿಂಗ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು | ಸದಸ್ಯರು |
| 5 | ಡಾ॥ ಸಾಯಿದತ್ತಾ, Head of the Department of Chemical Engineering, NIT-K, Suratkal, Mangalore. | ಸದಸ್ಯರು |
| 6 | ಅಬಕಾರಿ ಆಯುಕ್ತರು, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

ರಾಸಾಯನಿಕ ಘಟಕಗಳಿಂದ ರೆಕ್ಟಿಫೈಡ್ ಸ್ಪಿರಿಟ್/ಸ್ಪಿರಿಟ್/ಡಿನೇಚರ್ಡ್ ಸ್ಪಿರಿಟ್ (ಮದ್ಯಸಾರ) ಹಂಚಿಕೆ ಕೋರಿ ಬರುವ ಪ್ರಸ್ತಾವನೆಗಳನ್ನು ಉನ್ನತ ಮಟ್ಟದ ಸಮಿತಿಯು (High Power Committee) ಪರಿಶೀಲಿಸಿ ಸದರಿ ಘಟಕಗಳಿಗೆ ಮೂಲಭೂತ ಸೌಕರ್ಯ, ಆರ್.ಎಸ್./ಡಿ.ಎಸ್ ಇತ್ಯಾದಿಗಳನ್ನು ಗಮನಿಸಿ, ಅರ್ಹತೆಗನುಸಾರವಾಗಿ ಶಿಫಾರಸ್ಸು ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎಸ್. ಜಿ. ನಾರಾಯಣ)**

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1428 ಆರ್ಥಿಕ ಇಲಾಖೆ (ಅಬಕಾರಿ)

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

**ವಿಷಯ :** ದಿ. ಮೈಸೂರು ಮ್ಯಾಚ್ ಕಂಪೆನಿ ಲಿಮಿಟೆಡ್, ಶಿವಮೊಗ್ಗ ಇವರು ಮೆ. ವೆಸ್ಟರ್ನ್ ಇಂಡಿಯಾ ಫ್ಲೈವುಡ್ಸ್ ಲಿಮಿಟೆಡ್, ಕೇರಳ ಇವರಿಗೆ ಹಣ ಪಾವತಿ ಮಾಡುವ ಬಗ್ಗೆ.

**ಓದಲಾಗಿದೆ :** 1. ಮೆ. ಮೈಸೂರು ಮ್ಯಾಚ್ ಕಂಪೆನಿ ಲಿ., ಶಿವಮೊಗ್ಗ ಇವರಿಂದ ಬಂದಿರುವ ಪತ್ರ ಸಂಖ್ಯೆ: CMD/MMC/Valuation/2010-11. ದಿನಾಂಕ 02–07–2010.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 02–07–2010ರ ಪತ್ರದಲ್ಲಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ದಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, ಶಿವಮೊಗ್ಗ ಇವರು ದಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ ವಿರುದ್ಧ ಮೆ. ವೆಸ್ಟರ್ನ್ ಇಂಡಿಯಾ ಫ್ಲೈವುಡ್ಸ್ ಲಿಮಿಟೆಡ್, ಕೇರಳ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಂತೆ ದಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ ಇವರು ರೂ. 15,19,724–98 (ಹದಿನೈದು ಲಕ್ಷದ ಹತ್ತೊಂಬತ್ತು ಸಾವಿರದ ಏಳುನೂರಾ ಇಪ್ಪತ್ತನಾಲ್ಕು ಮತ್ತು ತೊಂಬತ್ತೆಂಟು ಪೈಸೆಗಳು ಮಾತ್ರ) ಗಳನ್ನು ಮೆ. ವೆಸ್ಟರ್ನ್ ಇಂಡಿಯಾ ಫ್ಲೈವುಡ್ಸ್ ಲಿಮಿಟೆಡ್, ಕೇರಳ ಇವರಿಗೆ ಪಾವತಿಸಬೇಕೆಂದು ತಿಳಿಸಿ, ದಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, ಶಿವಮೊಗ್ಗ ಇದು ಈಗಾಗಲೇ ಕೆಲಸವನ್ನು ಸ್ಥಗಿತಗೊಳಿಸಿರುವುದರಿಂದ ಅದರ ಬ್ಯಾಂಕ್ ಖಾತೆಯಲ್ಲಿ ಯಾವುದೇ ಹಣ ಬಾಕಿ ಇರುವುದಿಲ್ಲವೆಂದೂ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಮೆ. ವೆಸ್ಟರ್ನ್ ಇಂಡಿಯಾ ಫ್ಲೈವುಡ್ಸ್ ಲಿಮಿಟೆಡ್, ಕೇರಳ ಇವರಿಗೆ ಹಣ ಪಾವತಿಸಲು ರೂ. 15.20 ಲಕ್ಷಗಳನ್ನು (ರೂಪಾಯಿಗಳು ಹದಿನೈದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಅಪಜೀ 77 ಎಫ್‌ಪಿಸಿ 2010, ಬೆಂಗಳೂರು, ದಿನಾಂಕ : 18–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, ಶಿವಮೊಗ್ಗ ಇವರು ಮೆ. ವೆಸ್ಟರ್ನ್ ಇಂಡಿಯಾ ಫ್ಲೈವುಡ್ಸ್ ಲಿಮಿಟೆಡ್, ಕೇರಳ ಇವರಿಗೆ ಪಾವತಿಸಲು ರೂ. 15.20 ಲಕ್ಷಗಳನ್ನು (ರೂಪಾಯಿಗಳು ಹದಿನೈದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಕರ್ನಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮಕ್ಕೆ ಸಾಲವಾಗಿ ನೀಡಲು ಹಾಗೂ ಈ ಮೊತ್ತವನ್ನು ದಿ. ಮೈಸೂರು ಮ್ಯಾಚ್ ಕಂಪನಿಯ ಆಸ್ತಿಯ ಮಾರಾಟದ ನಂತರ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಮರುಪಾವತಿಸುವ ಷರತ್ತಿನೊಂದಿಗೆ 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2406–01–001–1–01–051–ಸಾಮಾನ್ಯ ವೆಚ್ಚಗಳು ಅಡಿಯಿಂದ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 520/ವೆಚ್ಚ–5/2011, ದಿನಾಂಕ 25–04–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎ. ವಿ. ರಾಮಕೃಷ್ಣ)**

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1429 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

## COMMERCE & INDUSTRIES SECRETARIAT

### CORRIGENDUM

No. CI/430/SPI/2010, Bangalore, Dated 31-03-2011

**Sub :** Reimbursement of Cental Sales Tax paid on inter-state sale of metro coaches by M/s. BEML Ltd., to Delhi Metro Rail Corporation-adjustment of account-reg.

**Read :** Govt. Order No. CI 430 SPI 2010, dated 31-03-2011

In the Govt. Order No. CI 430 SPI 2010, dated 31-03-2011, in the order portion in second para, please read as **"6852-02-800-0-02-394-(Plan)"** in place of **"6852-02-800-0-43-059-other expenses"(Plan).**

By Order and in the name of the Governor of Karnataka

**A. V. Srinivasa Dikshit**

Desk Officer (Technical Cell)

Commerce & Industries Department

P.R. 1430

## ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

**ವಿಷಯ :** 2010–11ನೇ ಸಾಲಿನ ಕೇಂದ್ರ ಸರ್ಕಾರದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** (1) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಇಪಿ/ಮಾಅನೆ/ಕೆ.ಪಾ 10–11/2010–11, ದಿನಾಂಕ 3–5–2011.

(2) ತೆಂಗಿನ ನಾರಿನ ಮಂಡಳಿ, ಭಾರತ ಸರ್ಕಾರ, ಎಂ.ಎಸ್.ಎಂ.ಇ ಮಂತ್ರಾಲಯ, ಕೊಚ್ಚಿ ಇವರ ಪತ್ರಸಂಖ್ಯೆ: CB/Mkg/2010–11/6/4, ದಿನಾಂಕ 18–4–2011.

**ಪ್ರಸ್ತಾವನೆ :**

**"ಮಾರುಕಟ್ಟೆ ಅಭಿವೃದ್ಧಿ ನೆರವು"** ಕೇಂದ್ರ ಪುರಸ್ಕೃತ ಯೋಜನೆಯನ್ನು 2010–11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾ ಮಂಡಳಿ ನಿಯಮಿತ ಹಾಗೂ ಆರು ಪ್ರಾಥಮಿಕ ತೆಂಗಿನ ನಾರಿನ ಸಹಕಾರ ಸಂಘಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ರಾಜ್ಯದ ಪಾಲು ₹34,26,340/–ಗಳನ್ನು ಲೆಕ್ಕಶೀರ್ಷಿಕೆ 2851–00–106–0–11–059 [ಯೋಜನೆ] ರಡಿ 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಶೇ. 50 ರಷ್ಟು ರಾಜ್ಯದ ಪಾಲು [₹34,26,340/–] ಬಿಡುಗಡೆ ಮಾಡಿದ ನಂತರ, ಈ ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರದ ಪಾಲಿನ ಶೇ. 50 [₹34,26,340/–] ಬಿಡುಗಡೆಗೆ ಸಲ್ಲಿಸಿದ ಪ್ರಸ್ತಾವನೆಯಂತೆ ತೆಂಗಿನ ನಾರಿನ ಮಂಡಳಿ, ಕೊಚ್ಚಿ ಇವರು ಮೇಲೆ ಕ್ರಮಾಂಕ [2] ರಲ್ಲಿ ಓದಲಾದ ಪತ್ರದಲ್ಲಿ ₹34,26,340/– ಅನುದಾನವನ್ನು [D.D. No. 059903, ದಿನಾಂಕ 30–3–2011] ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿರುತ್ತಾರೆ. ಸದರಿ ಮೊತ್ತವನ್ನು SBM, Treasury Branch, Bangalore ನಲ್ಲಿ ಚಲನ್ ನಂ. 10002150 ದಿನಾಂಕ 01–05–2011ರಲ್ಲಿ ರಾಜ್ಯ ಸರ್ಕಾರಕ್ಕೆ ಜಮಾ ಮಾಡಲಾಗಿದೆ. ಆದುದರಿಂದ ಕೇಂದ್ರದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ₹34,26,340/–ಗಳನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2851–00–106–0–11–059 [ಯೋಜನೆ] ರಡಿ ಲಭ್ಯವಿರುವ ಅನುದಾನದಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ ಹಾಗೂ ಆರು ಪ್ರಾಥಮಿಕ ತೆಂಗಿನ ನಾರಿನ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡುವಂತೆ ಶಿಫಾರಸ್ಸು ಮಾಡಿ ತಡೆಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಐ 8 ಸಿಎಸ್‌ಸಿ 2011, ಬೆಂಗಳೂರು, ದಿನಾಂಕ : 28–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2011–12ನೇ ಸಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ಲೆಕ್ಕಶೀರ್ಷಿಕೆ 2851–00–106–0–11–059 [ಯೋಜನೆ] ರಡಿ ಒದಗಿಸಿರುವ ಅನುದಾನದಲ್ಲಿ, 2010–11ನೇ ಸಾಲಿನಲ್ಲಿ ಬಾಕಿ ಇರುವ ಮಾರುಕಟ್ಟೆ ಸಹಾಯಧನದ ಕೇಂದ್ರದ ಪಾಲು ₹34,26,340/–ಗಳನ್ನು [ಮೂವತ್ನಾಲ್ಕು ಲಕ್ಷ ಇಪ್ಪತ್ತಾರು ಸಾವಿರದ ಮೂರುನೂರ ನಲವತ್ತು ರೂಪಾಯಿಗಳು ಮಾತ್ರ) ಈ ಕೆಳಕಂಡಂತೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

₹ಗಳಲ್ಲಿ

| ಕ್ರ. ಸಂ. | ನಿಗಮ/ಸಹಕಾರ ಸಂಘಗಳ ಹೆಸರು | 2010–11ನೇ ಸಾಲಿನ ಕೇಂದ್ರದ ಪಾಲು |
|---|---|---|
| 1 | ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು | 18,25,770 |
| 2 | ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ | 12,96,850 |
| | ಐದು ಪ್ರಾಥಮಿಕ ಸಹಕಾರ ಸಂಘಗಳು<br>1) ತೆಂಗಿನ ನಾರಿನ ಕುಶಲ ಕೈಗಾರಿಕಾ ಸಹಕಾರ ಸಂಘ ನಿಯಮಿತ, ತ್ಯಾಗಟೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ. | 1,47,700 |
| | 2) ಶ್ರೀ ಗುರುಸಿದ್ದೇಶ್ವರ ತೆಂಗಿನ ನಾರಿನ ಸಹಕಾರ ಸಂಘ ನಿಯಮಿತ, ಹಳೆ ಹರ್ಲಾಪುರ, ಗುತ್ತೂರು ಅಂಚೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. | 28,400 |
| | 3) ಮಹಿಳಾ ತೆಂಗಿನ ನಾರಿನ ಕೈಗಾರಿಕಾ ಸಹಕಾರಿ ಸಂಘ ನಿಯಮಿತ, ಹೆಗಡೆ, ಕುಮಟಾ ತಾಲ್ಲೂಕು, ಕಾರವಾರ, ಉತ್ತರ ಕನ್ನಡ ಜಿಲ್ಲೆ. | 26,680 |
| | 4) ತೆಂಗಿನ ನಾರಿನ ಕೈಗಾರಿಕಾ ಕೆಲಸಗಾರರ ಸಹಕಾರ ಸಂಘ ನಿಯಮಿತ, ಕಂದಾವರ, ಮೂಡಲಕಟ್ಟೆ ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ. | 82,170 |
| | 5) ತೆಂಗಿನ ನಾರಿನ ಕೈಗಾರಿಕಾ ಕೆಲಸಗಾರರ ಸಹಕಾರಿ ಸಂಘ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ. | 18,770 |
| | ಒಟ್ಟು | 34,26,340 |

ಹಣ ಸ್ವೀಕೃತಿ ರಶೀತಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಮೇಲುಸಹಿ ಪಡೆದು ಹಣ ಪಡೆಯಲು ಸಂಬಂಧಪಟ್ಟ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರು/ಕಾರ್ಯದರ್ಶಿಗಳಿಗೆ ಅನುಮತಿ ನೀಡಲಾಗಿದೆ.

ಹಣ ವೆಚ್ಚ ಮಾಡಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು [Utilization Certificate] ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರಿಗೆ ಹಾಗೂ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ವಾಕೈ 78 ಆಂಆಸ [1] 2011, ದಿನಾಂಕ 16-5-2011ರ ಮೇರೆಗೆ ಹಾಗೂ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**(ಕೆ. ಆರ್. ಚಂದ್ರಮ್ಮ)**
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ] [ಪ್ರಭಾರ]
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 1431

## ಒಳಾಡಳಿತ ಸಚಿವಾಲಯ

**ವಿಷಯ :** ಪೊಲೀಸ್ ಸುಧಾರಣೆಗಳು-'ಪೊಲೀಸ್ ಸಿಬ್ಬಂದಿ ಮಂಡಲಿ' ಸ್ಥಾಪನೆ-ಕುರಿತು.

**ಓದಲಾಗಿದೆ :** (1) ರಿಟ್ ಅರ್ಜಿ ಸಂಖ್ಯೆ 310/1996-ಶ್ರೀ ಪ್ರಕಾಶ್ ಸಿಂಗ್ ಮತ್ತು ಇತರರು-ವಿರುದ್ಧ-ಭಾರತ ಸರ್ಕಾರ ಮತ್ತು ಇತರರು, ಮೊಕದ್ದಮೆಯಲ್ಲಿ ದಿನಾಂಕ 22-09-2006ರ ಸರ್ವೋಚ್ಚ ನ್ಯಾಯಾಲಯದ ತೀರ್ಪು.

(2) ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ ಲಾ (1) 52/2005, ದಿನಾಂಕ 19-02-2009.

(3) ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009, ದಿನಾಂಕ 24-08-2009

(4) ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ ಸಿಬಿ-4/108/2009-10, ದಿನಾಂಕ 03-05-2011.

**ಪ್ರಸ್ತಾವನೆ :**

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ರಚಿಸಿ ಈ ಕೆಳಕಂಡಂತೆ ಮಂಡಳಿಯ ಸಂಯೋಜನೆಯನ್ನು ಮಾಡಲಾಗಿದೆ.

| | | |
|---|---|---|
| 1. | ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು | ಅಧ್ಯಕ್ಷರು |
| 2. | ಮಹಾ ನಿರ್ದೇಶಕರು, ಗೃಹ ರಕ್ಷಕದಳ | ಸದಸ್ಯರು |
| 3. | ಮಹಾ ನಿರ್ದೇಶಕರು, ಸಿಓಡಿ | ಸದಸ್ಯರು |
| 4. | ಮಹಾ ನಿರ್ದೇಶಕರು, ಪೊಲೀಸ್ ಗೃಹ ನಿರ್ಮಾಣ ನಿಗಮ | ಸದಸ್ಯರು |
| 5. | ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು (ಆಡಳಿತ) | ಸಂಚಾಲಕರು |

ಪ್ರಸ್ತುತ ಡಿಜಿಪಿ, ಪೊಲೀಸ್ ಗೃಹ ನಿರ್ಮಾಣ ನಿಗಮ ಇವರು ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರ ಹುದ್ದೆಯ ಪ್ರಭಾರದಲ್ಲಿರುವುದರಿಂದ ಮಂಡಳಿಯಲ್ಲಿ ಅಧ್ಯಕ್ಷರು ಸೇರಿ ನಾಲ್ಕು ಸದಸ್ಯರು ಮಾತ್ರ ಇರುತ್ತಾರೆ. ಪ್ರಸಕ್ತ ವರ್ಷದ ವರ್ಗಾವಣೆಗಳ ಬಗ್ಗೆ ಮಂಡಳಿಯು ಚರ್ಚಿಸಿ ಇತ್ಯರ್ಥಪಡಿಸಬೇಕಾಗಿರುವುದರಿಂದ ಮಂಡಳಿ ಸಂಯೋಜನೆಯಲ್ಲಿ ಹೆಚ್ಚುವರಿಯಾಗಿ ಡಿಜಿಪಿ, ತರಬೇತಿರವರನ್ನು ಸಹ ಸದಸ್ಯರನ್ನಾಗಿ ನೇಮಿಸಿ ಆದೇಶಿಸಲು ಮೇಲೆ ಓದಲಾದ (4)ರ ಪತ್ರದಲ್ಲಿ ಪ್ರಭಾರ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಒಇ 60 ಪೊಸಇ 2009, ಬೆಂಗಳೂರು, ದಿನಾಂಕ : 28-05-2011**

ಪ್ರಸ್ತಾವನೆಯಲ್ಲಿ ವಿವರಿಸಲಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿಯ ಸಂಯೋಜನೆಯಲ್ಲಿ ಖಾಲಿ ಇರುವ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಹುದ್ದೆಯನ್ನು ತುಂಬುವವರೆಗೆ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ತರಬೇತಿ)ರವರನ್ನು ಹೆಚ್ಚುವರಿ ಸದಸ್ಯರನ್ನಾಗಿ ನೇಮಿಸಿದೆ ಹಾಗೂ ಡಿಜಿ ಮತ್ತು ಐಜಿಪಿ ಹುದ್ದೆಯನ್ನು ಭರ್ತಿ ಮಾಡಿದ ನಂತರ ಹೆಚ್ಚುವರಿ ಸದಸ್ಯರ ನೇಮಕಾತಿ ತಾನಾಗಿಯೇ ರದ್ದಾಗುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**(ಟಿ. ಎನ್. ರವಿಪ್ರಕಾಶ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1432

## ಒಳಾಡಳಿತ ಸಚಿವಾಲಯ

**ವಿಷಯ :** ಶ್ರೀ ಎ. ಟಿ. ಹನುಮಂತರೆಡ್ಡಿ. ಪಿ.ಸಿ. ವಾಹನ ಸಾರಿಗೆ ವಿಭಾಗ, 8ನೇ ಪಡೆ, ಕೆ.ಎಸ್.ಆರ್.ಪಿ., ಶಿವಮೊಗ್ಗ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :** (1) ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, ಕೆ.ಎಸ್.ಆರ್.ಪಿ., 8ನೇ ಪಡೆ, ಇವರ ಆದೇಶ ಸಂಖ್ಯೆ: 31/ಇವಿ-6/ಸಿಬ್ಬಂದಿ)2)/2008-09 (ಓ.ಬಿ. 321/2009-10) ದಿನಾಂಕ 28-8-2009.

(2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು (21)/2009-10, ದಿನಾಂಕ 18-03-10.

(3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 15-4-2010

(4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)/11/2010-11, ದಿನಾಂಕ 03-9-2010.

**ಪ್ರಸ್ತಾವನೆ :**

ಶ್ರೀ ಎ.ಟಿ. ಹನುಮಂತರೆಡ್ಡಿ, ಪಿ.ಸಿ. ವಾಹನ ಸಾರಿಗೆ ವಿಭಾಗ, 8ನೇ ಪಡೆ, ಕೆ.ಎಸ್.ಆರ್.ಪಿ., ಶಿವಮೊಗ್ಗ ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ

ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಎ.ಟಿ. ಹನು ಮಂತರೆಡ್ಡಿ, ಪಿ.ಸಿ.–162, ಕೇಂದ್ರ ದಳ, 8ನೇ ಪಡೆ ಕೆ.ಎಸ್.ಆರ್.ಪಿ., ಶಿವಮೊಗ್ಗ ಆದ ನೀವು ದಿನಾಂಕ 10–6–2008 ರಂದು ರಾತ್ರಿ ಸುಮಾರು 23.00 ಗಂಟೆಯ ಸಮಯದಲ್ಲಿ ದಾವಣಗೆರೆ ವಿಶೇಷ ಹೊರ ಕರ್ತವ್ಯಕ್ಕೆ ವಾಹನ ಸಂಖ್ಯೆ: ಕೆ.ಎ.01 ಜಿ 299 ರೊಂದಿಗೆ ತೆರಳಲು ಪ್ರಭಾರ ಸುಬೇದಾರ್ ಮೇಜರ್ ಹಾಗೂ ವಾಹನ ಸಾರಿಗೆ ಅಧಿಕಾರಿಯವರು ನೀಡಿರುವ ಆದೇಶವನ್ನು ಪಾಲಿಸದೆ ಉಲ್ಲಂಘಿಸಿ ಮೇಲಾಧಿಕಾರಿಗಳೊಂದಿಗೆ ಕರ್ತವ್ಯದ ಆದೇಶವನ್ನು ಪಾಲಿಸದೆ ಉದ್ಧಟತನದಿಂದ ಸವಾಲು ಹಾಕಿ ಯಾವುದೇ ವಿಧೇಯತೆ, ಶಿಸ್ತು, ಸಂಯಮಗಳಿಲ್ಲದೆ ಮಿತಿ ಮೀರಿ ದುರ್ನಡತೆಯಿಂದ ಕರ್ತವ್ಯವನ್ನು ನಿರ್ಲಕ್ಷಿಸಿ ಬೇಜವಾಬ್ದಾರಿ ಮತ್ತು ಅಶಿಸ್ತು ಪ್ರದರ್ಶಿಸಿರುವಿರಿ.

ನೀವುಗಳು ದಿನಾಂಕ 12–6–2008 ರಂದು ಬೆಳಿಗ್ಗೆ ಸುಮಾರು 09–00 ಗಂಟೆಗೆ ಪಡೆಯಲ್ಲಿ ಸಿಬ್ಬಂದಿಯವರ ಕೊರತೆಯಿಂದಾಗಿ ವಾಹನ ಸಾರಿಗೆ ವಿಭಾಗದಲ್ಲಿ ಪಹರೆ ಕರ್ತವ್ಯದಲ್ಲಿದ್ದ ಸಿಬ್ಬಂದಿಯವರನ್ನು ಬದಲಾಯಿಸಿ ಎಂ.ಟಿ. ಪಹರೆ ಕರ್ತವ್ಯ ನಿರ್ವಹಿಸಲು ನಿರ್ದೇಶಿಸಿರುವ ಆದೇಶವನ್ನು ತಿರಸ್ಕರಿಸಿ ಕರ್ತವ್ಯವನ್ನು ನಿರ್ವಹಿಸದೇ ಬೇಜವಾಬ್ದಾರಿತನದಿಂದ ಆದೇಶ ಉಲ್ಲಂಘನೆ ಮಾಡಿ ದಿನಾಂಕ 12–6–2008 ರಿಂದ 6–7–2008ರ ವರೆಗೆ ಒಟ್ಟು 25 ದಿನಗಳು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ತೀವ್ರ ಕರ್ತವ್ಯ ನಿರ್ಲಕ್ಷ್ಯತೆ ಬೇಜವಾಬ್ದಾರಿ ಹಾಗೂ ಅಶಿಸ್ತು ಪ್ರದರ್ಶಿಸಿ ಕರ್ತವ್ಯ ಲೋಪವೆಸಗಿರುತ್ತಾರೆ. ಆದ್ದರಿಂದ ಆರೋಪಿತರಿಗೆ ಕರ್ತವ್ಯಕ್ಕೆ ಮರಳಿ ಹಾಜರಾಗುವಂತೆ ಸೂಚಿಸಿ ಈ ಕಛೇರಿ ಪತ್ರ ಸಂಖ್ಯೆ ಕರ್ತವ್ಯ ಪರಿತ್ಯಾಗ ಎಚ್ಚರಿಕೆ ನೋಟಿಸ್ ಸಂ. 31/ಡಿ.ಇ/ಸಿಬ್ಬಂದಿ–2/2008–09 ದಿನಾಂಕ 03–7–2008ರ ಮೂಲಕ ಹೊರಡಿಸಿದ ಕರ್ತವ್ಯ ಪರಿತ್ಯಾಗ ಎಚ್ಚರಿಕೆ ನೋಟಿಸನ್ನು ದಿನಾಂಕ 04–7–2008 ರಂದು ಸ್ವೀಕರಿಸಿ ದಿನಾಂಕ 07–7–2008 ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ನೀವು ಒಟ್ಟು 25 ದಿನಗಳು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ತೀವ್ರ ಕರ್ತವ್ಯ ನಿರ್ಲಕ್ಷತೆ, ಬೇಜವಾಬ್ದಾರಿಯಿಂದ ವರ್ತಿಸಿ ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯ ಉಚಿತವಲ್ಲದ ರೀತಿಯಲ್ಲಿ ವರ್ತಿಸಿ ಪೊಲೀಸ್ ಇಲಾಖೆಯಲ್ಲಿನ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯಲೋಪವೆಸಗಿ ತೀವ್ರ ಅಶಿಸ್ತು ಪ್ರದರ್ಶಿಸಿರುವಿರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಕಮಾಂಡೆಂಟ್, ಕೆ.ಎಸ್.ಆರ್.ಪಿ., 8ನೇ ಪಡೆ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 28–8–2009ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ವೇತನಕ್ಕೆ 1 ವರ್ಷದವರೆಗೆ ಭವಿಷ್ಯದ ಮೇಲೆ ಪರಿಣಾಮ ಬೀರದಂತೆ ನಿಗದಿ ಪಡಿಸಿದ್ದಾರೆ. ದಿನಾಂಕ 12–6–08 ರಿಂದ 06–07–2008ರ ವರೆಗೆ 25 ದಿನಗಳು ವೇತನ ರಹಿತ ರಜೆ ಎಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು. ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ 18–03–10ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷ್ಯತೆ ಹಾಗೂ ತೀವ್ರ ಅಶಿಸ್ತು ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಒಇ 61 ಪೊಸಿಅ 2010, ಬೆಂಗಳೂರು, ದಿನಾಂಕ 26–05–2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ.ಟಿ. ಹನುಮಂತರೆಡ್ಡಿ, ಪಿ.ಸಿ. ವಾಹನ ಸಾರಿಗೆ ವಿಭಾಗ, 8ನೇ ಪಡೆ, ಕೆ.ಎಸ್.ಆರ್.ಪಿ., ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಟಿ. ಎನ್. ರವಿಪ್ರಕಾಶ್)**

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1433

## ಸಮಾಜ ಕಲ್ಯಾಣ ಸಚಿವಾಲಯ

**ವಿಷಯ :** 2011–12ನೇ ಸಾಲಿನಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾರ್ಯನಿರ್ವಹಣೆಗೆ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** 1. ಪತ್ರ ಸಂಖ್ಯೆ : ಕರಾಹಿಂವಆ/ಲೇಶಾ/ಸಿಆರ್–01/2011–12, ದಿನಾಂಕ 13–04–2011, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು ಇವರಿಂದ.

**ಪ್ರಸ್ತಾವನೆ :**

ಮೇಲೆ ಓದಲಾದ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ರವರು 2011–12ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವೇತನ ಹಾಗೂ ಕಾರ್ಯನಿರ್ವಹಣೆಗಾಗಿ ಯೋಜನೇತರ ಲೆಕ್ಕಶೀರ್ಷಿಕೆ 2225-03–800–0–01–101 ಸಹಾಯಾನುದಾನ ಅಡಿಯಲ್ಲಿ ₹ 80.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಸದರಿ ಮೊತ್ತದಲ್ಲಿ ಮೊದಲನೆ ಕಂತಾಗಿ ₹ 20.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಆಯೋಗದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 85 ಬಿಸಿಎ 2011, ಬೆಂಗಳೂರು, ದಿನಾಂಕ 24ನೇ ಮೇ 2011**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವೇತನ ಹಾಗೂ ಕಾರ್ಯನಿರ್ವಹಣೆಗಾಗಿ ಯೋಜನೇತರ ಲೆಕ್ಕಶೀರ್ಷಿಕೆ 2225-03–800–0–01–101 ಸಹಾಯಾನುದಾನ (ಯೋಜನೇತರ) ಅಡಿಯಲ್ಲಿ ₹ 80.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ಮೊದಲನೆ ಕಂತಾಗಿ ₹ 20.00 ಲಕ್ಷಗಳನ್ನು (ಇಪ್ಪತ್ತು ಲಕ್ಷಗಳು ಮಾತ್ರ) ದಿನಾಂಕ 31–07–2011 ರವರೆವಿಗೆ ವೆಚ್ಚ ಭರಿಸುವ ನಿಬಂಧನೆಗೆ ಒಳಪಟ್ಟು

ಸದರಿ ಮೊತ್ತವನ್ನು ಯೋಜನೇತರ ಲೆಕ್ಕಶೀರ್ಷಿಕೆ 2225–03–800–0–01–101 ಸಹಾಯಾನುದಾನ (ಯೋಜನೇತರ) ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಮೇಲ್ಕಂಡ ಅನುದಾನ ವೆಚ್ಚಕ್ಕೆ ಸಂಬಂಧಪಟ್ಟ ಬಿಲ್ಲುಗಳಿಗೆ ಮೇಲು ರುಜು ಮಾಡಲು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. ಇವರಿಗೆ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008ರ ಷರತ್ತುಗಳನ್ವಯ ಹಾಗೂ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ : ಎಫ್‌ಡಿ 4 ಬಿಪಿಇ 2010, ದಿನಾಂಕ 31–03–2010 ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಎಂ.ಎಂ. ಬಾಟಿ,**
ಸರ್ಕಾರದ ಅಧೀನ ಕಾರ್ಯದರ್ಶಿ–3,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 1434

## ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

**ವಿಷಯ :** ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಹೊಸಪೇಟೆ, ಇಲ್ಲಿಗೆ ಆರೋಗ್ಯ ನಿರೀಕ್ಷಕರ ಹುದ್ದೆಯನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರಿ ಆದೇಶ ಸಂಖ್ಯೆ : ಕಸಂವಾಪ್ರ 253 ಕೆಎಂಯು 2007, ದಿನಾಂಕ 28–05–2008.

2. ದಿನಾಂಕ 12–10–2010 ರಂದು ಕೊನೆಗೊಂಡ ಪತ್ರ ಸಂ : ಹವಿಪಪ್ರನಿಪಾ/ಹೊ/18/15/2/ 2009–10/923.

**ಪ್ರಸ್ತಾವನೆ :**

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಈ ಕೆಳಕಂಡ 17 ಹುದ್ದೆಗಳನ್ನು ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸೃಜಿಸಲಾಗಿದೆ :–

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ಅಧೀಕ್ಷಕರು | 1 |
| 2 | ಪ್ರಥಮ ದರ್ಜೆ ಸಹಾಯಕರು | 2 |
| 3 | ವಾಹನ ಚಾಲಕ | 2 |
| 4 | ಸಿವಿಲ್ ಇಂಜಿನಿಯರ್ | 2 |
| 5 | ಸರ್ವೇಯರ್ಸ್ | 2 |
| 6 | ಯೋಜನಾ ವ್ಯವಸ್ಥಾಪಕರು | 1 |
| 7 | ಸಂರಕ್ಷಣಾ ವಾಸ್ತುಶಿಲ್ಪಿ | 1 |
| 8 | ವಾಸ್ತುಶಿಲ್ಪಿ | 1 |
| 9 | ಆರ್ಕಿಯಾಲಜಿಸ್ಟ್ | 1 |
| 10 | ಸಾಂಸ್ಕೃತಿಕ ಸಮನ್ವಯ ಅಧಿಕಾರಿ | 1 |
| 11 | ಸಾಮಾಜಿಕ ಸಮನ್ವಯ ಅಧಿಕಾರಿ | 1 |
| 12 | ಜಿಐಎಸ್ ವಿಶ್ಲೇಷಕರು | 1 |
| 13 | ಗ್ರಂಥಪಾಲಕರು | 1 |
| **ಒಟ್ಟು** | | **17** |

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಘನತ್ಯಾಜ್ಯ ವಸ್ತುಗಳ ನಿರ್ವಹಣಾ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ನಿರ್ವಹಣೆ, ಚರಂಡಿಗಳ ನಿರ್ವಹಣೆ, ಸಾಂಕ್ರಾಮಿಕ ಹಾಗೂ ಸೋಂಕು ರೋಗ ನಿಯಂತ್ರಣ, ಶುದ್ಧ ಕುಡಿಯುವ ನೀರಿನ ಪೂರೈಕೆ, ಬಿಡಾಡಿ ದನ/ನಾಯಿ/ಹಂದಿಗಳ ನಿಯಂತ್ರಣ ರಸ್ತೆಗಳ ಕಸಗುಡಿಸುವ ಹಾಗೂ ಹಂಪಿಗೆ ಬರುವ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಶೌಚಾಲಯಗಳನ್ನು ನಿರ್ಮಿಸುವ ಯೋಜನೆಯನ್ನು ಸಹ ಹಮ್ಮಿಕೊಂಡಿದ್ದು, ಈ ಎಲ್ಲಾ ಯೋಜನೆಗಳ ಮೇಲ್ವಿಚಾರಣೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡಲು ಪ್ರಾಧಿಕಾರಕ್ಕೆ ಎರಡು (2) ಆರೋಗ್ಯ ನಿರೀಕ್ಷಕರ ಹುದ್ದೆ ಅವಶ್ಯವಿರುವುದರಿಂದ ಪ್ರಾಧಿಕಾರಕ್ಕೆ ಮಂಜೂರಾದ 17 ಹುದ್ದೆಗಳಲ್ಲಿ ಅಧೀಕ್ಷಕರು ಹಾಗೂ ಸಾಂಸ್ಕೃತಿಕ ಸಮನ್ವಯ ಅಧಿಕಾರಿ ಹುದ್ದೆಗಳ ಬದಲಾಗಿ 2 ಆರೋಗ್ಯ ನಿರೀಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವಂತೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 104 ಕೆಎಂಯು 2010, ಬೆಂಗಳೂರು, ದಿನಾಂಕ 27ನೇ ಮೇ 2011**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಮಂಜೂರಾಗಿರುವ ಒಂದು ಸಾಂಸ್ಕೃತಿಕ ಸಮನ್ವಯ ಅಧಿಕಾರಿ ಹುದ್ದೆಯನ್ನು ರದ್ದುಪಡಿಸಿ ಒಂದು ಆರೋಗ್ಯ ನಿರೀಕ್ಷಕರ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೃಜಿಸಲಾಗಿದೆ.

ಈ ಹುದ್ದೆಯನ್ನು ನಿಯೋಜನೆ ಮೇಲೆ ಮಾತ್ರ ಭರ್ತಿ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 404 ವೆಚ್ಚ–7/2011, ದಿನಾಂಕ 09–05–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಹೆಚ್.ವಿ. ರಾಮಚಂದ್ರರಾವ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1435 ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ. (ಆಡಳಿತ ಕನ್ನಡ) (ಪ್ರ).

## ವಸತಿ ಸಚಿವಾಲಯ

**ವಿಷಯ :** ಕೇಂದ್ರ ಪುರಸ್ಕೃತ ನರ್ಮ್ ಯೋಜನೆಯ ಐಹೆಚ್‌ಎಸ್‌ಡಿಪಿ ಯೋಜನೆ – ಅನುದಾನ ಬಿಡುಗಡೆ ಬಗ್ಗೆ.

**ಓದಲಾಗಿದೆ :** 1. ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರ ಪತ್ರಗಳ ಸಂಖ್ಯೆ : ಕಕೊನಿಮ/ ಲೆ.ಪ.ಶಾ/ನರ್ಮ್/ ಐಹೆಚ್‌ಎಸ್‌ಡಿಪಿ/2011–12, ದಿನಾಂಕ 28–4–2011.
2. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ :
   1. ಎಫ್‌ಡಿ 13 ಬಿಜಿಎಲ್ 2010, ದಿನಾಂಕ 25–01–2011.
   2. ಎಫ್‌ಡಿ 13 ಬಿಜಿಎಲ್ 2010, ದಿನಾಂಕ 11–03–2011.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ (IHSDP) ರಾಜ್ಯಾದ್ಯಂತ ವಿವಿಧ 25 ನಗರ ಪಟ್ಟಣಗಳಲ್ಲಿ ಮನೆಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ 2ನೇ ಕಂತಿನ ಅನುದಾನದ ಶೇಕಡ 50% ರಷ್ಟು ಅನುದಾನವನ್ನು ಮೇಲೆ ಉಲ್ಲೇಖ (2) ರಲ್ಲಿ ತಿಳಿಸಲಾಗಿರುವ ಜಮಾ ದೃಢೀಕರಣ ಪತ್ರಗಳಲ್ಲಿ ಕ್ರಮವಾಗಿ ರೂ. 508.84 ಮತ್ತು ರೂ.1272.93 ಒಟ್ಟು 1781.77 ಲಕ್ಷಗಳನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತವು 14 ವಿವಿಧ ನಗರ/ಪಟ್ಟಣಗಳಿಗೆ (ಬಸವಕಲ್ಯಾಣ, ಬಳ್ಳಾರಿ, ಹಿರಿಯೂರು, ಕೊಪ್ಪಳ, ಸವದತ್ತಿ, ಶಹಪುರ, ಬೆಳಗಾಂ, ಗದಗ–ಬೆಟಗೇರಿ, ಭಾಲ್ಕಿ, ಗಜೇಂದ್ರಗಡ, ಗುಲ್ಬರ್ಗಾ, ಹಾಸನ, ಹೊಳೆನರಸೀಪುರ, ಕಡೂರು) ಸಂಬಂಧಿಸಿದಂತೆ (ಕೇಂದ್ರದ ಪಾಲಿನ ಶೇಕಡ 50% 2ನೇ ಬಾಕಿ ಕಂತು) ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಮೊತ್ತ ಸೇರಿದಂತೆ ರಾಜ್ಯ ಸರ್ಕಾರದ ವಂತಿಗೆಯನ್ನೂ ಸೇರಿಸಿ ಒಟ್ಟಾರೆ 3143.22 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಇ 12 ಕೊಮಂಲೆ 2009, ಬೆಂಗಳೂರು, ದಿನಾಂಕ 26ನೇ ಮೇ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಐಹೆಚ್‌ಎಸ್‌ಡಿಪಿ ಒಂದನೇ ಹಂತದ ಯೋಜನೆಯಡಿಯಲ್ಲಿ 14 ನಗರ/ಪಟ್ಟಣಗಳಿಗೆ ಕೇಂದ್ರದ ಪಾಲಿನ ಶೇಕಡ 50% 2ನೇ ಬಾಕಿ ಕಂತು (ರೂ. 508.84+ರೂ.1272.93) ರೂ. 1781.77 ಲಕ್ಷಗಳನ್ನು (ರೂಪಾಯಿ ಹದಿನೇಳು ಕೋಟಿ ಎಂಭತ್ತೊಂದು ಲಕ್ಷ ಎಪ್ಪತ್ತೇಳು ಸಾವಿರ ಮಾತ್ರ) ಬಿಡುಗಡೆ ಮಾಡಿದ್ದು, ಸದರಿ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2217–04–191–2–03 ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಕಾಲಕಾಲಕ್ಕೆ ಕೇಂದ್ರದಿಂದ ಹೊರಡಿಸುವ ಸೂಚನೆ, ಮಾರ್ಗಸೂಚನೆ, ಕೇಂದ್ರ ಸಿಎಸ್‌ಸಿ ಸಭೆಯ ನಡವಳಿಯಲ್ಲಿ ನೀಡಿರುವ ಸೂಚನೆ, ಎಸ್‌ಎಲ್‌ಇಸಿ (ಐಹೆಚ್‌ಎಸ್‌ಡಿಪಿ) ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕೆಂದು ಸೂಚಿಸಲಾಗಿದೆ.

1. ಈ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
2. ಫಲಾನುಭವಿಗಳಿಂದ ವಂತಿಕೆಯು ನಿಯಮಿತವಾಗಿ ಪಾವತಿಯಾಗುವಂತೆ ಕ್ರಮ ವಹಿಸತಕ್ಕದ್ದು.
3. ಯೋಜನೆಯ ಅನುಷ್ಠಾನದ ಹಂತದ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ರಾಜ್ಯ ಸರ್ಕಾರಕ್ಕೆ/ಕೇಂದ್ರ ಸರ್ಕಾರಕ್ಕೆ ನೀಡತಕ್ಕದ್ದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
5. ಸರ್ಕಾರಕ್ಕೆ ಆಡಿಟ್ ವರದಿಯನ್ನು ನಿಗದಿತ ಸಮಯಕ್ಕೆ ಸಲ್ಲಿಸತಕ್ಕದ್ದು.
6. ನಿಗದಿ ಅವಧಿಯೊಳಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು, ವಸತಿ ಇಲಾಖೆಯ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 282 ವೆಚ್ಚ–9/2011, ದಿನಾಂಕ 21–05–2011 ರ ಸೂಚನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಜಿ.ಆರ್. ನಾಗರಾಜ,**
ಪಿ.ಆರ್. 1436 ಪೀಠಾಧಿಕಾರಿ–4, ವಸತಿ ಇಲಾಖೆ.

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

**ವಿಷಯ :** 2011–12ನೇ ಸಾಲಿನಲ್ಲಿ ಮಂಗಳೂರು, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ಒಂದು ನೂತನ ತಾರಾಲಯ (Planetarium) ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರಿ ಆದೇಶ ಸಂಖ್ಯೆ : ವಿಯಇ 189 ವಿತ್ರಮ 2010, ದಿನಾಂಕ 19–03–2011.
2. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅಧ್ಯಕ್ಷರು, ಮಂಗಳೂರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ಇವರ ಅ.ಸ.ಪತ್ರ ಸಂಖ್ಯೆ : ಪ್ರಾವಿಕೇ/ವಿವ–115/ತಾರಾಲಯ/ 2009–10, ದಿನಾಂಕ 23–05–2011.
3. ಸರ್ಕಾರಿ ಆದೇಶ ಸಂಖ್ಯೆ : ವಿಯಇ 182 ವಿತ್ರಮ 2009, ದಿನಾಂಕ 09–02–2011.
4. ಸರ್ಕಾರಿ ಆದೇಶ ಸಂಖ್ಯೆ : ವಿಯಇ 182 ವಿತ್ರಮ 2009, ದಿನಾಂಕ 23–03–2011.

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರಿಸಿ, 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425–60–200–0–20

(101) (ಯೋ) ಜಿಲ್ಲಾ ವಿಜ್ಞಾನ ಕೇಂದ್ರಗಳಿಗೆ ಸಹಾಯಾನುದಾನವಾಗಿ ಒಟ್ಟು ರೂ. 560.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಇದರ ಪೈಕಿ, ಮಂಗಳೂರಿನ ಪಿಲಿಕುಳದಲ್ಲಿ ನೂತನ ತಾರಾಲಯ ಸ್ಥಾಪಿಸಲು ರೂ.500.00 ಲಕ್ಷಗಳನ್ನು ಕಲ್ಪಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅಧ್ಯಕ್ಷರು, ಮಂಗಳೂರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ಇವರ ಅರೆ ಸರ್ಕಾರ ಪತ್ರದಲ್ಲಿ ನೂತನ ತಾರಾಲಯ ಸ್ಥಾಪನೆ ಕುರಿತು ಪೂರ್ವಭಾವಿ ಕೆಲಸಗಳಾದ ಜಾಗತಿಕ ಟೆಂಡರ್ ಕರೆಯುವಿಕೆ, ಕಟ್ಟಡ ವಿನ್ಯಾಸ ಅಂತಿಮಗೊಳಿಸಿ ಅದರ ಟೆಂಡರ್ ಕರೆಯುವುದು ಇತ್ಯಾದಿ ಕೆಲಸಗಳನ್ನು ಪ್ರಾರಂಭಿಸಬೇಕಾಗಿದೆ. ಇದನ್ನು ಪ್ರಾರಂಭಿಸಬೇಕಾದಲ್ಲಿ ಒಟ್ಟು ಯೋಜನೆಯ ಕನಿಷ್ಠ 1/3 ಮೊತ್ತವಾದರೂ ಬೇಕಾಗುತ್ತದೆ. ಪ್ರಸಕ್ತ ಸಾಲಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಪಾಲಿನ ಮೊತ್ತವಾದ ರೂ.1.50 ಕೋಟಿಗಳನ್ನು ಪ್ರಸಕ್ತ ವರ್ಷದ ಅಂತ್ಯದೊಳಗೆ ಪೂರ್ಣವಾಗಿ ಶೇಖರಿಸಿಕೊಳ್ಳುವ ಷರತ್ತಿಗೊಳಪಟ್ಟು, ಸರ್ಕಾರದಿಂದ ಪ್ರಸಕ್ತ ವರ್ಷ ಬಿಡುಗಡೆ ಮಾಡಬೇಕಾದ ರೂ.5.00 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ಆದೇಶದಲ್ಲಿ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ವಿಜ್ಞಾನ ಕೇಂದ್ರದ ಆವರಣದಲ್ಲಿ ರೂ.15.50 ಕೋಟಿಗಳ ವೆಚ್ಚದಲ್ಲಿ ನೂತನ ತಾರಾಲಯ (Planetarium) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೇಲೆ (4)ರಲ್ಲಿ ಓದಲಾದ ಆದೇಶದಲ್ಲಿ 2010-11ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 1.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

2011-12ನೇ ಸಾಲಿಗೆ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ನೂತನ ತಾರಾಲಯ ಸ್ಥಾಪನೆಗಾಗಿ ಲೆಕ್ಕ ಶೀರ್ಷಿಕೆ 3425-60-200-0-20 (101) (ಯೋ) ಅಡಿಯಲ್ಲಿ ರೂ. 5.00 ಕೋಟಿಗಳ ಅನುದಾನವನ್ನು ಕಾಯ್ದಿರಿಸಲಾಗಿದೆ. ಮೇಲೆ (2) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅಧ್ಯಕ್ಷರು, ಮಂಗಳೂರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಿಯಇ 38 ವಿತ್ರಮ 2011, ಬೆಂಗಳೂರು, ದಿನಾಂಕ 27-05-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ ವತಿಯಿಂದ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ನೂತನ ತಾರಾಲಯವನ್ನು (Planetarium) ಸ್ಥಾಪಿಸಲು 2011-12ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಅನುದಾನದ ಮೊತ್ತ ರೂ. 5.00 ಕೋಟಿಗಳಲ್ಲಿ ಮೊದಲನೇ ಕಂತಾಗಿ ರೂ.1.00 ಕೋಟಿಗಳ (ರೂ. ಒಂದು ಕೋಟಿ ಮಾತ್ರ) ಅನುದಾನವನ್ನು ಸದಸ್ಯ-ಕಾರ್ಯದರ್ಶಿ, ಪಿಲಿಕುಳ, ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ, ಮಂಗಳೂರು ಇವರಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮಂಜೂರು ಮಾಡಿದೆ.

1) ಈ ಅನುದಾನವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ 3425-60-200-0-20- ಜಿಲ್ಲಾ ವಿಜ್ಞಾನ ಕೇಂದ್ರಗಳು 101 ಸಹಾಯಾನುದಾನ (ಯೋಜನೆ) ಇದರಡಿ ಭರಿಸತಕ್ಕದ್ದು.
2) ಸದಸ್ಯ-ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ, ಮಂಗಳೂರು ಇವರು ಸ್ವೀಕೃತ ರಸೀದಿಯಲ್ಲಿ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿ ಹಾಗೂ ಪೀಠಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಣ ಸೆಳೆಯಬಹುದು.
3) ಈಗ ಬಿಡುಗಡೆ ಮಾಡಿದ ಹಣವನ್ನು ಉದ್ದೇಶಿತ ಯೋಜನೆಗೆ ಮಾತ್ರ ಉಪಯೋಗಿಸತಕ್ಕದ್ದು.
4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಲೆಕ್ಕಪರಿಶೋಧಕರಿಂದ ಪರೀಕ್ಷಿಸಲ್ಪಟ್ಟ ಲೆಕ್ಕ ಪತ್ರಗಳ ಉಪಯೋಗತಾ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
5) ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚಾಗದ ಬಾಬ್ತು ಉಳಿಸಿಕೊಂಡಲ್ಲಿ, ಅದನ್ನು ಸರ್ಕಾರಕ್ಕೆ ಪಾವತಿಸತಕ್ಕದ್ದು, ಇಲ್ಲವಾದಲ್ಲಿ ಅನುದಾನವನ್ನು ಬಳಸದೆ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಪಕ್ಷದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು.
6) ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದಲ್ಲಿ ತಪ್ಪದೇ ಒದಗಿಸತಕ್ಕದ್ದು.
7) ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವು ನೂತನ ತಾರಾಲಯ ಸ್ಥಾಪನೆಗಾಗಿ ತನ್ನ ಪಾಲಿನ ಮೊತ್ತ ರೂ.1.50 ಕೋಟಿಗಳನ್ನು 2011-12ನೇ ಸಾಲಿಗೆ ಶೇಖರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : FD 1 TFP 2008, ದಿನಾಂಕ 16.05.2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಕೆ. ಭಾನುಮತಿ,**
ಪೀಠಾಧಿಕಾರಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 1437

## ಕಂದಾಯ ಸಚಿವಾಲಯ

**ವಿಷಯ :** ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಿ.ಸ. ನಂ. 69 ರಲ್ಲಿನ 1.35 ಎಕರೆ ಜಮೀನನ್ನು ಶ್ರೀ ನಿರ್ಮಲಾನಂದ ಟ್ರಸ್ಟ್ ಇವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ :**
1. ಶ್ರೀ ನಿರ್ಮಲಾನಂದಾಶ್ರಮ ಟ್ರಸ್ಟ್ (ರಿ) ಇವರ ಪತ್ರದ ದಿನಾಂಕ 05-09-2008.
2. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ : ಎಲ್‌ಎನ್‌ಡಿ (ಎಸ್) ಸಿಆರ್ 301/08-09, ದಿನಾಂಕ 30-04-2009 ಮತ್ತು 25-09-2009.
3. ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ ಟಿಎಫ್/10-11, ದಿನಾಂಕ 26-07-2010.
4. ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 708 ಎಲ್‌ಜಿಬಿ 2008, ದಿನಾಂಕ 18-05-2011.

**ಪ್ರಸ್ತಾವನೆ :**

ಶ್ರೀ ನಿರ್ಮಲಾನಂದ ಟ್ರಸ್ಟ್ (ರಿ) ಇವರು ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ದಿನಾಂಕ 05-09-2008ರ ಮನವಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ರಿ.ಸ.ನಂ. 69ರಲ್ಲಿನ 1.35 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಕೋರಿರುತ್ತಾರೆ. ಸದರಿ ಟ್ರಸ್ಟ್‌ನವರು ಈ ಜಮೀನಿನಲ್ಲಿ ಕಳೆದ 22 ವರ್ಷಗಳಿಂದ ಸ್ವಾಧೀನದಲ್ಲಿದ್ದು, ಸುಮಾರು ರೂ. 1.5 ಕೋಟಿಗಳಷ್ಟು ಖರ್ಚು ಮಾಡಿ ಈ ಜಮೀನಿನಲ್ಲಿ ಸಂಸ್ಕೃತ, ಸಂಗೀತ ಶಾಲೆ, ಯೋಗ ತರಗತಿಗಳನ್ನು ನಡೆಸುತ್ತಿದ್ದು, ಉಚಿತ ಹಾಸ್ಟೆಲ್, ಅನಾಥಾಶ್ರಮ

ವೃದ್ಧಾಶ್ರಮ ಇತ್ಯಾದಿಗಳನ್ನು ನಿರ್ಮಿಸಿ ಇನ್ನು ಹೆಚ್ಚಿನ ಸಮಾಜ ಸೇವೆಯನ್ನು ನಡೆಸುವ ಸಲುವಾಗಿ ಈ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

2. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ 30-04-2009 ಮತ್ತು 25-09-2009ರ ಪತ್ರಗಳಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸ.ನಂ. 69ರಲ್ಲಿ ಒಟ್ಟು 111.03 ಎಕರೆ ಜಮೀನಿದ್ದು, ಸರ್ಕಾರಿ ಮುಫತ್ತ್ ಕಾವಲ್ ಎಂದು ವರ್ಗೀಕೃತವಾಗಿರುವುದಾಗಿ ತಿಳಿಸಿರುತ್ತಾರೆ. ಈ ಪೈಕಿ ಈಗಾಗಲೇ ಹಲವು ಸಂಘ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಹಾಗೂ ದರಖಾಸ್ತಿನಲ್ಲಿ ಕೆಲವರಿಗೆ ಮಂಜೂರು ಮಾಡಿರುವುದಾಗಿ ತಿಳಿಸುತ್ತಾ, ಸದರಿ ಜಮೀನು ಗೋಮಾಳಕ್ಕೆ ಸೂಕ್ತವಾದ ಜಮೀನಾಗಿರುವುದಿಲ್ಲ ಮತ್ತು ಇದು ಕಲ್ಲುಬಂಡೆ ಮತ್ತು ಸಣ್ಣ ಗುಡ್ಡಗಳಿಂದ ಕೂಡಿದೆ ಎಂದು ವರದಿ ಮಾಡಿರುತ್ತಾರೆ. ಸದರಿ ಜಮೀನಿನ ಮಾರ್ಗಸೂಚಿ ಬೆಲೆ ರೂ. 50 ಲಕ್ಷಗಳು ಮತ್ತು ಪ್ರಚಲಿತ ಮಾರುಕಟ್ಟೆ ಬೆಲೆ ರೂ. 1 ಕೋಟಿ ಇರುತ್ತದೆ ಹಾಗೂ ಇದು ನಗರ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ವರದಿ ಮಾಡಿರುತ್ತಾರೆ. ಸದರಿ ಟ್ರಸ್ಟ್ 2002 ರಲ್ಲಿ ನೋಂದಣಿಯಾಗಿದ್ದು, ಸದರಿ ಸಂಸ್ಥೆಯ ಆರ್ಥಿಕ ಪ್ರಗತಿ ಪರಿಶೀಲನೆ ಆಡಿಟ್ ವರದಿಗಳನ್ನು ಸಲ್ಲಿಸಿರುತ್ತಾರೆ. ಸ್ಥಳೀಯ ಗ್ರಾಮಸ್ಥರು ಈ ಜಮೀನನ್ನು ಸದರಿ ಸಂಸ್ಥೆಗೆ ಸಮಾಜ ಸೇವೆ ನಡೆಸಲು ನೀಡುವ ಬಗ್ಗೆ ಯಾವುದೇ ವಿರೋಧವಿರುವುದಿಲ್ಲವೆಂದು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆ.

3. ಈ ಬಗ್ಗೆ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ 26.07.2010ರ ಪತ್ರದಲ್ಲಿ ಈ ಬಗ್ಗೆ ವರದಿಯನ್ನು ಸಲ್ಲಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸ.ನಂ. 69ರಲ್ಲಿರುವ 1.35 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಮಾಡಿರುವ ಶಿಫಾರಸ್ಸಿನಂತೆ, ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯಂತೆ ಶ್ರೀ ನಿರ್ಮಲಾನಂದ ಟ್ರಸ್ಟ್‌ಗೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

4. ಆದರೆ ಸರ್ಕಾರವು, ಶ್ರೀ ನಿರ್ಮಲಾನಂದ ಟ್ರಸ್ಟ್ (ರಿ) ರವರು ಸಾರ್ವಜನಿಕ ಸಹಯೋಗದಿಂದ ನಡೆಸುತ್ತಿರುವ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಪರಿಗಣಿಸಿ ಮತ್ತು ಸದರಿ ಟ್ರಸ್ಟ್ ಆರ್ಥಿಕವಾಗಿ ಹಿಂದುಳಿದಿರುವ ಕಾರಣಗಳಿಂದಾಗಿ ಸದರಿ ಜಮೀನನ್ನು ಸದರಿ ಟ್ರಸ್ಟ್ ರವರಿಗೆ ಅನಾಥಾಶ್ರಮ, ವೃದ್ಧಾಶ್ರಮ, ಉಚಿತ ಆರೋಗ್ಯ ಸೇವೆ, ಗೋಶಾಲೆ ಇತ್ಯಾದಿಗಳನ್ನು ನಡೆಸಲು ಜಮೀನಿನ ಮಾರ್ಗಸೂಚಿ ಬೆಲೆಯ ಶೇಕಡ 10 ರಷ್ಟು ದರ ವಿಧಿಸಿ ಮಂಜೂರು ಮಾಡಲು ತೀರ್ಮಾನಿಸಲಾಗಿರುವುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 708 ಎಲ್‌ಜಿಬಿ 2008, ಬೆಂಗಳೂರು, ದಿನಾಂಕ 2ನೇ ಜೂನ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೇಲೆ ಓದಲಾದ 4 ರಲ್ಲಿನ ದಿನಾಂಕ 18-05-2011 ರ ಆದೇಶವನ್ನು ರದ್ದುಪಡಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸ.ನಂ. 69ರಲ್ಲಿನ 1.35 ಎಕರೆ ಜಮೀನನ್ನು ಶ್ರೀ ನಿರ್ಮಲಾನಂದ ಟ್ರಸ್ಟ್ ಇವರಿಗೆ ಅನಾಥಾಶ್ರಮ, ವೃದ್ಧಾಶ್ರಮ, ಉಚಿತ ಆರೋಗ್ಯ ಸೇವೆ, ಗೋಶಾಲೆ ಇತ್ಯಾದಿಗಳನ್ನು ನಡೆಸುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27 ರಲ್ಲಿನ ಅಧಿಕಾರವನ್ನು ಚಲಾಯಿಸಿ ಸದರಿ ಜಮೀನಿನ ಮಾರ್ಗಸೂಚಿ ಬೆಲೆಯ ಶೇಕಡ 10 ರಷ್ಟನ್ನು ವಿಧಿಸಿ ಮಂಜೂರು ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 352 ವೆಚ್ಚ-7/2010, ದಿನಾಂಕ 27-04-2010 ರಲ್ಲಿ ಸಮಾಲೋಚಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಹೆಚ್.ಜಿ. ಲಕ್ಷ್ಮೀನಾರಾಯಣ,**
ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ.ಮಂ.)

ಪಿ.ಆರ್. 1440

## ಕಂದಾಯ ಸಚಿವಾಲಯ

**ವಿಷಯ :** ಶ್ರೀ ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ), ಬೆಂಗಳೂರು ಇವರಿಗೆ ಮಂಜೂರು ಮಾಡಿರುವ ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಅಬ್ಬೂರು ಗ್ರಾಮದ ಸ.ನಂ.67 ರಲ್ಲಿನ 10.00 ಎಕರೆ ಜಮೀನಿಗೆ ಭೂ ಪರಿವರ್ತನಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 503 ಎಲ್‌ಜಿಬಿ 2009, ದಿನಾಂಕ 05-01-2010.
2. ಟ್ರಸ್ಟಿ, ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ) ಇವರ ಪತ್ರ ದಿನಾಂಕ 03-01-2011 ಮತ್ತು 27-04-2010.
3. ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಪತ್ರ ಸಂಖ್ಯೆ : ರಾಜಿಕ/ಎಲ್ಎನ್‌ಡಿ/ಸಿಆರ್/190/ 07-08, ದಿನಾಂಕ 27-03-2010.

**ಪ್ರಸ್ತಾವನೆ :**

ಸಚಿವ ಸಂಪುಟವು ದಿನಾಂಕ 23-12-2009 ರಂದು ಕೈಗೊಂಡ ನಿರ್ಣಯದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 05-01-2010ರ ಸರ್ಕಾರದ ಆದೇಶದಲ್ಲಿ ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಅಬ್ಬೂರು ಗ್ರಾಮದ ಸ.ನಂ.67 ರಲ್ಲಿ 10 ಎಕರೆ ಜಮೀನನ್ನು ಮಾರುಕಟ್ಟೆ ಬೆಲೆ ಎಕರೆಯೊಂದಕ್ಕೆ ರೂ.65,000/- ಶೇ. 10 ರಷ್ಟು ದರ ವಾರ್ಷಿಕ ನೆಲಬಾಡಿಗೆ ನಿಗದಿಪಡಿಸಿರುವುದನ್ನು ಮಾರ್ಪಡಿಸಿ ಪ್ರಸ್ತುತ ಮಾರ್ಗಸೂಚಿ ಬೆಲೆಯ ಶೇ.30 ರಷ್ಟು ದರ ವಿಧಿಸಿ ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ) ಇವರಿಗೆ ಮಂಜೂರು ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

2. ಶ್ರೀ ನಾ. ದಿನೇಶ್ ಹೆಗ್ಡೆ, ಟ್ರಸ್ಟಿ, ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ) ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ 03-01-2011 ಮತ್ತು 27-04-2010ರ ಪತ್ರಗಳಲ್ಲಿ ಕ್ರಮವಾಗಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಹಾಗೂ ಮಾನ್ಯ ಕಂದಾಯ ಸಚಿವರಿಗೆ ಸಲ್ಲಿಸಿದ ಮನವಿಯಲ್ಲಿ ಸದರಿ ಸಂಸ್ಥೆಗೆ ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಅಬ್ಬೂರು ಗ್ರಾಮದ ಸ.ನಂ.67 ರಲ್ಲಿ 10 ಎಕರೆ ಜಮೀನನ್ನು ಶೈಕ್ಷಣಿಕ ಉದೇಶಕ್ಕಾಗಿ ಮಂಜೂರು ಮಾಡಲಾಗಿದ್ದು, ಈ ಸಂಬಂಧವಾಗಿ ಭೂ ಪರಿವರ್ತನಾ ಶುಲ್ಕ ರೂ.13,06,800/- ಗಳನ್ನು ಪಾವತಿಸುವಂತೆ ತಿಳಿಸಿದ್ದು, ಸದರಿ ಸಂಸ್ಥೆಯು ಅತಿ ಹಿಂದುಳಿದ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರದ ಯಾವುದೇ ಅನುದಾನವಿಲ್ಲದೆ ಕಡುಬಡ ಹೆಣ್ಣು ಮಕ್ಕಳ ಸಲುವಾಗಿ ಅತಿ ಕನಿಷ್ಠ ಶುಲ್ಕವನ್ನು ಪಡೆದು ಶಾಲೆಯನ್ನು ನಡೆಸುತ್ತಿದ್ದು, ಸದರಿ ಜಮೀನಿನಲ್ಲಿ ಶೈಕ್ಷಣಿಕ ಚಟುವಟಿಕೆಯ ಜೊತೆಗೆ ಸಂಬಂಧಪಟ್ಟ ಇನ್ನಿತರ ಚಟುವಟಿಕೆಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ನಡೆಸಲಾಗುತ್ತಿದ್ದು, ಯಾವುದೇ ಲಾಭದ ಉದ್ದೇಶ ಹೊಂದಿಲ್ಲದಿರುವುದರಿಂದ ಭೂ ಪರಿವರ್ತನಾ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.

3. ಈ ಬಗ್ಗೆ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ 27-03-2010ರ ಪತ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಅಬ್ಬೂರು ಗ್ರಾಮದ ಸ.ನಂ.67 ರಲ್ಲಿ 10 ಎಕರೆ ಜಮೀನನ್ನು ಶ್ರೀ ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ) ಇವರಿಗೆ ಮಂಜೂರು ಮಾಡಿದ್ದು, ವ್ಯವಸಾಯದ ಜಮೀನನ್ನು ವ್ಯವಸಾಯೇತರ ಶೈಕ್ಷಣಿಕ ಮತ್ತು

ಇತರೆ ಚಟುವಟಿಕೆಗಳಿಗೆ ಉಪಯೋಗಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಈ ಸಂಸ್ಥೆಗೆ ವಿಧಿಸಿರುವ ಭೂ ಪರಿವರ್ತನಾ ಶುಲ್ಕ ರೂ.13,06,800/– ಗಳನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿರ್ದೇಶನ ಕೋರಿರುತ್ತಾರೆ.

4. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108(1) ರನ್ವಯ ಸಂಸ್ಥೆಯು ಜಮೀನನ್ನು ಶಾಲಾ ಕಟ್ಟಡ ನಿರ್ಮಾಣಕ್ಕಾಗಿ, ಆಟದ ಮೈದಾನ, ರಸ್ತೆ, ಆಸ್ಪತ್ರೆ, ಚಿಕಿತ್ಸಾಲಯ ಅಥವಾ ವಿಶ್ರಾಂತಿ ಗೃಹಗಳ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದಿದ್ದಲ್ಲಿ ಹಾಗೂ ಇದರಿಂದ ಯಾವುದೇ ಆದಾಯವನ್ನು ಪಡೆಯದೇ ಇದ್ದಲ್ಲಿ ಅಂತಹ ಜಮೀನಿಗೆ ಭೂ ಪರಿವರ್ತನಾ ಶುಲ್ಕದಿಂದ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

5. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 407 ಎಲ್‌ಜಿಬಿ 2010, ಬೆಂಗಳೂರು, ದಿನಾಂಕ 13ನೇ ಮೇ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108 ರನ್ವಯ ಶ್ರೀ ವಿಶ್ವಚೇತನ ಕುವೆಂಪು ಆಧ್ಯಾತ್ಮಿಕ ಕೇಂದ್ರ (ರಿ), ಬೆಂಗಳೂರು ಇವರಿಗೆ ಮಂಜೂರು ಮಾಡಿರುವ ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಅಬ್ಬೂರು ಗ್ರಾಮದ ಸ.ನಂ.68 ರಲ್ಲಿನ 10.00 ಎಕರೆ ಜಮೀನಿಗೆ ವಿಧಿಸಲಾಗಿರುವ ಭೂ ಪರಿವರ್ತನಾ ಶುಲ್ಕ ರೂ.13,06,800/– ಗಳ (ಹದಿಮೂರು ಲಕ್ಷದ ಆರು ಸಾವಿರದ ಎಂಟುನೂರು ರೂ.ಗಳು ಮಾತ್ರ) ಪಾವತಿಯಿಂದ ವಿನಾಯಿತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಗೀತಾ ರಮೇಶ್,**
ಸರ್ಕಾರದ ಜಂಟಿ ಕಾರ್ಯದರ್ಶಿ,
ಕಂದಾಯ ಇಲಾಖೆ. (ಭೂ.ಮಂ., ಭೂ.ಕಂ. ಮತ್ತು ಸೇವೆಗಳು).

ಪಿ.ಆರ್. 1441

## ನಗರಾಭಿವೃದ್ಧಿ ಸಚಿವಾಲಯ

**ವಿಷಯ :** ಗುಲ್ಬರ್ಗಾ ತಾಲ್ಲೂಕಿನ ಕೊಟನೂರು ಡಿ ಗ್ರಾಮ ಸರ್ವೆ ನಂ. 76/3ರಲ್ಲಿ 4.00 ಎಕರೆ ಪ್ರದೇಶವನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವ ಕುರಿತು.

**ಓದಲಾಗಿದೆ :** 1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗುಲ್ಬರ್ಗಾ ಇವರ ಪತ್ರ ಸಂಖ್ಯೆ: ನಪ್ರಾಗು/ಭೂಸ್ವಾ/2010–11, ದಿನಾಂಕ: 04/11/2010.

2. ಜಿಲ್ಲಾಧಿಕಾರಿಗಳು ಗುಲ್ಬರ್ಗಾ ರವರ ಆದೇಶ ಸಂಖ್ಯೆ: ಕಂ/ಭೂಮಿ/ಕೃಯೇ/144/96–97, ದಿನಾಂಕ: 09/01/1999.

**ಪ್ರಸ್ತಾವನೆ :**

ಗುಲ್ಬರ್ಗಾ ತಾಲ್ಲೂಕಿನ ಕೊಟನೂರು 'ಡಿ' ಗ್ರಾಮ ಸರ್ವೆ ನಂ. 76/3ರಲ್ಲಿ 4.00 ಎಕರೆ ಪ್ರದೇಶವನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಭೂ ಮಾಲೀಕರಾದ ಡಾ: ಎಸ್.ಆರ್. ಉಮೇಶ್ ಮತ್ತು ಎಸ್. ಆರ್. ಮಹೇಶ್ ರವರುಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ಮೇಲೆ ಓದಲಾದ ಕ್ರಮಾಂಕ(1)ರ ಪತ್ರದಲ್ಲಿ ಆಯುಕ್ತರು, ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಇವರು ಸದರಿ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಸಾಮಾನ್ಯ ಭೂ ಸ್ವಾಧೀನ ಪ್ರಕ್ರಿಯೆಯಡಿ ಕಲಂ 4(1)ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಿ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು, ಗುಲ್ಬರ್ಗಾ ರವರನ್ನು ನೇಮಕ ಮಾಡಿ ಅದರನ್ವಯ ಭೂ ಸ್ವಾಧೀನ ಪ್ರಕ್ರಿಯೆ ಅಡಿ ಕಲಂ 5(ಎ)ರನ್ವಯ ಸರ್ಕಾರಕ್ಕೆ ವರದಿ ಸಲ್ಲಿಸಿ ಸರ್ಕಾರವು ಸದರಿ ವರದಿ ಆಧಾರದನ್ವಯ ಆದೇಶ ಸಂಖ್ಯೆ: ಕಂಇ/85/ಭೂಸ್ವಾಗು/2008, ದಿನಾಂಕ: 24/10/2008ರ ಮೂಲಕ ಕಲಂ 6(1)ರ ರೀತ್ಯಾ ಘೋಷಣೆ ಹೊರಡಿಸಿರುತ್ತದೆ. ಸದರಿ ಆದೇಶದನ್ವಯ ಪರಿಹಾರ ಧನವನ್ನು ಠೇವಣಿ ಮಾಡಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ/72/ಭೂಸ್ವಾಗು/2010, ದಿನಾಂಕ: 21/10/2010ರನ್ವಯ ಐತೀರ್ಪು ಅನುಮೋದಿಸಲಾಗಿದೆ.

ಆಯುಕ್ತರು ವರದಿಯಂತೆ ಸದರಿ ಜಮೀನು ಬೀಳು ಇದ್ದು, ಸರಕಾರಿ ಜಾಲಿ ಬೆಳೆದಿರುತ್ತದೆ. ಹೊಲದಲ್ಲಿ ಯಾವುದೇ ಬೆಳೆ ಇರುವುದಿಲ್ಲ ಮತ್ತು ಭೂ ಮಾಲೀಕರ ತಂದೆ ತಾಯಿಯವರ ಎರಡು ಸಮಾಧಿಗಳು ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ಜಮೀನಿನ ಸುತ್ತಲೂ ಇರುವ ಸರ್ವೆ ನಂ. 78 ರಲ್ಲಿ 9.18 ವಿಸ್ತೀರ್ಣ ಹಾಗೂ ಸರ್ವೆ ನಂ. 77ರಲ್ಲಿ 0.25 ಗುಂಟೆ ಮತ್ತು ಸರ್ವೆ ನಂ. 97ರಲ್ಲಿ 0.33 ಗುಂಟೆ ಹೀಗೆ ಒಟ್ಟು 10 ಎಕರೆ 26 ಗುಂಟೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನತೆಯಿಂದ ಕೈಬಿಟ್ಟು ಭೂಸ್ವಾಧೀನಾಧಿಕಾರಿಗಳು ರದ್ದತಿಯಾದ ಅಧಿಸೂಚನೆ ಹೊರಡಿಸಿರುತ್ತಾರೆ. ಸರ್ವೆ ನಂ. 76/1ರಲ್ಲಿ 3 ಎಕರೆ ಜಮೀನನ್ನು ಭೂಸ್ವಾಧೀನತೆಗಾಗಿ ಸೇರ್ಪಡೆಯಾಗಿರುವುದಿಲ್ಲ ಎಂದು ಸಹ ತಿಳಿಸಿರುತ್ತಾರೆ. ಸದರಿ ಜಮೀನಿನಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಭೂ ಸ್ವಾಧೀನಾಧಿಕಾರಿಗಳು ಸದರಿ ಜಮೀನನ್ನು ಸ್ವಾಧೀನ ಪಡಿಸಿಕೊಂಡು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಭೂ ಮಾಲೀಕರ ತಂದೆ ತಾಯಿಯವರ ಸಮಾಧಿ ಇರುವ ಪ್ರಯುಕ್ತ ಮತ್ತು ಮೇಲೆ ಓದಲಾದ ಕ್ರಮಾಂಕ(2)ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು ಗುಲ್ಬರ್ಗಾ ರವರು 1964ರ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 95(2) ಮತ್ತು (4)ರನ್ವಯ ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಕೃಷಿಯೇತರ ಜಮೀನೆಂದು ಪರಿವರ್ತಿಸಿಕೊಳ್ಳಲು ಮಂಜೂರಾತಿ ನೀಡಿರುತ್ತಾರೆ.

ಸರ್ಕಾರವು ಮೇಲಿನ ಪ್ರಸ್ತಾವನೆಯನ್ನು ಪರಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 148 ಗುಅಪ್ರಾ 2010 ಬೆಂಗಳೂರು, ದಿನಾಂಕ: 02/07/2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಸ್ವಾಧೀನ ಕಾಯ್ದೆ 1894ರ ಕಲಂ 48(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ:ಕಂಇ/85/ಭೂಸ್ವಾಗು/2008, ದಿನಾಂಕ: 24/10/2008ರ ಮೂಲಕ ಕಲಂ 6(1)ರಡಿಯಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲು ಗುಲ್ಬರ್ಗಾ ತಾಲ್ಲೂಕಿನ ಕೊಟನೂರು 'ಡಿ' ಗ್ರಾಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆಗಾಗಿ ಸುಮಾರು 157.10 ಎಕರೆ ಜಮೀನಿನ ಪೈಕಿ ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಕೊಟನೂರು 'ಡಿ' ಗ್ರಾಮದ ಸರ್ವೆ ನಂ. 76/3ರಲ್ಲಿ 4.00 ಎಕರೆ ಪ್ರದೇಶದ ಸುತ್ತಮುತ್ತಲೂ ಜಮೀನು ಭೂ ಸ್ವಾಧೀನದಿಂದ ಕೈಬಿಟ್ಟಿರುವುದರಿಂದ ಮತ್ತು ಭೂ ಮಾಲೀಕರ ತಂದೆ ತಾಯಿಯಂದಿರರ ಸಮಾಧಿ ಇರುವ ಪ್ರಯುಕ್ತ ಭಾವನಾತ್ಮಕ ಭಾವನೆಗಳಿಗೆ ಭಂಗ ಬಾರದೆಂಬ ಅಂಶಗಳನ್ನು ಪರಿಗಣಿಸಿ ಸದರಿ 4.00 ಎಕರೆ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಂ.ಎಂ. ಹಿರೇಮಠ**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. ನಂ: 1697